## ಅಧ್ಯಾಯ–೫

# ಕೈಗಾರಿಕೆಗಳು

ಮಂಡ್ಯ ಜಿಲ್ಲೆಯು ಕೈಗಾರಿಕಾ ಬೆಳವಣಿಗೆಯಲ್ಲಿ ಅಭಿವೃದ್ಧಿಶೀಲ ಜಿಲ್ಲೆಗಳ ಗುಂಪಿಗೆ ಸೇರಿರುವುದರಿಂದ, ಇಲ್ಲಿ ೧೯೯೬ ರಿಂದ ಪ್ರಾರಂಭಗೊಂಡಿರುವ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳು ರಾಜ್ಯ ಸರ್ಕಾರ ನಿಗದಿಪಡಿಸಿರುವ ಪ್ರೋತ್ಸಾಹಧನ ಮತ್ತು ರಿಯಾಯಿತಿ ಸೌಲಭ್ಯಗಳನ್ನು ಪಡೆದುಕೊಳ್ಳಬಹುದಾಗಿದೆ. ಜಿಲ್ಲೆಯಲ್ಲಿ ಈಗಾಗಲೇ ಸ್ಥಾಪಿತವಾಗಿರುವ ಕೈಗಾರಿಕೆಗಳ ವಿಸ್ತರಣೆ, ವಿದ್ಯುದ್ದೀಕರಣ, ಆಧುನೀಕರಣ ಮೊದಲಾದವುಗಳಿಗೋಸ್ಕರ ಹೂಡುವ ಬಂಡವಾಳಗಳಿಗೆ ಸಹಾಯಧನ ದೊರಕುತ್ತದೆ. ಇಲ್ಲಿನ ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳ ಉತ್ಪನ್ನಗಳು ಮಾರಾಟ ತೆರಿಗೆಯ ವಿನಾಯಿತಿ ಸೌಲಭ್ಯವನ್ನು ಪಡೆದುಕೊಳ್ಳಲು ಅನುಕೂಲ ಕಲ್ಪಿಸಲಾಗಿದೆ. ಜಿಲ್ಲೆಯಲ್ಲಿ ೧೦೦ ಕೋಟಿಗಳಿಗಿಂತಲೂ ಹೆಚ್ಚು ಬಂಡವಾಳ ತೊಡಗಿಸುವ ಬೃಹತ್ ಕೈಗಾರಿಕೆಗಳಿಗೆ ಮತ್ತು ಪ್ರತಿಶತ ೧೦೦ರಷ್ಟು ರಫ್ತು ಆಧಾರಿತ ಕೈಗಾರಿಕೆಗಳಿಗೆ ವಿಶೇಷ ಉತ್ತೇಜನ ಸೌಲಭ್ಯ ದೊರಕುತ್ತದೆ. ಜಿಲ್ಲೆಯು ಕೃಷಿ ಪ್ರಧಾನವಾಗಿರುವುದರಿಂದ, ಕೃಷಿ ಉತ್ಪನ್ನವನ್ನಾಧರಿಸಿದ ಕೈಗಾರಿಕೆಗಳಾದ ಅಕ್ಕಿಗಿರಣಿ, ಬೆಲ್ಲತಯಾರಿಸುವ ಆಲೆಮನೆ, ಸಕ್ಕರೆ ಕಾರ್ಖಾನೆ, ಎಣ್ಣೆ ಗಿರಣಿ, ಮೊದಲಾದವು ಪ್ರಾರಂಭಿಸಲ್ಪಟ್ಟಿವೆ. ಮೈಸೂರು ಸಕ್ಕರೆ ಕಂಪನಿ ಮತ್ತು ಇತರೆ ಸಕ್ಕರೆ ಕಾರ್ಖಾನೆಗಳು ಅರೆದ ಕಬ್ಬಿನಸಿಪ್ಪೆಯನ್ನು ಕಚ್ಚಾ ಸರಕಾಗಿ ಉಪಯೋಗಿಸಿಕೊಂಡು ಕಾಗದವನ್ನು ತಯಾರಿಸುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟಿದ್ದ ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್ ಪ್ರಸ್ತುತ ಮುಚ್ಚಲ್ಪಟ್ಟಿದೆ. ಸಕ್ಕರೆಯನ್ನು ತಯಾರಿಸುವಾಗ ಹೊರಬರುವ ಕಾಕಂಬಿಯನ್ನು ಉಪಯೋಗಿಸಿಕೊಳ್ಳುವ ಸಲುವಾಗಿ ಭಟ್ಟಿ ಇಳಿಸುವ ಕಾರ್ಖಾನೆಗಳು ಹುಟ್ಟಿಕೊಂಡವು. ಕಾರ್ಖಾನೆಗಳ ಬೆಳವಣಿಗೆಗೆ ಪೂರಕವಾದ ಖನಿಜ ಸಂಪತ್ತಾಗಲಿ ಅಥವಾ ಅರಣ್ಯ ಸಂಪತ್ತಾಗಲಿ ಜಿಲ್ಲೆಯಲ್ಲಿ ಲಭ್ಯವಿರುವುದಿಲ್ಲ. ಇಲ್ಲಿನ ಬಹುಸಂಖ್ಯಾತ ಸಣ್ಣ ಪ್ರಮಾಣದ ಕೈಗಾರಿಕೆಗಳು ಗ್ರಾಹಕರ ಬೇಡಿಕೆಯನ್ನು ಆಧರಿಸಿ ಸರಕನ್ನು ಉತ್ಪಾದಿಸುವ ಮಟ್ಟದಲ್ಲಿವೆಯೇ ಹೊರತು, ಸ್ವತಂತ್ರವಾಗಿ ಮಾರುಕಟ್ಟೆಯ ಸೌಲಭ್ಯವನ್ನು ಕಂಡುಕೊಂಡಿರುವುದಿಲ್ಲ. ಜಿಲ್ಲಾ ಕೈಗಾರಿಕಾ ಬೆಳವಣಿಗೆಗೆ ಅತ್ಯಾವಶ್ಯಕವಾದ ಆಂತರಿಕ ಸಾಧನ ಸೌಲಭ್ಯಗಳಾದ ಸಾರಿಗೆ, ಸಂಪರ್ಕ, ಹಣಕಾಸು, ವಿದ್ಯುಚ್ಛಕ್ತಿ, ಕೈಗಾರಿಕಾ

ವಸಾಹತು, ಕೈಗಾರಿಕಾ ಕ್ಷೇತ್ರ (ಏರಿಯಾ), ಕೈಗಾರಿಕಾ ತರಬೇತಿ, ಮೊದಲಾದವುಗಳ ಕೊರತೆ ಇರುವುದಿಲ್ಲ. ಜಿಲ್ಲೆಯಲ್ಲಿ ಪ್ರಮುಖ ಉತ್ಪಾದನಾಂಗಗಳಾದ ಭೂಮಿ, ಶ್ರಮ, ಬಂಡವಾಳಗಳ ಕೊರತೆ ಕಂಡುಬರುವುದಿಲ್ಲ.

## ಪ್ರಾಚೀನ ಕೈಗಾರಿಕೆಗಳು

ಆಧುನಿಕ ಕೈಗಾರಿಕೆಗಳು ಪ್ರಾರಂಭಗೊಳ್ಳುವ ಮುನ್ನ ಜಿಲ್ಲೆಯ ಕೆಲವು ಸ್ಥಳಗಳಲ್ಲಿ ಸಣ್ಣ ಕೈಗಾರಿಕೆಗಳ ಉತ್ಪಾದನೆಗಳಾದ ಹತ್ತಿ ಬಟ್ಟೆ, ದುಪಟಿ, ಹಿತ್ತಾಳೆ ಪಾತ್ರೆ, ಮಡಕೆ, ಬೆಲ್ಲ ಮೊದಲಾದವು ಪ್ರಖ್ಯಾತಿ ಪಡೆದಿದ್ದವು. ಶ್ರೀರಂಗಪಟ್ಟಣ ತಾಲೂಕಿನ ಗಂಜಾಂ ಒಂದು ಕಾಲದಲ್ಲಿ ಕೈಗಾರಿಕಾ ಕೇಂದ್ರವಾಗಿದ್ದು, ಉತ್ತಮ ಗುಣಮಟ್ಟದ ಬಟ್ಟೆ ತಯಾರಿಕೆಗೆ ಹೆಸರುವಾಸಿಯಾಗಿತ್ತು. ಟಿಪ್ಪುಸುಲ್ತಾನನಿಂದ ನಿರ್ಮಾಣಗೊಂಡ ಈ ಕೇಂದ್ರಕ್ಕೆ, ತುಮಕೂರು ಜಿಲ್ಲೆಯ ಶಿರಾದಿಂದ ಹನ್ನೆರಡು ಸಾವಿರ ಕೈಗಾರಿಕಾ ಕುಶಲಕರ್ಮಿಗಳನ್ನು ಕರೆಸಿ ಈ ಸ್ಥಳದಲ್ಲಿ ನೆಲೆಸುವಂತೆ ಸುಲ್ತಾನನು ಮಾಡಿದನೆನ್ನುವ ಮಾತು ಪ್ರಚಲಿತವಾಗಿದೆ. ಈ ಕೇಂದ್ರದಲ್ಲಿ ಕಾಗದವನ್ನೂ ಸಹ ಉತ್ಪಾದಿಸಲಾಗುತ್ತಿತ್ತು. ಕಾಗದ ತಯಾರಿಕೆಗೆ ಅವಶ್ಯಕವಾಗಿ ಬೇಕಾಗುವ ಸೋಡ ಮತ್ತು ಸುಣ್ಣ ಈ ಪ್ರದೇಶದ ಸುತ್ತಮುತ್ತ ಹೇರಳವಾಗಿ ದೊರಕುತ್ತಿದ್ದುದರಿಂದ, ಆ ಕೈಗಾರಿಕೆ ಇಲ್ಲಿ ಕೇಂದ್ರೀಕೃತಗೊಂಡಿರಲು ಸಾಧ್ಯವಾಗಿರುವುದೆಂದು ಹಯವದನರಾವ್‌ರವರು ಅಭಿಪ್ರಾಯಪಟ್ಟಿರುವರು. ಜಿಲ್ಲೆಯಲ್ಲಿ ಸಂಗೀತ ವಾದ್ಯಗಳಿಗೆ ಉಪಯೋಗಿಸುವ ತಂತಿಯನ್ನು ತಯಾರಿಸಲಾಗುತ್ತಿತ್ತೆಂದೂ, ಅದನ್ನು ತಯಾರಿಸಲು ಸ್ಥಳೀಯವಾಗಿ ದೊರಕುವ ಉತ್ತಮ ಗುಣಮಟ್ಟದ ಸ್ಟೀಲನ್ನು ಉಪಯೋಗಿಸಲಾಗುತ್ತಿತ್ತೆಂದೂ ಡಾ.ಆರ್.ಬಾಲಕೃಷ್ಣರವರು ತಮ್ಮ 'ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಆಫ್ ಮೈಸೂರು' ಗ್ರಂಥದಲ್ಲಿ ತಿಳಿಸಿರುವರು. ಸ್ಥಳೀಯವಾಗಿ ತಯಾರಿಸುತ್ತಿದ್ದ ತಂತಿಗಳ ಬೇಡಿಕೆ ಕಡಿಮೆಯಾದುದರಿಂದ ಮತ್ತು ತಂತಿಯನ್ನು ತಯಾರಿಸಲು ಉಪಯೋಗಿಸುತ್ತಿದ್ದ ಉತ್ತಮ ಗುಣಮಟ್ಟದ ಸ್ಟೀಲ್‌ನ ಕೊರತೆಯುಂಟಾದುದರಿಂದ, ಸ್ಥಳೀಯವಾಗಿ ತಯಾರಿಸುತ್ತಿದ್ದ ಉತ್ತಮ ಗುಣಮಟ್ಟದ ಸ್ಟೀಲ್ ಹಾಗೂ ಅದನ್ನು ತಯಾರಿಸುವ ಪರಿಣತಿಗಳೆರಡೂ ಕಣ್ಮರೆಯಾದವೆಂದೂ ಹಯವದನರಾವ್‌ರವರು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮುಖ್ಯ ಕಮೀಷನರ್ ಆಗಿದ್ದ ಸರ್ ಮಾರ್ಕ್ ಕಬ್ಬನ್ ಅವರ ಬೆಂಬಲದಿಂದ ಅಷ್ಟಗ್ರಾಮ ಷುಗರ್ ವರ್ಕ್ಸ್ ೧೮೪೭ರಲ್ಲಿ ಶ್ರೀರಂಗಪಟ್ಟಣದ ಸಮೀಪವಿರುವ ಪಾಲಹಳ್ಳಿಯಲ್ಲಿ ಸ್ಥಾಪನೆಗೊಂಡಿತ್ತು. ಇದು ಜಿಲ್ಲೆಯ ಹಳೆಯ ಕೈಗಾರಿಕೆಗಳಲ್ಲಿ ಒಂದಾಗಿದ್ದು, ಸುತ್ತಮುತ್ತಲಿನ ಭೂಮಿ ಅಭಿವೃದ್ಧಿಗೊಳ್ಳುವಂತೆ ಮಾಡಿದುದೇ ಅಲ್ಲದೇ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿಕೊಟ್ಟಿತ್ತು. ಇದರ ಅಕ್ಕಪಕ್ಕದ ತಾಲೂಕಿನ ರೈತರು ತಾವು ಬೆಳೆದ ಕಬ್ಬನ್ನು ಬೆಲ್ಲ ತಯಾರಿಸಲು ಕೊಡದೆ ನೇರವಾಗಿ ಸಕ್ಕರೆ ಕಾರ್ಖಾನೆಗೆ ಸರಬರಾಜು ಮಾಡಲು ಪ್ರಾರಂಭಿಸಿದರು. ಇದರಿಂದ ಅವರ ಆದಾಯದ ಮಟ್ಟ ಹೆಚ್ಚಳಗೊಂಡಿತು. ಈ ಕಾರ್ಖಾನೆಯಲ್ಲಿ ಉತ್ಪಾದಿಸುತ್ತಿದ್ದ ಅತ್ಯುತ್ತಮ ಗುಣಮಟ್ಟದ ಹರಳು ಸಕ್ಕರೆ ಪ್ರಪಂಚದಾದ್ಯಂತ ಪ್ರಖ್ಯಾತಿ ಹೊಂದಿದ್ದುದೇ ಅಲ್ಲದೆ, ೧೮೫೧ ಮತ್ತು ೧೮೬೧ರಲ್ಲಿ ಲಂಡನ್ನಿನಲ್ಲಿ ನಡೆದ ವಸ್ತುಪ್ರದರ್ಶನದಲ್ಲಿ ಬಹುಮಾನ ಮತ್ತು ಪ್ರಶಸ್ತಿ ಪತ್ರ ಪಡೆದಿತ್ತು. ೧೮೬೭ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಅಂತರಾಷ್ಟ್ರೀಯ ವಸ್ತುಪ್ರದರ್ಶನದಲ್ಲಿ ಈ ಕಾರ್ಖಾನೆಗೆ ಗೌರವ ಪ್ರಶಸ್ತಿ ದೊರಕಿತ್ತು. ಈ ಹೆಗ್ಗಳಿಕೆ ಇದ್ದೂ ಭಟ್ಟಿ ಇಳಿಸುವ ಪರವಾನಗಿ ದೊರಕಿದ್ದರೂ ದುರದೃಷ್ಟವಶಾತ್ ಈ ಕಾರ್ಖಾನೆಯು ೧೮೯೪ರಲ್ಲಿ ಕಾರಣಾಂತರದಿಂದ ಮುಚ್ಚಲ್ಪಟ್ಟಿತು. ಕೊಡಿಯಾಲವು ಕಲ್ಲುಸಕ್ಕರೆ ತಯಾರಿಕೆಗೆ ಪ್ರಸಿದ್ಧವಾಗಿತ್ತು.

ಹಿತ್ತಾಳೆ ಮತ್ತು ಸ್ಟೀಲ್‌ಗಳಿಂದ ದೀಪಾಲೆಕಂಬ, ದೇವರವಿಗ್ರಹ, ಪಾತ್ರೆ ಮೊದಲಾದವು ನಾಗಮಂಗಲದಲ್ಲಿ ತಯಾರಾಗುತ್ತಿದ್ದವು. ಸ್ಥಳೀಯ ಬೇಡಿಕೆ ಇದರ ಬೆಳವಣಿಗೆಗೆ ಬೆಂಬಲವನ್ನೂ ಒದಗಿಸಿತ್ತು. ಈ ಉದ್ಯಮ ೧೯೧೪ರಲ್ಲಿ ಮುಚ್ಚುವ ಸ್ಥಿತಿಗೆ ಬಂದಿತೆಂದು ವಿ.ಎಸ್.ಸಾಂಬಶಿವಅಯ್ಯರ್ ಅಭಿಪ್ರಾಯ ವ್ಯಕ್ತಪಡಿಸಿರುವರು. ಇಲ್ಲಿ

ತಯಾರಿಸುವ ಸರಕಿಗೆ ಪೈಪೋಟಿಯಾಗಿ ಕಡಿಮೆ ಬೆಲೆಯ ಅಲ್ಯುಮಿನಿಯಂ ಮತ್ತು ಕಲಾಯಿ ಮಾಡಿದ ಪಾತ್ರೆಗಳು ಮಾರುಕಟ್ಟೆಗೆ ಬಂದುದರಿಂದ ಈ ಉದ್ಯಮ ಮುಚ್ಚಲ್ಪಟ್ಟಿರುವುದೆಂದು ಡಾ.ಆರ್.ಬಾಲಕೃಷ್ಣ ಅಭಿಪ್ರಾಯಪಟ್ಟಿರುವರು. ಪಾತ್ರೆಗಳ ಮೇಲೆ ಕುಸುರಿ ಕೆತ್ತನೆ ಕೆಲಸ ಮಾಡುವವರು ಮತ್ತು ಬೀಟೆ ಮರದಿಂದ ತಯಾರಿಸಿದ ಉಪಕರಣಗಳಿಗೆ ದಂತದ ಕುಸುರಿ ಕೆಲಸ ಮಾಡುವವರು ಜಿಲ್ಲೆಯಲ್ಲಿದ್ದುದು ತಿಳಿದುಬರುತ್ತದೆ.

ಶ್ರೀರಂಗಪಟ್ಟಣ ತಾಲೂಕಿನ ಗಂಜಾಂ ಮತ್ತು ಕೃಷ್ಣರಾಜಪೇಟೆ ತಾಲೂಕಿನ ಸಿಂಧಘಟ್ಟ ರೇಷ್ಮೆ ಬಟ್ಟೆ ತಯಾರಿಕೆಗೆ ಬಹಳ ಹಿಂದಿನಿಂದಲೂ ಪ್ರಸಿದ್ಧಿ ಪಡೆದಿದ್ದವು. ಮಂಡ್ಯದಲ್ಲಿ ರೇಷ್ಮೆ ಹುಳುಗಳನ್ನು ಅಧಿಕ ಪ್ರಮಾಣದಲ್ಲಿ ಸಾಕುತ್ತಿದ್ದು, ಇಲ್ಲಿ ದೊರಕಿದ ರೇಷ್ಮೆ ಗೂಡನ್ನು ನೂಲು ತಯಾರಿಕೆಗಾಗಿ ಚನ್ನಪಟ್ಟಣಕ್ಕೆ ಕಳುಹಿಸುತ್ತಿದ್ದುದು ಬಹಳ ಹಿಂದಿನಿಂದಲೂ ನಡೆದು ಬಂದಿತ್ತು. ಅಕ್ಕಪಕ್ಕದ ತಾಲೂಕಿಗಳಿಂದ ಬಂದ ಕಚ್ಚಾರೇಷ್ಮೆಯಿಂದ ನೂಲು ತಯಾರಿಸುವುದು, ಬಣ್ಣ ಹಚ್ಚುವುದು ಮತ್ತು ಬಟ್ಟೆ ನೇಯುವ ಕಾರ್ಯ ಸಿಂಧಘಟ್ಟದಲ್ಲಿ ನಡೆಯುತ್ತಿತ್ತು. ಮಂಡ್ಯವು ಉತ್ತಮ ಗುಣಮಟ್ಟದ ಕಂಬಳಿ ತಯಾರಿಕೆಗೂ ಮತ್ತು ಮೇಲುಕೋಟೆಯು ಪಂಚೆ ತಯಾರಿಕೆಗೂ ಪ್ರಸಿದ್ಧವಾಗಿದ್ದವು. ಮಂಡ್ಯದಲ್ಲಿ ಎರಡು ವಿದ್ಯುತ್ ಘಟಕಗಳು ಆರ್.ಸಿ.ಸಿ ವಿದ್ಯುತ್ ಕಂಬಗಳನ್ನು ತಯಾರಿಸುವ ಕಾರ್ಯನಿರ್ವಹಿಸುತ್ತಿದ್ದವು. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಅಕ್ಕಿಗಿರಣಿಗಳಿದ್ದವು. ಇಲ್ಲಿನ ಗ್ರಾಮೋದ್ಯೋಗ ಮತ್ತು ಗೃಹಕೈಗಾರಿಕೆಗಳ ವ್ಯಾಪ್ತಿಯಲ್ಲಿ ಹತ್ತಿ, ನೇಯ್ಗೆ, ಕಂಬಳಿ ತಯಾರಿಕೆ, ರೇಷ್ಮೆ ನೇಯ್ಗೆ, ಎಣ್ಣೆಗಾಣ, ಮಡಕೆ ತಯಾರಿಕೆ, ಬುಟ್ಟಿ ಹೆಣೆಯುವುದು, ಚಿನ್ನ ಬೆಳ್ಳಿ ಕೆಲಸ, ಕುಲುಮೆ ಕೆಲಸ, ಮರಗೆಲಸ, ಚಾಪೆ ಹೆಣೆಯುವುದು, ಚರ್ಮದ ಕೆಲಸ, ಮೊದಲಾದವು ಬಹಳ ಹಿಂದಿನಿಂದಲೂ ಪ್ರಚಲಿತದಲ್ಲಿದ್ದವು. ಜಿಲ್ಲೆಯಲ್ಲಿ ಬೆಲ್ಲ ತಯಾರಿಸುವ ಆಲೆಮನೆಗಳು ಅಧಿಕವಾಗಿದ್ದವು. ಮದ್ದೂರು ಸುತ್ತಮುತ್ತ ಬೆಲ್ಲ ತಯಾರಿಸುವ ಆಲೆಮನೆಗಳನ್ನು ನೋಡಿರುವುದಾಗಿ ಬುಕನನ್ ತನ್ನ ಪ್ರವಾಸ ಕಥನದಲ್ಲಿ ತಿಳಿಸಿರುವನು.

## ಆಧುನಿಕ ಕೈಗಾರಿಕೆಗಳು

ಟಿಪ್ಪು ಸುಲ್ತಾನ್ ಆಧುನಿಕ ಕೈಗಾರಿಕೆಗಳಾದ ಸಕ್ಕರೆ, ರೇಷ್ಮೆ, ಗಾಜು ಮೊದಲಾದವುಗಳ ಬೆಳವಣಿಗೆಗೆ ವಿಶೇಷ ಪ್ರಯತ್ನಪಟ್ಟಿದ್ದನೆಂದೂ, ಸಕ್ಕರೆ ತಯಾರಿಸುವ ತಂತ್ರಜ್ಞಾನವನ್ನು ಚೀನಾದಿಂದಲೂ, ರೇಷ್ಮೆ ತಯಾರಿಕೆಯನ್ನು ಬಂಗಾಳದಿಂದಲೂ ಪಡೆದಿದ್ದನೆಂದು ಬುಕನನ್ ತನ್ನ ಪ್ರವಾಸ ಕಥನದಲ್ಲಿ ತಿಳಿಸಿರುವನು. ರೈಲುಸಾರಿಗೆ ಸೌಲಭ್ಯ ಮತ್ತು ೧೯೦೨ರಲ್ಲಿ ಜಿಲ್ಲೆಯಲ್ಲಿ ಕಾರ್ಯಾರಂಭಗೊಂಡ ಶಿವಸಮುದ್ರ ಜಲವಿದ್ಯುತ್ ಯೋಜನೆಯು ಆಧುನಿಕ ಕೈಗಾರಿಕಾ ಬೆಳವಣಿಗೆಗೆ ಪೂರಕವಾಗಿದ್ದುವು. ಮಂಡ್ಯದಲ್ಲಿ ೧೯೩೩ರಲ್ಲಿ ಮೈಸೂರು ಸಕ್ಕರೆ ಕಂಪೆನಿಯು ಆರಂಭಗೊಂಡಂದಿನಿಂದ ಬೃಹತ್ ಮತ್ತು ಆಧುನಿಕ ಕೈಗಾರಿಕಾ ಕಾರ್ಯವೂ ಆರಂಭಗೊಂಡಂತಾಯಿತು. ಈ ಕಂಪೆನಿಯು ತನ್ನ ಕಾರ್ಯವ್ಯಾಪ್ತಿಯನ್ನು ಕೇವಲ ಸಕ್ಕರೆ ತಯಾರಿಕೆಗೆ ಸೀಮಿತಗೊಳಿಸದೆ, ಸಕ್ಕರೆ ಕಾರ್ಖಾನೆಗಳಲ್ಲಿ ದೊರಕುವ ಕಾಕಂಬಿಯನ್ನು ಉಪಯೋಗಿಸಿಕೊಳ್ಳಲು ಡಿಸ್ಟಿಲರಿಯನ್ನು ತೆರೆದು, ಮಾದಕ ಪಾನೀಯಗಳಾದ ಬ್ರಾಂದಿ, ವಿಸ್ಕಿ, ಜಿನ್ ಮತ್ತು ರಮ್‌ಗಳನ್ನು ತಯಾರಿಸುತ್ತಿದೆ. ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಕಂಪೆನಿಗೆ ಕಚ್ಚಾ ಸರಕಾಗಿರುವ ಅಸಿಟಿಕ್ ಆಸಿಡ್ ಅನ್ನೂ ಇದು ತಯಾರಿಸಿ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿತ್ತು. ಈ ಕಂಪೆನಿಯ ಕಾರ್ಖಾನೆಯಿಂದ ಹೊರಬರುತ್ತಿರುವ ಕಚ್ಚಾ ಸರಕನ್ನು ಪೂರ್ಣ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳುವ ಸಲುವಾಗಿ ಪ್ರಾರಂಭಗೊಂಡ ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್ ಮತ್ತು ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಕಂಪೆನಿಗಳು ಸರಕಾರಿ ವಲಯಕ್ಕೆ ಸೇರಿದ ಕಾರ್ಖಾನೆಗಳಾಗಿವೆ. ಪ್ರಸ್ತುತ ಇವುಗಳ ಉತ್ಪಾದನಾ ಕಾರ್ಯ ಸ್ಥಗಿತಗೊಂಡಿದೆ. ಜಿಲ್ಲೆಯ ಆಧುನಿಕ ಕೈಗಾರಿಕೆಗಳ ವ್ಯಾಪ್ತಿಯಲ್ಲಿ ಬಿ.ಪಿ.ಎಲ್., ಪಿ.ಟಿ.ಐ.(ಲಿ.), ಚಾಮುಂಡೇಶ್ವರಿ

ಷುಗರ್ಸ್ (ಲಿ.,), ಐ. ಸಿ. ಎಲ್. ಷುಗರ್ಸ್ (ಲಿ.,), ಹಬೀಬ್ ಸಾಲ್ವೆಂಟ್ಸ್, ಕೀಲಾರ ಪವರ್ ಪ್ರಾಜೆಕ್ಟ್. ಗ್ಯಾಮನ್ ಫರ್‌ಕೆಮ್ಸ್ ಇಂಡಿಯಾ (ಲಿ.,) ಕರ್ನಾಟಕ ಮಲ್ಲಾದಿ ಬಯೋಟೆಕ್ಸ್ (ಲಿ.,) ಮುಂತಾದವು ಖಾಸಗಿ ವಲಯದ ಕಾರ್ಖಾನೆಗಳಾಗಿವೆ. ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ಮತ್ತು ಹೈನುಗಾರಿಕೆ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಗೆಜ್ಜಲಗೆರೆ, ಇವು ಜಿಲ್ಲೆಯ ಸಹಕಾರಿ ಕ್ಷೇತ್ರದ ಆಧುನಿಕ ಕೈಗಾರಿಕೆಗಳಾಗಿವೆ. ಮಂಡ್ಯ ಜಿಲ್ಲೆಯಲ್ಲಿ ಭತ್ತವನ್ನು ವಿಶಾಲ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದರೂ, ಉತ್ತಮ ಅಕ್ಕಿ ಗಿರಣಿಗಳಿರಲಿಲ್ಲ. ಸಣ್ಣ ಪ್ರಮಾಣದ ಅಕ್ಕಿ ಗಿರಣಿಗಳು ಈ ಕಾರ್ಯವನ್ನು ನಿರ್ವಹಿಸುತ್ತಿದ್ದವು. ಫೋರ್ಡ್ ಫೌಂಡೇಷನ್‌ನಿಂದ ನಿಯೋಜಿಸಲ್ಪಟ್ಟ ಪರಿಣತರ ತಂಡ ರಾಷ್ಟ್ರಾದ್ಯಂತ ಇರುವ ಅಕ್ಕಿಗಿರಣಿಗಳ ತಪಾಸಣೆ ಹಾಗೂ ಅಧ್ಯಯನ ನಡೆಸಿ ಅವುಗಳ ನಿರ್ವಹಣೆಗೆ ಅವಶ್ಯಕವಾದ ಭತ್ತ ಸಂಗ್ರಹಣೆ, ಸಾಗಣೆ, ಮಿಲ್ಲಿಂಗ್, ಮಾರಾಟ, ಮೊದಲಾದವುಗಳಲ್ಲಿದ್ದ ಅನೇಕ ದೋಷಗಳನ್ನು ಗಮನಿಸಿ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿತು. ಇದರ ಪರಿಣಾಮವಾಗಿ ಸರ್ಕಾರವು ಹೆಚ್ಚು ಭತ್ತವನ್ನು ಬೆಳೆಯುವ ಪ್ರದೇಶಗಳಿಗಾಗಿ ಆರು ಆಧುನಿಕ ಅಕ್ಕಿಗಿರಣಿಗಳನ್ನು ಪ್ರಾರಂಭಿಸಲು ತೀರ್ಮಾನಿಸಿ, ಆ ಪೈಕಿ ಗಂಟೆ ಒಂದಕ್ಕೆ ಎರಡು ಟನ್ ಭತ್ತವನ್ನು ಅಕ್ಕಿ ಮಾಡುವ ಸಾಮರ್ಥ್ಯವಿರುವ ಒಂದು ಗಿರಣಿಯನ್ನು ಮಂಡ್ಯಕ್ಕೆ ಮಂಜೂರು ಮಾಡಿತು. ಮಂಡ್ಯದ ಕೃಷಿ ಉತ್ಪಾದನಾ ಸಹಕಾರ ಮಾರುಕಟ್ಟೆ ಸಂಘ. ನಿ., ಈ ಆಧುನಿಕ ಅಕ್ಕಿಗಿರಣಿಯ ಸ್ಥಾಪನಾ ಕಾರ್ಯನಿರ್ವಹಿಸಿತು. ರಾಜ್ಯ ಸರ್ಕಾರವು ಈಗಾಗಲೇ ಕಾರ್ಯಾರಂಭಗೊಂಡಿದ್ದ ಘಟಕದ ಜೊತೆಗೆ ಗಂಟೆಯೊಂದಕ್ಕೆ ಒಂದು ಟನ್ ಭತ್ತವನ್ನು ಅಕ್ಕಿ ಮಾಡುವ ಸಾಮರ್ಥ್ಯವಿರುವ ಮತ್ತೊಂದು ಘಟಕವನ್ನು ಜೋಡಿಸಲು ೧೫.೨೫ ಲಕ್ಷ ರೂ.ಗಳನ್ನು ಮಂಜೂರು ಮಾಡಿತು. ಜಪಾನಿನ ಸಟಕೆ ಮಿಲ್‌ನ ಗಂಟೆ ಒಂದಕ್ಕೆ ೧.೨ ಟನ್ ಮಿಲ್ ಮಾಡುವ ಸಾಮರ್ಥ್ಯವಿರುವ ಆಧುನಿಕ ಯಂತ್ರವನ್ನು ಈ ಮಿಲ್ಲಿನ ಆವರಣದಲ್ಲಿ ೧೯೬೫ ಮೇ ೨೦ ರಂದು ಉದ್ಘಾಟಿಸಲಾಯಿತು. ಈ ಗಿರಣಿಯು ಭತ್ತ ಪೂರೈಕೆಯ ಎಲಿವೇಟರ್ ಜೊತೆಗೆ ಭತ್ತವನ್ನು ಸ್ವಚ್ಛಗೊಳಿಸುವುದು, ಹೊಟ್ಟನ್ನು ಬೇರ್ಪಡಿಸುವುದು, ಭತ್ತವನ್ನು ಅಕ್ಕಿಯಿಂದ ವಿಂಗಡಿಸಿ ತೆಗೆಯುವುದು, ಅಕ್ಕಿಯನ್ನು ಬಿಳಿಯಾಗಿಸುವುದು, ಅಕ್ಕಿಯ ಗುಣಮಟ್ಟವನ್ನು ನಿಗದಿಪಡಿಸುವುದು, ಹೊಟ್ಟನ್ನು ಸಂಗ್ರಹಿಸುವುದು, ಹೊರಹಾಕುವುದು, ಮೊದಲಾದ ಕಾರ್ಯವಿಭಾಗಗಳನ್ನು ಹೊಂದಿತ್ತು.

ತಂಬಾಕು ಸಂಸ್ಕರಣಾ (ಟೊಬ್ಯಾಕೋ ಕ್ಯೂರಿಂಗ್) ಘಟಕವು ೧೯೩೦ರಲ್ಲಿ ಮಂಡ್ಯದಲ್ಲಿ ಪ್ರಾರಂಭಗೊಂಡಿತು. ಈಗ ಇದು ಮುಚ್ಚಲ್ಪಟ್ಟಿದೆ. ಮೈಸೂರು ಕೆಮಿಕಲ್ಸ್ ಮ್ಯಾನುಫ್ಯಾಕ್ಚರರ್ಸ್ ಕಂಪೆನಿ ಲಿ., ೧೯೩೮ರಲ್ಲಿ ನೋಂದಣಿಗೊಂಡಿದ್ದು, ಇದರ ಆಡಳಿತ ಕಚೇರಿಯು ಬೆಂಗಳೂರು ಜಿಲ್ಲೆಯ ಚಿಕ್ಕ ಬಾಣವರ ಸಮೀಪವಿರುವ ತರಬನಹಳ್ಳಿಯಲ್ಲಿದೆ. ಈ ಕಂಪೆನಿಯು ತಾಮ್ರದ ಸಲ್ಫೇಟ್, ಅಲ್ಯುಮಿನಿಯಂ ಸಲ್ಫೇಟ್ ಮತ್ತು ಆಲಮ್ ಅನ್ನು ಉತ್ಪಾದಿಸುವ ಸಲುವಾಗಿ ಎರಡು ಕಾರ್ಖಾನೆಗಳನ್ನು ಸ್ಥಾಪಿಸಿತು. ಇವುಗಳಲ್ಲಿ ಒಂದು ತರಬನಹಳ್ಳಿಯಲ್ಲೂ, ಮತ್ತೊಂದು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳದಲ್ಲಿಯೂ ಅನುಕ್ರಮವಾಗಿ ೧೯೪೦ ಮತ್ತು ೧೯೪೧ರಲ್ಲಿ ಸ್ಥಾಪಿಸಲ್ಪಟ್ಟವು. ತಾಮ್ರದ ಸಲ್ಫೇಟನ್ನು ತರಬನಹಳ್ಳಿ ಕಾರ್ಖಾನೆಯಲ್ಲೂ, ಅಲ್ಯುಮಿನಿಯಂ ಸಲ್ಫೇಟ್ ಮತ್ತು ಆಲಮ್ ಅನ್ನು ಬೆಳಗೊಳದ ಕಾರ್ಖಾನೆಯಲ್ಲೂ ತಯಾರಿಸಲಾಗುತ್ತಿತ್ತು. ಈ ಕಂಪೆನಿಯ ತಾಮ್ರದ ಸಲ್ಫೇಟ್ (ಸ್ಪಟಿಕ) ತಯಾರಿಕಾ ಘಟಕವು ಭಾರತದಲ್ಲೇ ಮೊಟ್ಟಮೊದಲನೆಯದಾಗಿತ್ತು. ಇದು ಕಾಫಿ, ಅಡಿಕೆ, ರಬ್ಬರ್, ದ್ರಾಕ್ಷಿ, ಭತ್ತ, ಹತ್ತಿ ಮತ್ತು ಇತರೆ ಆಹಾರ ಬೆಳೆಗಳಿಗೆ ಸಿಂಪಡಿಸುವ ಉತ್ಕೃಷ್ಟ ಕ್ರಿಮಿನಾಶಕವಾಗಿದೆ. ಬೆಳಗೊಳದಲ್ಲಿ ಉತ್ಪಾದಿಸುತ್ತಿರುವ ಅಲ್ಯುಮಿನಿಯಂ ಸಲ್ಫೇಟ್ ಮತ್ತು ಆಲಮ್, ನೀರು ಶುದ್ಧೀಕರಣ ಮತ್ತು ಬಟ್ಟೆಯ ಡ್ರೈಯಿಂಗ್ ಕೆಲಸದಲ್ಲಿ ಉಪಯೋಗವಾಗುತ್ತದೆ. ಯೂರಿಯಾ, ಫಾರಂ ಆಲಡೈಡ್ ಮತ್ತು ರೆಸಿನ್ ಉತ್ಪಾದಿಸುವ

ಉದ್ದೇಶದಿಂದ ಅಲೈಡ್ ರೆಸಿನ್ ಮತ್ತು ಕೆಮಿಕಲ್ಸ್ ಘಟಕವು ೧೯೬೫ರಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳದಲ್ಲಿ ಪ್ರಾರಂಭಗೊಂಡಿರುವ ಖಾಸಗಿ ವಲಯದ ಮಧ್ಯಮ ಪ್ರಮಾಣದ ಕಾರ್ಖಾನೆಯಾಗಿದೆ. ಜಿಲ್ಲೆಯು ಕೃಷಿ ಪ್ರಧಾನವಾಗಿದ್ದು, ವ್ಯವಸಾಯೋಪಕರಣಗಳ ಬೇಡಿಕೆ ಹೆಚ್ಚಾಗಿದ್ದುದರಿಂದ ಆರು ಲಕ್ಷ ರೂ.ಗಳ ಬಂಡವಾಳದೊಂದಿಗೆ ವ್ಯವಸಾಯೋಪಕರಣಗಳ ಕಾರ್ಖಾನೆ ೧೯೬೬ರಲ್ಲಿ ಮಂಡ್ಯದಲ್ಲಿ ಕಾರ್ಯಾರಂಭಗೊಂಡಿತು. ಜಿಲ್ಲೆಯ ಮದ್ದೂರು ತಾಲೂಕಿನಲ್ಲಿ ತೆಂಗಿನ ಮರಗಳು ಅಧಿಕವಾಗಿರುವುದರಿಂದ, ಸಮೀಪದ ನಿಡಘಟ್ಟದಲ್ಲಿ ಸಹಕಾರಿ ನಾರಿನ ಕಾರ್ಖಾನೆ ಸ್ಥಾಪಿಸಲ್ಪಟ್ಟಿದೆ.

## ಪ್ರಸ್ತುತ ಕೈಗಾರಿಕೆಗಳು

ಜಿಲ್ಲೆಯಲ್ಲಿ ೨೦೦೨ನೇ ಇಸವಿ ಮಾರ್ಚ್ ಅಂತ್ಯದವೇಳೆಗೆ ೧೪ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿದ್ದು, ಮೂರು ಸರ್ಕಾರಿ ವಲಯಕ್ಕೂ, ಎರಡು ಸಹಕಾರಿ ವಲಯಕ್ಕೂ, ಉಳಿದ ಒಂಭತ್ತು ಖಾಸಗಿ ವಲಯಕ್ಕೂ ಸೇರಿದ್ದವು. ಇವುಗಳಲ್ಲಿ ತೊಡಗಿಸಿದ್ದ ಒಟ್ಟು ಬಂಡವಾಳ ೨೮,೭೭೨.೨೦ ಲಕ್ಷ ರೂ.ಗಳು. ಇವು ೫,೬೫೩ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸಿದ್ದು, ಸಕ್ಕರೆ, ಹಾಲು ಹಾಗೂ ಹಾಲಿನ ಉತ್ಪನ್ನಗಳು, ಖಾದ್ಯತೈಲ, ವಿದ್ಯುತ್ ಉತ್ಪಾದನೆ, ಗೊಬ್ಬರ, ಕಾಗದ, ಡ್ರೈಸೆಲ್ ಮುಂತಾದವುಗಳನ್ನು ಉತ್ಪಾದಿಸುತ್ತಿದ್ದವು. ಇವುಗಳ ಪೈಕಿ ಐದು ಕಾರ್ಖಾನೆಗಳು ಕಾರಣಾಂತರದಿಂದ ಕಾರ್ಯನಿರ್ವಹಿಸದೇ ಮುಚ್ಚಲ್ಪಟ್ಟಿವೆ. ಇದೇ ಕಾಲಾವಧಿಯವರೆಗೆ ಜಿಲ್ಲೆಯಲ್ಲಿ ನೋಂದಣಿಗೊಂಡ ಸಣ್ಣ ಮತ್ತು ಅತೀ ಸಣ್ಣಕೈಗಾರಿಕೆಗಳ ಸಂಖ್ಯೆ ೬,೭೭೪ ಆಗಿವೆ. ಇವುಗಳಲ್ಲಿ ತೊಡಗಿಸಿದ್ದ ಬಂಡವಾಳ ೧೦,೭೮೪.೬೯ ಲಕ್ಷ ರೂ.ಗಳು. ಇವು ೩೧,೮೬೪ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸಿದ್ದವು. ಜಿಲ್ಲೆಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ವ್ಯಾಪ್ತಿಯಲ್ಲಿ ೩೨೫ ಘಟಕಗಳು ಉತ್ಪಾದನಾ ಕಾರ್ಯದಲ್ಲಿ ತೊಡಗಿದ್ದು, ೧,೭೩೮ ಜನರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಟ್ಟಿದ್ದವು. ಇವುಗಳಿಂದ ೧೯೯೯–೨೦೦೦ನೇ ಸಾಲಿನಲ್ಲಿ ಸುಮಾರು ೫,೦೦೦ ಲಕ್ಷ ರೂಪಾಯಿ ಮೌಲ್ಯದ ವಸ್ತುಗಳು ಉತ್ಪಾದಿಸಲ್ಪಟ್ಟವು. ೧೯೯೫–೯೬ನೇ ಸಾಲಿನಲ್ಲಿ ನಡೆದ ಕೈಮಗ್ಗ ಮತ್ತು ವಿದ್ಯುತ್ ಚಾಲಿತ ಮಗ್ಗಗಳ ಗಣತಿಯ ಪ್ರಕಾರ ಜಿಲ್ಲೆಯಲ್ಲಿ ೩೧೦ ಕುಟುಂಬಗಳು ಕೈಮಗ್ಗಗಳನ್ನು, ೧೭ ಕುಟುಂಬಗಳು ವಿದ್ಯುತ್ ಮಗ್ಗಗಳನ್ನು ಅವಲಂಬಿಸಿಕೊಂಡಿದ್ದವು. ಜಿಲ್ಲೆಯಲ್ಲಿ ಒಟ್ಟು ೨೩೮ ಕೈಮಗ್ಗಗಳಿದ್ದು, ೪೭೫ ಕುಶಲಕರ್ಮಿಗಳಿಗೆ ಉದ್ಯೋಗವನ್ನೊದಗಿಸಿದ್ದವು. ಜಿಲ್ಲೆಯಲ್ಲಿದ್ದ ಒಟ್ಟು ೩೨ ವಿದ್ಯುತ್ ಮಗ್ಗಗಳ ಪೈಕಿ ೩೦ ವಿದ್ಯುತ್ ಮಗ್ಗಗಳು ಕಾರ್ಯನಿರತವಾಗಿದ್ದು, ೪೦ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ೨೦೦೦ನೇ ಮಾರ್ಚ್ ಅಂತ್ಯದವರೆಗೆ ಜಿಲ್ಲೆಯಲ್ಲಿ ೨೫ ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ನೇಕಾರರ ಸಹಕಾರ ಸಂಘಗಳು ನೋಂದಣಿಗೊಂಡಿದ್ದು, ಒಂಭತ್ತು ನೇಕಾರರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದವು. ಉಳಿದ ೧೬ ನೇಕಾರರ ಸಹಕಾರ ಸಂಘಗಳು ನಿಷ್ಕ್ರಿಯವಾಗಿದ್ದವು. ರೇಷ್ಮೆ ಉತ್ಪಾದನೆಯು ಜಿಲ್ಲೆಯ ಕೃಷಿಗೆ ಪೂರಕ ಉದ್ದಿಮೆಯಾಗಿ ಹೊರಹೊಮ್ಮಿತ್ತು. ಜಿಲ್ಲೆಯಲ್ಲಿರುವ ಏಳು ಸರ್ಕಾರಿ ಮತ್ತು ೧೦೦ ಖಾಸಗಿ ಕೋಠಿಗಳಲ್ಲಿ ರೋಗರಹಿತ ರೇಷ್ಮೆ ಮೊಟ್ಟೆಗಳನ್ನು ಉತ್ಪಾದಿಸಿ ರೈತರಿಗೆ ಒದಗಿಸಲಾಗುತ್ತಿದೆ. ಜಿಲ್ಲೆಯಲ್ಲಿರುವ ಮೂರು ಸರ್ಕಾರಿ ಹಿಪ್ಪನೇರಳೆ ಕ್ಷೇತ್ರಗಳಲ್ಲಿ ಉತ್ತಮ ತಳಿಯ ಹಿಪ್ಪನೇರಳೆಯನ್ನು ಬೆಳೆದು ಅದರ ಕಡ್ಡಿಗಳನ್ನು ರೈತರಿಗೆ ಒದಗಿಸುವುದರ ಜೊತೆಗೆ ಹಿಪ್ಪನೇರಳೆ ಮತ್ತು ರೇಷ್ಮೆ ಹುಳುಗಳ ಸಾಕಣೆಗೆ ಸಂಬಂಧಿಸಿದ ತರಬೇತಿ ಸೌಲಭ್ಯವನ್ನು ಸಹ ಒದಗಿಸಲಾಗುತ್ತಿದೆ.

## ಪ್ರೋತ್ಸಾಹ ಮತ್ತು ರಿಯಾಯಿತಿ ಸೌಲಭ್ಯಗಳು

ಭಾರತದ ಕೈಗಾರಿಕಾ ನಕ್ಷೆಯಲ್ಲಿ ಕರ್ನಾಟಕದ ಸ್ಥಾನವನ್ನು ಉತ್ತಮಪಡಿಸಿ ಕೈಗಾರಿಕೆಯಲ್ಲಿ ಮುಂದುವರಿದಿರುವ ರಾಜ್ಯಗಳ ಗುಂಪಿನಲ್ಲಿ ಮೊದಲ ಸ್ಥಾನಕ್ಕೇರಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನೂತನ

ಕೈಗಾರಿಕೆಗಳಿಗೆ ಪ್ರೋತ್ಸಾಹ ಹಾಗೂ ರಿಯಾಯಿತಿ ಸೌಲಭ್ಯಗಳನ್ನು ಪ್ರಕಟಿಸುತ್ತಾ ಬಂದಿದೆ. ಈ ಉದ್ದೇಶಕ್ಕಾಗಿ ರಾಜ್ಯದ ಎಲ್ಲಾ ತಾಲ್ಲೂಕುಗಳನ್ನು ಮೂರು ಗುಂಪುಗಳ ಕಕ್ಷೆಗೆ ಬರುವಂತೆ ವಿಂಗಡಿಸಿ ೧೯೯೬ರಿಂದ ಹೊಸದಾಗಿ ಸ್ಥಾಪಿತಗೊಂಡಿರುವ ಕೈಗಾರಿಕೆಗಳಿಗೆ ೨೦೦೧ನೇ ಇಸವಿಯವರೆಗೆ ಪ್ರೋತ್ಸಾಹ ಹಾಗೂ ರಿಯಾಯಿತಿ ಸೌಲಭ್ಯ ದೊರಕುವಂತೆ ಮಾಡಿದೆ. ಇದರ ಪ್ರಕಾರ ಬೆಂಗಳೂರು ದಕ್ಷಿಣ ತಾಲೂಕು, ಬೆಂಗಳೂರು ಉತ್ತರ ತಾಲೂಕು ಮತ್ತು ಬೆಂಗಳೂರು ಅರ್ಬನ್ ಆಗ್ಲೋಮರೇಷನ್ ಪ್ರದೇಶವನ್ನು (೧೯೯೧ರ ಗಣತಿಯಂತೆ) ಮುಂದುವರಿದ ಪ್ರದೇಶ ಅಥವಾ ವಲಯ– ೧ಕ್ಕೂ ರಾಜ್ಯದ ಉಳಿದ ೧೭೩ ತಾಲೂಕುಗಳನ್ನು ಮುಂದುವರಿಯುತ್ತಿರುವ (ಅಭಿವೃದ್ಧಿ ಶೀಲ) ಅಥವಾ ವಲಯ ೨ಕ್ಕೂ ಸೇರಿಸಲಾಗಿದೆ. ಧಾರವಾಡ, ಹಾಸನ ಮತ್ತು ರಾಯಚೂರುಗಳನ್ನು ಕೈಗಾರಿಕಾ ವಿಕಾಸ ಕೇಂದ್ರ ಅಥವಾ ವಲಯ–೩ ಎಂದು ಪರಿಗಣಿಸಿ ವಿಶೇಷ ಸೌಲಭ್ಯಗಳನ್ನು ಒದಗಿಸಲಾಗಿದೆ. ಇವುಗಳ ಜೊತೆಗೆ ಕರ್ನಾಟಕ ಕೈಗಾರಿಕಾ ಕ್ಷೇತ್ರ ಅಭಿವೃದ್ಧಿ ಮಂಡಳಿಯು ಬಿಜಾಪುರ, ಕೋಲಾರ, ಚಿತ್ರದುರ್ಗ, ಚಿಕ್ಕಮಗಳೂರು, ಗದಗ, ನಿಪ್ಪಾಣಿ, ಬಳ್ಳಾರಿ ಮೊದಲಾದ ಸ್ಥಳಗಳಲ್ಲಿ ಸಣ್ಣ ಕೈಗಾರಿಕಾ ಬೆಳವಣಿಗೆ ಕೇಂದ್ರಗಳನ್ನೂ, ಬಳ್ಳಾರಿ ಜಿಲ್ಲೆಯ ತೋರಣಗಲ್ಲಿನಲ್ಲಿ ಬೃಹತ್ ಕೈಗಾರಿಕೆಗಳ ಪೂರಕ ಕೈಗಾರಿಕಾ ಘಟಕಗಳ ಸಂಕೀರ್ಣವನ್ನೂ ನಿರ್ಮಿಸುವ ಉದ್ದೇಶವನ್ನು ಹೊಂದಿದೆ.

ಮಂಡ್ಯ ಜಿಲ್ಲೆಯ ಏಳು ತಾಲೂಕುಗಳು ಅಭಿವೃದ್ಧಿಶೀಲ ಅಥವಾ ವಲಯ ೨ ಕ್ಕೆ ಸೇರಿವೆ. ಈ ಜಿಲ್ಲೆಯಲ್ಲಿ ೧೯೯೬ರ ಮಾರ್ಚ್‌ನಿಂದ ಸ್ಥಾಪನೆಗೊಂಡಿರುವ ಸಣ್ಣ ಮತ್ತು ಅತೀಸಣ್ಣ ಕೈಗಾರಿಕೆಗಳಿಗೆ ಸ್ಥಿರಾಸ್ತಿ (ಭೂಮಿ, ಕಟ್ಟಡ, ಯಂತ್ರ ಮತ್ತು ಸ್ಥಾವರ ಹಾಗೂ ಉತ್ಪಾದನಾ ಉದ್ದೇಶಕ್ಕೆ ಸಂಬಂಧಿಸಿರುವ ಆಸ್ತಿಗಳ ಮೇಲೆ ಹೂಡಿದ ಬಂಡವಾಳ) ಮೌಲ್ಯದ ಶೇಕಡ ೨೫ ರಷ್ಟು ಅಥವಾ ಗರಿಷ್ಠ ೨೫ಲಕ್ಷ ರೂ.ಗಳ ಬಂಡವಾಳ ಹೂಡಿಕೆ ಸಹಾಯಧನ ದೊರಕುತ್ತದೆ. ತೀವ್ರ ಅವಶ್ಯಕ ವಲಯಕ್ಕೆ ಸೇರಿದ ಸಣ್ಣ ಕೈಗಾರಿಕೆಗಳಿಗೆ ಐದು ಲಕ್ಷ ರೂ. ಮೀರದಂತೆ ಸ್ಥಿರಾಸ್ತಿ ಮೌಲ್ಯದ ಶೇಕಡ ಐದರಷ್ಟು ಹೆಚ್ಚಿನ ಬಂಡವಾಳ ಸಹಾಯಧನ ನೀಡಲಾಗುವುದು. ಇಲ್ಲಿ ಈಗಾಗಲೇ ಸ್ಥಾಪಿತವಾಗಿರುವ ಕೈಗಾರಿಕೆಗಳ ವಿಸ್ತರಣೆ, ವಿದ್ಯುದ್ದೀಕರಣ, ಆಧುನೀಕರಣಗಳಿಗೋಸ್ಕರ ಹೂಡುವ ಬಂಡವಾಳಗಳಿಗೂ ಕೂಡ ಸಹಾಯಧನ ದೊರೆಯುವುದು. ಇಲ್ಲಿನ ವಿಶೇಷ ವರ್ಗದ ಉದ್ಯಮಿಗಳಿಗೆ ಅಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ ಜನಾಂಗ, ಮಹಿಳಾ ಉದ್ಯಮಿಗಳು, ಅಂಗವಿಕಲ ಉದ್ಯಮಿಗಳು, ಮಾಜಿಯೋಧರು ಮೊದಲಾದವರು ಶೇಕಡ ಐದರಷ್ಟು ಅಥವಾ ಗರಿಷ್ಠ ಒಂದು ಲಕ್ಷ ರೂ.ಗಳ ಅಧಿಕ ಬಂಡವಾಳ ಸಹಾಯಧನ ಪಡೆಯುವ ಸೌಲಭ್ಯಗಳಿವೆ. ಇಲ್ಲಿನ ಖಾಸಗಿ ಅಥವಾ ಸಹಕಾರಿ ವಲಯಗಳ ಕೈಗಾರಿಕಾ ವಸಾಹತುಗಳಿಗೆ ಸೌಕರ್ಯಗಳ ಅಭಿವೃದ್ಧಿಗೋಸ್ಕರ ವಿನಿಯೋಗಿಸಿದ ಹಣದ ಶೇಕಡ ೨೦ರಷ್ಟು ಅಥವಾ ೨೦ ಲಕ್ಷ ರೂ.ಗಳು ಮೀರದಂತೆ ಬಂಡವಾಳ ಸಹಾಯಧನ ನೀಡಲಾಗುವುದು. ಈ ಸಹಾಯಧನವು ೫೦೦ ಲಕ್ಷ ರೂ.ಗಳವರೆಗಿನ ಯೋಜನಾ ವೆಚ್ಚವನ್ನು ಮಾಡುವ ಕೈಗಾರಿಕೆಗಳಿಗೆ ಅಥವಾ ಆಂತರಿಕ ವೆಚ್ಚವನ್ನು ಹೊರತುಪಡಿಸಿ ಹೊಂದಿರುವ ಯೋಜನೆಗಳಿಗೆ ಮಾತ್ರ ಲಭಿಸುವುದು. ಇಲ್ಲಿ ಸ್ಥಾಪಿತವಾಗಿರುವ ಕೈಗಾರಿಕಾ ಘಟಕಗಳನ್ನು ಪುನರ್ ನವೀಕರಿಸಬಲ್ಲ ಉಪಕರಣಗಳನ್ನು ಅಳವಡಿಸಿದರೆ, ಅವುಗಳಿಗೋಸ್ಕರ ಮಾಡಿದ ವೆಚ್ಚದ ಶೇಕಡ ೨೦ ರಷ್ಟನ್ನು ಅಥವಾ ಗರಿಷ್ಟ ೨೦ ಲಕ್ಷ ರೂ.ಗಳು ಮೀರದಂತೆ ಅಧಿಕ ಸಹಾಯಧನ ನೀಡಲಾಗುವುದು. ಇದು ಕೈಗಾರಿಕಾ ಶೆಡ್ಡುಗಳ ವೆಚ್ಚವನ್ನು ಬಿಟ್ಟು ಉಳಿದ ಯೋಜನಾ ವೆಚ್ಚ ೫೦೦ ಲಕ್ಷ ರೂ.ಗಳವರೆಗೂ ಇರುವ ಕೈಗಾರಿಕಾ ಘಟಕಗಳಿಗೆ ಅನ್ವಯಗೊಳ್ಳುವುದು.

ಕ್ಯಾಪ್ಟೀವ್ ವಿದ್ಯುತ್ ಉತ್ಪಾದನಾ ಘಟಕವನ್ನು ನೂತನ ಅಥವಾ ಅಸ್ತಿತ್ವದಲ್ಲಿರುವ ಕೈಗಾರಿಕೆಗಳ ಸ್ಥಿರಾಸ್ತಿಗಳ ಅಂಶವೆಂದು ಪರಿಗಣಿಸಿ ಮಾರಾಟ ತೆರಿಗೆ ರಿಯಾಯಿತಿಗೆ ಸಂಬಂಧಿಸಿದಂತೆ ಇದನ್ನು ಮೂಲ ಬಂಡವಾಳಕ್ಕೆ ಸೇರಿಸಲಾಗುವುದು. ಇದು ಜನರೇಟರ್ ಸೆಟ್ಟುಗಳಲ್ಲಿ ಹೂಡಿದ ಬಂಡವಾಳಕ್ಕೆ ಮಾತ್ರ ಸೀಮಿತವಾಗಿರುವುದು.

ಇದರ ರಿಯಾಯಿತಿ ಸೌಲಭ್ಯವು ಪ್ರತೀ ಘಟಕಕ್ಕೆ ಶೇಕಡ ೧೦ ರಷ್ಟಿದ್ದು ಗರಿಷ್ಠ ಐದು ಲಕ್ಷ ರೂ.ಗಳಷ್ಟಿರುವುದು. ಹೊಸ ಕೈಗಾರಿಕೆಗಳು ವಿದ್ಯುತ್ ಉತ್ಪಾದನೆಗಾಗಿ ಬಳಸುವ ಡೀಸಲ್ ಎಣ್ಣೆ, ಮತ್ತು ಫರ್ನೇಸ್ ಎಣ್ಣೆಗಳ ಮೇಲೆ ನೀಡಿದ ಮಾರಾಟ ತೆರಿಗೆ ವೆಚ್ಚವನ್ನು ಮರುಪಾವತಿ ಮಾಡಲಾಗುವುದು. ಈ ಸೌಲಭ್ಯ ಐದು ವರ್ಷಗಳವರೆಗೆ ಮಾತ್ರ ಲಭ್ಯವಾಗುತ್ತದೆ. ಕ್ಯಾಪ್ಟೀವ್ ವಿದ್ಯುತ್ ಉತ್ಪಾದನಾ ಸೌಲಭ್ಯವನ್ನು ಹೊಂದದೇ ಇರುವ ಘಟಕಗಳಿಗೆ ಸ್ವಂತ ಉಪಯೋಗಕ್ಕಾಗಿ ಬಳಸುವ ವಿದ್ಯುತ್‌ಗೆ ವಿಧಿಸುವ ವಿದ್ಯುತ್ ತೆರಿಗೆಗೆ ಮೊದಲ ಐದು ವರ್ಷಗಳವರೆಗೆ ವಿನಾಯಿತಿ ಸೌಲಭ್ಯ ಉಂಟು.

ತಂತ್ರಜ್ಞಾನ ಆಧಾರಿತ ಹಾಗೂ ಪರಿಸರ ಮಾಲಿನ್ಯರಹಿತ ಕೈಗಾರಿಕೆಗಳಿಗೆ ಬಂಡವಾಳ ಸಹಾಯಧನ, ಮಾರಾಟ ಕರ ವಿನಾಯಿತಿ ಮೊದಲಾದ ಸೌಲಭ್ಯಗಳ ಮೂಲಕ ಉತ್ತೇಜನ ನೀಡಲಾಗುವುದು. ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕಾ ಘಟಕಗಳ ಉತ್ಪನ್ನಗಳ ಮೇಲಿನ ಕೇಂದ್ರ ಮಾರಾಟ ತೆರಿಗೆ ಮತ್ತು ಕರ್ನಾಟಕ ರಾಜ್ಯ ಮಾರಾಟ ತೆರಿಗೆಯಿಂದ ವಿನಾಯಿತಿಗೊಳಿಸಲಾಗಿದೆ. ಜಿಲ್ಲೆಯಲ್ಲಿ ೧೦೦ ಕೋಟಿ ರೂ.ಗಳಿಗಿಂತ ಹೆಚ್ಚು ಬಂಡವಾಳ ಹೂಡುವ ಬೃಹತ್ ಕೈಗಾರಿಕಾ ಯೋಜನೆಗಳಿಗೆ ತೊಡಗಿಸಿರುವ ಬಂಡವಾಳದ ಮೊತ್ತ, ಉದ್ಯೋಗವಕಾಶ ಮೊದಲಾದ ಅಂಶಗಳನ್ನು ಆಧರಿಸಿ ವಿಶೇಷ ಉತ್ತೇಜನ ನೀಡಲಾಗುವುದು. ಶೇಕಡ ೧೦೦ರಷ್ಟು ರಫ್ತು ಆಧಾರಿತ ಕೈಗಾರಿಕೆಗಳಿಗೆ ಬಂಡವಾಳ ಸಹಾಯಧನ, ಮಾರಾಟ ತೆರಿಗೆ ರಿಯಾಯಿತಿ, ವಿದ್ಯುತ್ ಕಡಿತದಿಂದ ವಿನಾಯಿತಿ, ಬಿಡಿಭಾಗಗಳ ಖರೀದಿ ಮೇಲಿನ ಪ್ರವೇಶ ತೆರಿಗೆ ವಿನಾಯಿತಿ ಮೊದಲಾದ ಸೌಲಭ್ಯಗಳಿವೆ. ಜಿಲ್ಲೆಯಲ್ಲಿ ನೂತನವಾಗಿ ಸ್ಥಾಪಿತವಾಗಿರುವ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಅವುಗಳ ವಿಸ್ತರಣೆ ಮತ್ತು ಆಧುನೀಕರಣಕ್ಕೆ ಆರ್ಥಿಕ ನೆರವು ಪಡೆಯುವ ಸಂದರ್ಭದಲ್ಲಿ ನೀಡಲಾಗುವ ಸಾಲಪತ್ರಗಳಿಗೆ ಸ್ಟಾಂಪು ಡ್ಯೂಟಿಯಿಂದ ವಿನಾಯಿತಿ ನೀಡಲಾಗುವುದು. ಜಿಲ್ಲೆಯಲ್ಲಿ ಕೃಷಿ ಭೂಮಿಯನ್ನು ಕೈಗಾರಿಕಾ ಘಟಕಗಳಿಗಾಗಿ ಪರಿವರ್ತಿಸುವ ಸಂದರ್ಭದಲ್ಲಿ ವಿಧಿಸುವ ಶುಲ್ಕವನ್ನೂ ಮನ್ನಾ ಮಾಡಲಾಗುವುದು. ಇಲ್ಲಿನ ಸಣ್ಣ ಕೈಗಾರಿಕೆಗಳ ವಾಣಿಜ್ಯ ಉತ್ಪಾದನೆ ಆರಂಭವಾದಾಗಿನಿಂದ ಐದು ವರ್ಷಗಳವರೆಗೆ ವಿದ್ಯುತ್ ಕಡಿತದಿಂದ ವಿನಾಯಿತಿ ನೀಡಲಾಗುವುದು.

## ರಿಯಾಯಿತಿ ಸೌಲಭ್ಯಕ್ಕೆ ನಿಗದಿಪಡಿಸಿರುವ ಮುದ್ದತ್ತು ಮತ್ತು ವ್ಯಾಖ್ಯಾನ

ಕೈಗಾರಿಕೆಗಳ ಸ್ಥಾವರ ಮತ್ತು ಯಂತ್ರಗಳನ್ನು ಯಾವುದೇ ಪ್ರದೇಶದಲ್ಲಿ ಸ್ಥಾಪಿಸಿದ್ದರೂ ಅವುಗಳಲ್ಲಿ ತೊಡಗಿಸಿರುವ ಬಂಡವಾಳ ಐದು ಲಕ್ಷ ರೂ.ಗಳಿಗಿಂತ ಕಡಿಮೆ ಇದ್ದರೆ, ಅಂತಹ ಕೈಗಾರಿಕೆಗಳನ್ನು ಅತೀಸಣ್ಣ ಕೈಗಾರಿಕೆಗಳೆಂದು ವ್ಯಾಖ್ಯಾನಿಸಲಾಗಿದೆ. ಕೈಗಾರಿಕೆಗಳ ಸ್ಥಿರಾಸ್ತಿ, ಸ್ಥಾವರ ಮತ್ತು ಯಂತ್ರಗಳು ಸ್ವಂತದ್ದಾಗಿರಲಿ, ಗುತ್ತಿಗೆಗೆ ಪಡೆದಿದ್ದಾಗಿರಲಿ, ಅಥವಾ ಬಾಡಿಗೆಗೆ ಪಡೆದಿದ್ದಾಗಿರಲಿ ಅವುಗಳ ಮೇಲೆ ತೊಡಗಿಸಿರುವ ಬಂಡವಾಳ ೬೦ ಲಕ್ಷ ರೂ.ಗಳಿಗಿಂತ ಹೆಚ್ಚಾಗಿಲ್ಲದಿದ್ದರೆ ಅಂತಹ ಕೈಗಾರಿಕೆಗಳು ಸಣ್ಣ ಕೈಗಾರಿಕೆಗಳೆಂದು ವ್ಯಾಖ್ಯಾನಿಸಲ್ಪಡುತ್ತವೆ. ಯಾವುದೇ ಕೈಗಾರಿಕೆಯು ಉತ್ಪಾದಿಸುವ ಪ್ರತಿಶತ ೫೦ಕ್ಕೂ ಹೆಚ್ಚು ಸರಕು ಅಥವಾ ಸೇವೆಯು ಇತರೆ ಕೈಗಾರಿಕೆಗಳ ಉತ್ಪಾದನೆಗೆ ಪೂರೈಕೆ ಮಾಡುವಂತಿದ್ದರೆ ಅಂತಹ ಕೈಗಾರಿಕೆಗಳನ್ನು ಪೂರಕ ಕೈಗಾರಿಕೆಗಳೆಂದು ಪರಿಗಣಿಸಲಾಗುವುದು. ಇವುಗಳ ಆಸ್ತಿ, ಸ್ಥಾವರ ಮತ್ತು ಯಂತ್ರಗಳಲ್ಲಿ ತೊಡಗಿಸಲ್ಪಟ್ಟಿರುವ ಬಂಡವಾಳ ೭೫ ಲಕ್ಷ ರೂ.ಗಳಿಗೆ ಮೀರದಿದ್ದರೆ ಅವು ರಿಯಾಯಿತಿ ಸೌಲಭ್ಯಕ್ಕೆ ಅರ್ಹವಾಗಿರುತ್ತವೆ. ಅತೀ ಸಣ್ಣ ಕೈಗಾರಿಕೆಗಳು, ಸಣ್ಣ ಕೈಗಾರಿಕೆಗಳು ಮತ್ತು ಪೂರಕ ಕೈಗಾರಿಕೆಗಳ ವ್ಯಾಪ್ತಿಗೊಳಪಡದಿರುವ ಕೈಗಾರಿಕೆಗಳನ್ನು ಮಧ್ಯಮ ಮತ್ತು ಬೃಹತ್ ಪ್ರಮಾಣದ ಕೈಗಾರಿಕೆಗಳೆಂದು ವ್ಯಾಖ್ಯಾನಿಸಲಾಗುವುದು. ನಿರ್ಯಾತ ಪ್ರಧಾನ ಘಟಕಗಳ (ಇ.ಓ.ಯು) ಯೋಜನೆ, ನಿರ್ಯಾತ ಪ್ರೋತ್ಸಾಹ ಕೈಗಾರಿಕಾ ಪಾರ್ಕ್ (ಇಪಿಐಪಿ) ಯೋಜನೆ ಅಥವಾ ಇಲೆಕ್ಟ್ರಾನಿಕ್ ಹಾರ್ಡ್‌ವೇರ್ ಇಂಡಸ್ಟ್ರಿಯಲ್

ಪಾರ್ಕ್ ಯೋಜನೆ ಅಥವಾ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಯೋಜನೆಗಳಡಿಯಲ್ಲಿ ಸ್ಥಾಪನೆಗೊಳ್ಳುವ ಕೈಗಾರಿಕೆಗಳನ್ನು ಶೇ.೧೦೦ರಷ್ಟು ನಿರ್ಯಾತ ಪ್ರಧಾನ ಘಟಕಗಳೆಂದು ವ್ಯಾಖ್ಯಾನಿಸಲಾಗಿದೆ. ಸ್ಥಿರ ಬಂಡವಾಳದ ವ್ಯಾಪ್ತಿಗೆ ನಿವೇಶನದ ವೆಚ್ಚ, ಬಿಲ್ಡಿಂಗ್, ಉತ್ಪಾದನಾ ಸ್ಥಾವರ ಮತ್ತು ಯಂತ್ರಗಳು, ಕ್ಯಾಪ್ಟೀವ್ ಪವರ್ ಪ್ಲಾಂಟ್ ಮತ್ತು ಇಲೆಕ್ಟ್ರಿಕಲ್ ಸಬ್ ಸ್ಟೇಷನ್, ಕಂಪ್ಯೂಟರುಗಳು ಮತ್ತು ನೇರ ಉತ್ಪಾದನೆಗೆ ಬಳಸಲ್ಪಡುವ ಸಾಧನಗಳೂ ಸೇರುತ್ತವೆ.

## ಸಣ್ಣ ಕೈಗಾರಿಕೆಗಳ ಆಧುನೀಕರಣ ನಿಧಿ

ಸಣ್ಣ ಕೈಗಾರಿಕೆಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಮನಗಂಡ ರಾಜ್ಯ ಸರ್ಕಾರ ಕರ್ನಾಟಕದಲ್ಲಿ ಸಣ್ಣ ಕೈಗಾರಿಕೆಗಳ ಆಧುನೀಕರಣ ಮತ್ತು ಉನ್ನತೀಕರಣಕ್ಕೆ ನೆರವಾಗುವಂತಹ ಹೊಸ ಯೋಜನೆಯೊಂದನ್ನು ರೂಪಿಸಿ ೨೭-೧೦-೨೦೦೦ದಂದು ಸರ್ಕಾರಿ ಆದೇಶ ಹೊರಡಿಸಿದೆ. ಇದರಲ್ಲಿ ಸಣ್ಣ ಕೈಗಾರಿಕೆಗಳ ಆಧುನೀಕರಣದ ಜೊತೆಗೆ ಸಮರ್ಥ ಹಾಗೂ ಸಾಧುವಾಗಿ ಕಂಡುಬಂದಲ್ಲಿ ರೋಗಗ್ರಸ್ಥ ಕೈಗಾರಿಕೆಗಳಿಗೂ ಸಹ ಈ ಯೋಜನೆ ಅನ್ವಯವಾಗುವ ಅವಕಾಶ ಕಲ್ಪಿಸಲಾಗಿದೆ. ೧. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ರೂ.೫೦೦ ಲಕ್ಷವನ್ನು ಭಾರತೀಯ ಸಣ್ಣ ಕೈಗಾರಿಕಾಭಿವೃದ್ಧಿ ಬ್ಯಾಂಕ್ (ಸಿಡ್ಬಿ) ಶೇ.೧೧.೫ ರಷ್ಟು ಬಡ್ಡಿಯ ದರದಲ್ಲಿ ಸಾಲವಾಗಿ ಪಡೆದಿರುತ್ತದೆ. ಈ ಹಣವನ್ನು ಆಧುನೀಕರಣ ಮತ್ತು ತಾಂತ್ರಿಕ ಉನ್ನತೀಕರಣ ಯೋಜನೆಯಡಿಯಲ್ಲಿ ಅರ್ಹತೆಯಿರುವ ಘಟಕಗಳಿಗೆ ಶೇಕಡ ೮.೫ ರಷ್ಟು ಬಡ್ಡಿ ವಿಧಿಸಿ ಸಹಾಯಧನ ನೀಡಲಾಗುತ್ತದೆ. ೨. ಸಿಡ್ಬಿಯು ಸೂಚಿಸಿರುವ ಸೂತ್ರ ಈ ಯೋಜನೆಗೆ ಅನ್ವಯವಾಗುತ್ತದೆ. ಹಾಗೂ, ಕನಿಷ್ಠ ರೂ.೫ ಲಕ್ಷ ಸಾಲ ಮಂಜೂರಾತಿಗೆ ಅವಕಾಶವಿರುತ್ತದೆ. ೩. ಸಮರ್ಥ ಹಾಗೂ ಕಾರ್ಯಸಾಧುವಾಗಿ ಕಂಡುಬರುವ ರೋಗಗ್ರಸ್ಥ ಕೈಗಾರಿಕೆಗಳಿಗೆ ಹಾಗೂ ತಾಂತ್ರಿಕ ಉನ್ನತೀಕರಣ ಅವಶ್ಯಕತೆ ಇರುವ ಘಟಕಗಳಿಗೆ ಸಹಾಯಧನ ದೊರೆಯುತ್ತದೆ. ೪. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ವಾಣಿಜ್ಯ ಬ್ಯಾಂಕುಗಳು ಮತ್ತು ಇತರ ಸಂಸ್ಥೆಗಳು ಕೆ.ಎಸ್.ಐ.ಐ.ಡಿ.ಸಿ ಸೇರಿ ಈ ಸಹಾಯಧನವನ್ನು ಪಡೆಯಲು ಅರ್ಹವಾಗಿರುತ್ತವೆ. ೫. ಒಂದು ಬಾರಿ ಈ ಯೋಜನೆಯಡಿಯಲ್ಲಿ ಸಹಾಯವನ್ನು ಪಡೆದ ಘಟಕಗಳು ವಾಣಿಜ್ಯ ಬ್ಯಾಂಕುಗಳ ಮೂಲಕ ದುಡಿಯುವ ಬಂಡವಾಳ ದೊರೆಯದೇ ಇದ್ದ ಪಕ್ಷದಲ್ಲಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಅರ್ಹತೆ ಆಧಾರದ ಮೇಲೆ, ಸಿಡ್ಬಿಯಿಂದ ದೊರೆಯುವ ಹಣದಲ್ಲಿ ಈ ಮೂಲಧನವನ್ನು ಮಂಜೂರು ಮಾಡಬಹುದು ಮತ್ತು ಮೂಲಧನಕ್ಕೆ ಸಾಮಾನ್ಯ ಬಡ್ಡಿಯನ್ನು ವಿಧಿಸಲಾಗುವುದು. ೬. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಏಕಗವಾಕ್ಷಿ ಏಜೆನ್ಸಿಯ ಸಭೆಯಲ್ಲಿ ಈ ವಿಷಯವನ್ನು ಪರಿಶೀಲಿಸಿ ಶಿಫಾರಸ್ಸು ಮಾಡಲ್ಪಟ್ಟವುಗಳನ್ನು ಮಾತ್ರ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಪರಿಗಣಿಸುವುದು. ೭. ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ಒಂದೇ ಕಂತಿನಲ್ಲಿ ಹಣ ಬಿಡುಗಡೆ ಮಾಡುತ್ತದೆ. ಈ ಯೋಜನೆಯನ್ವಯ ಮಂಜೂರಾದ ಹಣದ ಮೇಲೆ ಬರುವ ಬಡ್ಡಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಲೆಕ್ಕವಿಡಬೇಕಾಗುತ್ತದೆ. ಹಣಕಾಸು ಸಂಸ್ಥೆಗೆ ಪುನಃ ಹಣ ಬಿಡುಗಡೆ ಮಾಡುವಾಗ ಬಡ್ಡಿಯ ಹಣವನ್ನು ಪರಿಶೀಲಿಸಿ ಸರಿಹೊಂದಿಸಲಾಗುವುದು.

## ಕೇಂದ್ರ ಸರ್ಕಾರದ ಸೌಲಭ್ಯಗಳು

ನವದೆಹಲಿಯಲ್ಲಿ ೨೦೦೦ ಇಸವಿಯ ಆಗಸ್ಟ್ ೩೦ ಮತ್ತು ೩೧ ರಂದು ನಡೆದ ಸಣ್ಣ ಕೈಗಾರಿಕೆಗಳ ಸಮ್ಮೇಳನದ ಉದ್ಘಾಟನಾ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳು ಕೇಂದ್ರ ಸರ್ಕಾರದಿಂದ ಸಣ್ಣ ಕೈಗಾರಿಕೆಗಳಿಗೆ ದೊರಕುವ ಸವಲತ್ತುಗಳನ್ನು ಘೋಷಿಸಿದರು. ಸಣ್ಣ ಕೈಗಾರಿಕೆಗಳ ಬಲವರ್ಧನೆ ಮಾಡುವ ಸಲುವಾಗಿ ಕೇಂದ್ರ ಸರ್ಕಾರವು ನಿಗದಿಪಡಿಸಿದ್ದ ಎಕ್ಸೈಜ್ ತೆರಿಗೆಯ ವಿನಾಯಿತಿ ಮಿತಿಯು ಮೊದಲು ನಿಗದಿಪಡಿಸಿದ್ದ ರೂ.೫೦ ಲಕ್ಷಕ್ಕೆ

ಬದಲಾಗಿ ರೂ.೧೦೦ ಲಕ್ಷದವರೆಗೆ ಹೆಚ್ಚಿಸಲ್ಪಟ್ಟಿದೆ. ಸಂಯುಕ್ತ ಸಾಲದ ಪರಿಮಿತಿಯು ರೂ.೧೦ ಲಕ್ಷದಿಂದ ರೂ.೨೫ ಲಕ್ಷದವರೆಗೆ ಹೆಚ್ಚಳಗೊಂಡಿದೆ. ಸಣ್ಣ ಕೈಗಾರಿಕೆಗಳು ಗುಣಮಟ್ಟವನ್ನು ಕಾಯ್ದುಕೊಂಡು ಐ.ಎಸ್.ಓ ೯೦೦೦ ಸರ್ಟಿಫಿಕೇಟ್ ಪಡೆದುಕೊಂಡು ಮುಂದುವರಿಯುವಂತೆ ಮಾಡುವ ಸಲುವಾಗಿ ಇನ್ನೂ ಆರು ವರ್ಷಗಳವರೆಗೆ ಪ್ರತೀ ಘಟಕಕ್ಕೂ ರೂ.೭೫ ಸಾವಿರ ಸಾಲಸೌಲಭ್ಯ ದೊರಕಲು ಅನುವು ಮಾಡಿಕೊಟ್ಟಿದೆ. ಸರ್ಕಾರವು ರೂ.೧೨೫ ಕೋಟಿಯನ್ನು ಸಣ್ಣ ಕೈಗಾರಿಕೆಗಳ ಸಾಲ ಗ್ಯಾರಂಟಿ ಯೋಜನೆಯಲ್ಲಿ ತೊಡಗಿಸಿ ಉತ್ಸಾಹಿ ಉದ್ದಿಮೆದಾರರಿಗೆ ಒಂದನೇ ಸೆಪ್ಟೆಂಬರ್ ೨೦೦೦ ದಿಂದ ಹಣಕಾಸು ಸಂಸ್ಥೆಗಳ ಮೂಲಕ ಯಾವುದೇ ಸಮರ್ಪಕ ಆಧಾರವಿಲ್ಲದೇ ಗೊತ್ತಾದ ಪರಿಮಿತಿಯಲ್ಲಿ ಸಾಲಸೌಲಭ್ಯ ದೊರಕುವಂತೆ ಮಾಡಿದೆ ಮತ್ತು ಆಯ್ದ ತಾಂತ್ರಿಕ ಸಂಸ್ಥೆಗಳ ಬಂಡವಾಳದ ಶೇಕಡ ೧೨ ರಷ್ಟು ಸಹಾಯಧನ ನೀಡಲು ತೀರ್ಮಾನಿಸಿದೆ. ಖಾದಿ ಮತ್ತು ಗ್ರಾಮೋದ್ಯೋಗವನ್ನು ಬಲಪಡಿಸುವುದಕ್ಕಾಗಿ ಮತ್ತು ಖಾದಿ ನೇಯ್ಗೆಯವರ ತಾಂತ್ರಿಕತೆಯನ್ನು ಹೆಚ್ಚಿಸುವುದಕ್ಕಾಗಿ ಹೊಸಯೋಜನೆಯನ್ನು ತಯಾರಿಸಿದೆ. ಕೇಂದ್ರ ಸರ್ಕಾರವು ಚರ್ಮ ಮತ್ತು ಚರ್ಮೋತ್ಪಾದನೆ, ಆಹಾರಪದಾರ್ಥಗಳು, ಹಾರ್ಡ್‌ವೇರ್, ಔಷಧಿಗಳು, ವಾಹನಗಳ ಬಿಡಿಭಾಗಗಳು, ವಿದ್ಯುತ್ ಉಪಕರಣಗಳು, ಗಾಜು ಮತ್ತು ಪಿಂಗಾಣಿ, ಬಣ್ಣಗಳ ತಯಾರಿಕೆ, ಆಟದ ಸಾಮಾನುಗಳು, ಟೈರುಗಳು, ರೈಲು ಉಪಕರಣಗಳು, ಬೈಸಿಕಲ್‌ಗಳು ಮತ್ತು ಫೌಂಡ್ರಿ ಸರಕುಗಳ ಉತ್ಪಾದನೆಯ ಅಭಿವೃದ್ಧಿಗೆ ಸಾಲ ಮತ್ತು ಶೇಕಡ ೧೨ ರಷ್ಟು ಸಹಾಯಧನ ನೀಡಲು ತೀರ್ಮಾನಿಸಿದೆ.

ಕೇಂದ್ರಸರ್ಕಾರವು ೧೯೮೫ರ ಜವಳಿ ನೀತಿಯ ಬದಲಿಗೆ ರಾಷ್ಟ್ರೀಯ ಜವಳಿ ನೀತಿಯನ್ನು ಎರಡನೇ ನವೆಂಬರ್ ೨೦೦೦ದಂದು ಘೋಷಿಸಿದೆ. ಇದರ ಪ್ರಕಾರ ಸಿದ್ಧ ಉಡುಪುಗಳ ಘಟಕಗಳು ಸಣ್ಣ ಕೈಗಾರಿಕಾ ಘಟಕಗಳಿಂದ ಪ್ರತ್ಯೇಕಿಸಲ್ಪಟ್ಟಿದ್ದು, ವಿದೇಶಿ ವಿನಿಮಯವನ್ನು ನೇರವಾಗಿ ಸಿದ್ಧ ಉಡುಪುಗಳ ಘಟಕಗಳಲ್ಲಿ ತೊಡಗಿಸಲು ಮತ್ತು ಅವುಗಳ ರಫ್ತನ್ನು ಹೆಚ್ಚಿಸಲು ಅನುವು ಮಾಡಿಕೊಟ್ಟಂತಾಗಿದೆ. ಇದರಿಂದ ಸಿದ್ಧ ಉಡುಪುಗಳ ಕೈಗಾರಿಕೆಗಳು ವಿಸ್ತೃತಗೊಳ್ಳುವುದರ ಜೊತೆಗೆ ನೆರೆಹೊರೆಯ ರಾಷ್ಟ್ರಗಳ ಜೊತೆ ಪೈಪೋಟಿ ಮಾಡಲೂ ಸಮರ್ಥವಾದಂತಾಗಿದೆ. ಜವಳಿ ಉದ್ಯಮದ ರಫ್ತು ೨೦೧೦ನೇ ಇಸವಿಗೆ ಈಗಿನ ೧೧ ಬಿಲಿಯನ್ ಡಾಲರ್‌ನಿಂದ ೫೦ ಬಿಲಿಯನ್ ಡಾಲರ್‌ಗೆ ಹೆಚ್ಚಳವಾಗುವ ಗುರಿ ಇದೆ. ಇದರಲ್ಲಿ ಸಿದ್ಧಉಡುಪುಗಳ ಕೊಡುಗೆ ೨೫ ಬಿಲಿಯನ್ ಡಾಲರ್ ಆಗಿದೆ ಎಂದು ಅಂದಾಜು ಮಾಡಲಾಗಿದೆ. ಇಲ್ಲಿಯವರೆಗೂ ಸಿದ್ಧಉಡುಪುಗಳ ಘಟಕಗಳು ಸಣ್ಣ ಕೈಗಾರಿಕಾ ಘಟಕಗಳ ಗುಂಪಿನಲ್ಲಿದ್ದು, ರೂ.೩೦೦ ಲಕ್ಷಗಳವರೆಗೆ ಬಂಡವಾಳ ತೊಡಗಿಸಲು ಅನುಮತಿ ಪಡೆದುಕೊಂಡಿದ್ದವು. ರಾಷ್ಟ್ರೀಯ ಜವಳಿ ನೀತಿಯು ಪ್ರಪಂಚದ ಇತರ ಭಾಗಗಳಲ್ಲಿ ಖಾಸಗಿ ಜವಳಿ ಸಂಕೀರ್ಣಗಳನ್ನು ಸ್ಥಾಪಿಸಲು ಮತ್ತು ಸ್ನೇಹಮಯ ವಾತಾವರಣವನ್ನು ನಿರ್ಮಿಸಲು ಸಹಾಯಕವಾಗಿದೆ. ಈ ನೀತಿಯು ಜವಳಿ ಉದ್ಯಮಕ್ಕೆ ಬೇಕಾಗುವ ಸೂಕ್ತ ತಾಂತ್ರಿಕತೆಯನ್ನು ಒದಗಿಸುವುದರ ಜೊತೆಗೆ ಅಂತರ್ ರಾಷ್ಟ್ರೀಯ ವಾಣಿಜ್ಯ ಸಂಘದ ಜೊತೆ ಒಪ್ಪಂದ ಮಾಡಿಕೊಂಡು ಸಂಭವನೀಯ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳಲು ನೆರವನ್ನೊದಗಿಸುವುದು.

## ವಿದ್ಯುಚ್ಛಕ್ತಿ

ವಿದ್ಯುಚ್ಛಕ್ತಿಯು ಗೃಹ ಹಾಗೂ ಕೈಗಾರಿಕೆಗಳೇ ಅಲ್ಲದೆ, ಇನ್ನಿತರ ಆದ್ಯತಾ ವಲಯಗಳ ಮೂಲ ಶಕ್ತಿಯಾಗಿ ಉಪಯೋಗಿಸಲ್ಪಡುತ್ತಿದೆ. ಮಂಡ್ಯ ಜಿಲ್ಲೆಯಲ್ಲಿ ಪ್ರಮುಖವಾಗಿ ಜಲವಿದ್ಯುತ್ ಉತ್ಪಾದನೆಯಾಗುತ್ತಿರುವುದರಿಂದ ಅದರ ಉತ್ಪಾದನೆಯ ಹಿನ್ನೆಲೆ ಮತ್ತು ವಿತರಣೆಯಾಗುತ್ತಿರುವ ವಿಧಾನಗಳೆರಡನ್ನೂ ಅವಶ್ಯಕವಾಗಿ ತಿಳಿದುಕೊಳ್ಳಬೇಕಾಗುವುದು. ಜಿಲ್ಲೆಯ ಜಲವಿದ್ಯುತ್ ಉತ್ಪಾದನೆ ನೂರು ವರ್ಷಗಳ ಹಿನ್ನೆಲೆಯನ್ನು ಹೊಂದಿದ್ದರೆ

ಅದರ ವಿತರಣೆಯು ವಿಶ್ವದಲ್ಲಿಯೇ ಅತ್ಯಂತ ಹೆಚ್ಚು ದೂರ ಸಾಗಿಸಿದ ಹೆಗ್ಗಳಿಕೆಯನ್ನು ಹೊಂದಿದ್ದಾಗಿದೆ. ಮೈಸೂರು ರಾಜ್ಯದ ಮಹಾರಾಜರು ಹತ್ತೊಂಭತ್ತನೆಯ ಶತಮಾನದ ಉತ್ತರಾರ್ಧದಲ್ಲಿಯೇ ಕೈಗಾರಿಕೆ, ಗೃಹಬಳಕೆ ಮೊದಲಾದವುಗಳಿಗೆ ವಿದ್ಯುತ್ ಉತ್ಪಾದನೆ ಅತ್ಯಾವಶ್ಯಕ ಎಂಬ ದೂರದೃಷ್ಟಿಯನ್ನು ಹೊಂದಿದವರಾಗಿದ್ದುದರಿಂದ ೧೮೯೮ರಲ್ಲಿ ಜಲವಿದ್ಯುತ್ ಉತ್ಪಾದನೆಗೆ ಯೋಗ್ಯಸ್ಥಳಗಳ ಸಮೀಕ್ಷೆ ನಡೆಸಿ ೧೮೯೯ರಲ್ಲಿ ಶಿವಸಮುದ್ರದ ಸಮೀಪ ಕಾವೇರಿ ನದಿಯಿಂದ ಜಲವಿದ್ಯುತ್ ಉತ್ಪಾದಿಸಲು ನಿರ್ಧಾರ ತೆಗೆದುಕೊಂಡಿದ್ದರು. ಅಂದಿನ ದಿವಾನರಾಗಿದ್ದ ಸರ್.ಕೆ.ಶೇಷಾದ್ರಿ ಅಯ್ಯರ್ ರವರ ಮಾರ್ಗದರ್ಶನದಂತೆ ೧೯೦೦ರಲ್ಲಿ ಕಾವೇರಿ ಜಲವಿದ್ಯುತ್ ಯೋಜನೆ ಕಾರ್ಯಾರಂಭಗೊಂಡಿತು. ಇದರ ಪ್ರಾಥಮಿಕ ಉದ್ದೇಶವು ಇಲ್ಲಿಂದ ೧೪೭ ಕಿ.ಮೀ. ದೂರವಿರುವ ಕೋಲಾರ ಚಿನ್ನದಗಣಿಗೆ ೭೮ ಕಿ.ವೋ. ವಿದ್ಯುತ್ ಜಾಲದ ಮೂಲಕ ವಿದ್ಯುತ್ ಪೂರೈಕೆ ಮಾಡುವುದಾಗಿತ್ತು. ಶಿವಸಮುದ್ರದ ಸಮೀಪವಿರುವ ಪ್ರಸಿದ್ಧ ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತವು ಸುಮಾರು ೧೧೨ ಕಿ.ಮೀ. ದೂರವಿರುವ ಬೆಂಗಳೂರು ಮತ್ತು ೭೦ ಕಿ.ಮೀ. ದೂರವಿರುವ ಮೈಸೂರುಗಳಿಗೆ ಮಧ್ಯದಲ್ಲಿದ್ದು, ಇಲ್ಲಿ ರಾಜ್ಯದ ಮೊದಲ ಜಲವಿದ್ಯುತ್ ಸ್ಟೇಷನ್ನನ್ನು ೧೯೦೨ರಲ್ಲಿ ಸ್ಥಾಪಿಸಿ ೪.೩ ಮೆ.ವ್ಯಾ ವಿದ್ಯುತ್ತನ್ನು ಉತ್ಪಾದಿಸಿ ೭೮ ಕಿ.ವೋ ವಿದ್ಯುತ್ ಜಾಲದ ಮೂಲಕ ಕೋಲಾರದ ಚಿನ್ನದ ಗಣಿಗೆ ಪೂರೈಕೆ ಮಾಡಲಾಯಿತು.

ಮೈಸೂರು ರಾಜ್ಯದ ಇಲೆಕ್ಟ್ರಿಕಲ್ ಇಂಜಿನಿಯರ್ ಆಗಿದ್ದ ಎಡ್‌ಮಂಡ್ ಕ್ಯಾರಿಂಗ್‌ಟನ್ ೧೮೯೪ರಲ್ಲಿಯೇ ಶಿವಸಮುದ್ರದ ಸಮೀಪವಿರುವ ಕಾವೇರಿ ಜಲಪಾತದ ಸದುಪಯೋಗಪಡಿಸಿಕೊಂಡು ವಿದ್ಯುತ್ ಉತ್ಪಾದಿಸಲು ಅನುಮತಿ ಮತ್ತು ರಿಯಾಯಿತಿ ಸೌಲಭ್ಯಗಳನ್ನು ಕೇಳಿಕೊಂಡಿದ್ದರು. ಇವರು ಭಾರತದ ಜಲವಿದ್ಯುತ್ ಯೋಜನೆಯ ಮೂಲಪುರುಷರಲ್ಲಿ ಒಬ್ಬರಾಗಿದ್ದು, ಮದರಾಸಿನಲ್ಲಿ (ಈಗಿನ ಚೆನ್ನೈ) ವಾಸವಾಗಿದ್ದ ಹೊಲ್ಮಸ್‌ರ ನಿಕಟ ಸಂಪರ್ಕವನ್ನು ಹೊಂದಿದವರಾಗಿದ್ದರು. ಇವರಿಬ್ಬರ ಜೊತೆಗೆ ಮೈಸೂರಿನಲ್ಲಿ ಬ್ರಿಟಿಷ್ ರೆಸಿಡೆಂಟ್ ಆಗಿದ್ದ ಕರ್ನಲ್ ಹೆಂಡರ್‌ಸನ್‌ರವರೂ ಸೇರಿ, ಈ ಸ್ಥಳಗಳಿಗೆ ವಿದ್ಯುತ್ ಸಾಗಿಸಬಹುದೆಂಬ ತೀರ್ಮಾನಕ್ಕೆ ಬಂದು ಈ ಯೋಜನೆ ಕಾರ್ಯರೂಪಗೊಳ್ಳಲು ತಮ್ಮ ಪ್ರಭಾವ ಬೀರಿದರು. ಮೈಸೂರು ಸರ್ಕಾರ ಈ ಯೋಜನೆಯ ಪರಿಶೀಲನೆ ನಡೆಸಿ ಸಲಹೆ ನೀಡುವಂತೆ ಮದರಾಸಿನಲ್ಲಿದ್ದ ಮುಖ್ಯ ಇಂಜಿನಿಯರ್‌ರವರನ್ನು ಕೇಳಿಕೊಂಡಿತು. ಅವರು ಸ್ಥಳ ಪರಿಶೀಲನೆ ನಡೆಸಿ ಜಲಪಾತದ ಸಾಮರ್ಥ್ಯವು ಕಾರ್ಯಯೋಗ್ಯವಾಗಿದೆಯೆಂದು ಯೋಗ್ಯತಾಪತ್ರ ನೀಡಿದರು. ಮೈಸೂರಿನ ಉಪಮುಖ್ಯ ಇಂಜಿನಿಯರ್ ೧೮೯೯ರಲ್ಲಿ ನಯಾಗರ ಜಲಪಾತದ ವಿದ್ಯುತ್ ಉತ್ಪಾದನೆಯನ್ನು ಕೂಲಂಕುಶವಾಗಿ ಅಧ್ಯಯನ ಮಾಡಿದ್ದರು. ಆ ಅನುಭವದ ಆಧಾರದ ಮೇಲೆ ಇವರು ಶಿವಸಮುದ್ರದಿಂದ ಕೋಲಾರದ ಚಿನ್ನದಗಣಿಗೆ ವಿದ್ಯುತ್ ಪೂರೈಕೆ ಮಾಡಲು ಈ ಯೋಜನೆ ಉಪಯುಕ್ತವಾಗಬಲ್ಲದೆಂಬ ತೀರ್ಮಾನಕ್ಕೆ ಬಂದು ಮೈಸೂರಿನ ದಿವಾನರಾಗಿದ್ದ ಸರ್.ಕೆ.ಶೇಷಾದ್ರಿ ಅಯ್ಯರ್ ಮತ್ತು ಮುಖ್ಯ ಇಂಜಿನಿಯರ್ ಆಗಿದ್ದ ಕರ್ನಲ್ ಕ್ಯಾಂಪ್‌ಬೆಲ್ ಇವರ ಬೆಂಬಲ ಪಡೆದುಕೊಂಡರು. ಕೋಲಾರ ಚಿನ್ನದ ಗಣಿಯ ಆಡಳಿತಾಧಿಕಾರವನ್ನು ಹೊಂದಿದ್ದ ಲಂಡನ್ನಿನ ಮೆಸರ್ಸ್ ಜಾನ್ ಟೇಲರ್ ಸಹ ಈ ಯೋಜನೆಗೆ ಬೆಂಬಲ ವ್ಯಕ್ತಪಡಿಸಿದರು. ಮೈಸೂರು ಸರ್ಕಾರ ೧೮೯೯ರಲ್ಲಿ ಈ ಜಲಪಾತದಿಂದ ವಿದ್ಯುತ್ ಉತ್ಪಾದಿಸಿ ರಾಜ್ಯದ ಕೈಗಾರಿಕೆಗಳಿಗೆ ಮತ್ತು ಕೋಲಾರದ ಚಿನ್ನದಗಣಿಗೆ ವಿದ್ಯುತ್ ರವಾನಿಸಲು ಸಮ್ಮತಿಸಿತು. ಮೈಸೂರು ಸರ್ಕಾರವು ಯೂರೋಪ್ ಮತ್ತು ಅಮೆರಿಕಾಗಳ ಜಲವಿದ್ಯುತ್ ಕೇಂದ್ರಗಳನ್ನು ವೀಕ್ಷಿಸಿ ತಜ್ಞರ ಸಲಹೆಯನ್ನು ಪಡೆದು ಬರುವುದಕ್ಕಾಗಿ ತನ್ನ ಉಪ ಮುಖ್ಯ ಇಂಜಿನಿಯರ್‌ರವರನ್ನು ಆ ದೇಶಗಳಿಗೆ ಕಳುಹಿಸಿಕೊಟ್ಟಿತು ಮತ್ತು ಮದರಾಸು (ತಮಿಳುನಾಡು) ಸರ್ಕಾರದಿಂದ ಇಲ್ಲಿ ಉತ್ಪಾದಿಸುವ ಪೂರ್ಣ ಜಲ ವಿದ್ಯುತ್ತನ್ನು ಕೆಲವು ಷರತ್ತುಗಳ ಮೇಲೆ ಉಪಯೋಗಿಸಿಕೊಳ್ಳುವ ಹಕ್ಕನ್ನು ಪಡೆದುಕೊಂಡಿತು. ವಿದ್ಯುತ್ ಸ್ಥಾವರದ ಜೋಡಣೆಯ ಕಾರ್ಯ ೧೯೦೨ರ ಆದಿಭಾಗದಲ್ಲಿ ಪೂರ್ಣಗೊಂಡು ಜೂನ್ ೩೦ ರಂದು

ಇಲ್ಲಿ ಉತ್ಪಾದಿಸಲ್ಪಟ್ಟ ೩೦ ಸಾವಿರ ವೋಲ್ಟ್ ವಿದ್ಯುತ್ತನ್ನು ಕೋಲಾರದ ಚಿನ್ನದ ಗಣಿಗೆ ಯಶಸ್ವಿಯಾಗಿ ರವಾನಿಸಲಾಯಿತು. ಇದರ ಮೊದಲ ಜನರೇಟರ್‌ನಿಂದ ೬೦೦೦ ಹೆಚ್.ಪಿ.ವಿದ್ಯುತ್ ಉತ್ಪಾದಿಸಲಾಯಿತು. ಕೋಲಾರದ ಚಿನ್ನದಗಣಿ, ಮೈಸೂರು ಮತ್ತು ಬೆಂಗಳೂರು ನಗರಗಳ ವಿದ್ಯುತ್ ಬೇಡಿಕೆ ಹೆಚ್ಚಾದುದರಿಂದ ೧೯೦೩ರಲ್ಲಿ ಎರಡನೇ ಜನರೇಟರನ್ನು, ೧೯೦೬ರಲ್ಲಿ ಮೂರನೇ ಜನರೇಟರನ್ನು, ೧೯೧೪–೧೫ರಲ್ಲಿ ನಾಲ್ಕನೇ ಜನರೇಟರನ್ನು, ೧೯೧೮ರಲ್ಲಿ ಐದನೇ ಜನರೇಟರನ್ನು ಮತ್ತು ೧೯೧೯ರಲ್ಲಿ ಆರನೇ ಜನರೇಟರನ್ನು ಸ್ಥಾಪಿಸಿ ವಿದ್ಯುತ್ ಉತ್ಪಾದಿಸಲಾಯಿತು. ೧೯೨೫ರಲ್ಲಿ ಏಳನೇ ಜನರೇಟರ್‌ನ ಸ್ಥಾಪನೆಗೆ ಅನುಮತಿ ಪಡೆದುಕೊಳ್ಳಲಾಯಿತು. ಈ ಏಳು ಜನರೇಟರ್‌ಗಳಿಂದ ಉತ್ಪಾದಿಸಲ್ಪಟ್ಟ ವಿದ್ಯುತ್ ೪೮,೦೦೦ ಹೆಚ್.ಪಿ.ಯಾಗಿದ್ದು ಕೈಗಾರಿಕಾ ಸ್ಥಾಪನೆಗೆ ಸಹಾಯಕವಾಗಿರುವುದರ ಜೊತೆಗೆ ಬೆಂಗಳೂರು ಮತ್ತು ಮೈಸೂರು ನಗರಗಳ ಗೃಹ ಹಾಗೂ ಬೀದಿ ದೀಪಗಳ ವಿದ್ಯುತ್ ಪೂರೈಕೆಗೆ ನೆರವಾಯಿತು. ಇಷ್ಟೇ ಅಲ್ಲದೇ ಮದರಾಸು ರಾಜ್ಯದಲ್ಲಿ ನಿರ್ಮಾಣಗೊಳ್ಳುತ್ತಿದ್ದ ಮೆಟ್ಟೂರು ಅಣೆಕಟ್ಟು ನಿರ್ಮಾಣ ಕಾರ್ಯಕ್ಕೆ ಆರು ವರ್ಷಗಳವರೆಗೆ ತಾತ್ಕಾಲಿಕ ವಿದ್ಯುತ್ ಪೂರೈಕೆ ಮಾಡಲಾಯಿತು. ಶಿವಸಮುದ್ರದ ಜಲವಿದ್ಯುತ್ ಉತ್ಪಾದನಾ ಕೇಂದ್ರದ ಆರಂಭಿಕ ಉತ್ಪಾದನಾ ಸಾಮರ್ಥ್ಯ ೪,೫೦೦ ಕಿ.ವೋ.ಇದ್ದದ್ದು, ೧೯೩೮ರ ಹೊತ್ತಿಗೆ ಅದರ ಸಾಮರ್ಥ್ಯ ೪೨,೦೦೦ ಕಿ.ವೋ.ಗೆ ಹೆಚ್ಚಳಗೊಂಡಿತು. ವಿದ್ಯುತ್ ಬೇಡಿಕೆ ಹೆಚ್ಚಾದುದರಿಂದ ಸರ್ಕಾರವು ೧೯೪೦ರಲ್ಲಿ ೧೭.೨೦ ಮೆ.ವ್ಯಾ. ಆರಂಭಿಕ ಸಾಮರ್ಥ್ಯದ ಶಿಂಷಾ ಜಲವಿದ್ಯುತ್ ಸ್ಥಾವರನ್ನು ಕಾರ್ಯರಂಭಗೊಳಿಸಿತು. ಈಗ ಶಿವಸಮುದ್ರದ ಜನರೇಟಿಂಗ್ ಸ್ಟೇಷನಿನಲ್ಲಿ ೪೨ ಮೆ.ವ್ಯಾ ಮತ್ತು ಶಿಂಷಾ ಜನರೇಟಿಂಗ್ ಸ್ಟೇಷನ್‌ನಲ್ಲಿ ೧೭.೨೦ ಮೆ.ವ್ಯಾ ಜಲವಿದ್ಯುತ್ತನ್ನು ಉತ್ಪಾದಿಸಲಾಗುತ್ತದೆ. ಶಿವಸಮುದ್ರದಲ್ಲಿ ಉತ್ಪಾದನೆಯಾಗುವ ಜಲವಿದ್ಯುತ್ತನ್ನು ಮಳವಳ್ಳಿ ಸಮೀಪದ ಪಾಯಿಂಟಿಗೂ, ಅಲ್ಲಿಂದ ಬನ್ನೂರು, ಆಲನಹಳ್ಳಿ ಮಾರ್ಗವಾಗಿ ಮೈಸೂರಿನ ನರಸಿಂಹರಾಜ ಪವರ್‌ಸ್ಟೇಷನ್‌ಗೆ ಸುಮಾರು ೫೩ ಕಿ.ಮೀ.ನಷ್ಟು ದೂರ ರವಾನಿಸಲಾಗುತ್ತಿದೆ.

ಮಂಡ್ಯ ಜಿಲ್ಲೆಯಲ್ಲಿ ಮಂಡ್ಯ ವಿಭಾಗ ಮತ್ತು ಪಾಂಡವಪುರ ವಿಭಾಗ ಎಂದು ಎರಡು ವಿದ್ಯುತ್ ಸರಬರಾಜು ವಿಭಾಗಗಳಿವೆ. ಈ ಎರಡೂ ವಿಭಾಗಗಳ ಒಟ್ಟು ಸಾಮರ್ಥ್ಯ ೧೬೭.೭ ಮೆ.ವ್ಯಾ.ಆಗಿದ್ದು, ವಿವಿಧ ಸಾಮರ್ಥ್ಯದ ೨೫ ವಿದ್ಯುತ್ ಜಾಲಗಳ ಮೂಲಕ ವಿದ್ಯುತ್ ವಿತರಣೆಗೊಳ್ಳುತ್ತಿದೆ. ಮಂಡ್ಯ ಜಿಲ್ಲೆಯಲ್ಲಿ ೨೦೦೧–೨೦೦೨ರಲ್ಲಿದ್ದ ವಿದ್ಯುತ್ ಸರಬರಾಜು ಘಟಕಗಳ (ಟ್ರಾನ್ಸಫಾರ್ಮರ್) ಸ್ಥಳ, ವೋಲ್ಟೇಜ್ ಪ್ರಮಾಣ, ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ ಮತ್ತು ಅವುಗಳ ಸಾಮರ್ಥ್ಯವನ್ನು ಕೋಷ್ಟಕ ೫.೧ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧**

| ಟ್ರಾನ್ಸ್‌ಫಾರ್ಮರ್‌ಗಳು ಇರುವ ಸ್ಥಳ | ವೋಲ್ಟೇಜ್ ಪ್ರಮಾಣ (ಕಿ.ವೋ) | ಟ್ರಾನ್ಸ್‌ಫಾರ್ಮರ್‌ಗಳ (ಸಂಖ್ಯೆ) | ಪ್ರತಿ ಟ್ರಾನ್ಸ್‌ಫಾರ್ಮರ್‌ಗಳ ಸಾಮರ್ಥ್ಯ (ಮೆ.ವ್ಯಾ.ಗಳಲ್ಲಿ) | ಒಟ್ಟು ಸಾಮರ್ಥ್ಯ (ಮೆ.ವ್ಯಾ.ಗಳಲ್ಲಿ) |
|---|---|---|---|---|
| ೧ | ೨ | ೩ | ೪ | ೫ |
| ೧. ಮಂಡ್ಯ | ೬೬/೧೧ | ೨ | ೧೨.೫ | ೨೫.೦ |
| ೨. ಮಳವಳ್ಳಿ | ೬೬/೧೧ | ೧ | ೬.೩ | ೬.೩ |
| | | ೧ | ೧೨.೫ | ೧೨.೫ |
| ೩. ಮದ್ದೂರು | ೬೬/೧೧ | ೨ | ೮.೦ | ೧೬.೦ |
| ೪. ಕೊಪ್ಪ೬೬/೧೧ | | ೧ | ೮.೦ | ೮.೦ |

| ೧ | ೨ | ೩ | ೪ | ೫ |
|---|---|---|---|---|
| ೫. ದುಂಡೇನಹಳ್ಳಿ | ೬೬/೧೧ | ೧ | ೬.೩ | ೬.೩ |
| ೬. ಮಂಡ್ಯ ೧ ಮತ್ತು ೨ನೇ ಹಂತ | ೬೬/೧೧ | ೧ | ೧೨.೫ | ೧೨.೫ |
| ೭. ಕಿರಗಾವಲು | ೬೬/೧೧ | ೧ | ೬.೩ | ೬.೩ |
| ೮. ಕೆ.ಎಂ.ದೊಡ್ಡಿ (ಭಾರತೀನಗರ) | ೬೬/೧೧ | ೧ | ೬.೩ | ೬.೩ |
| ೯. ತೂಬಿನಕೆರೆ | ೨೨೦/೬೬ | ೨ | ೧೦೦ | ೨೦೦ |
| | ೬೬/೧೧ | ೧ | ೧೨.೫ | ೧೨.೫ |
| ೧೦. ಪಾಂಡವಪುರ | ೬೬/೧೧ | ೨ | ೬.೩ | ೧೨.೬ |
| ೧೧. ಕೃಷ್ಣರಾಜಪೇಟೆ | ೬೬/೧೧ | ೨ | ೬.೩ | ೧೨.೬ |
| ೧೨. ನಾಗಮಂಗಲ | ೬೬/೧೧ | ೨ | ೬.೩ | ೧೨.೬ |
| ೧೩. ಗರುಡನ ಉಕ್ಕಡ | ೬೬/೧೧ | ೨ | ೧.೦ | ೨.೦ |
| ೧೪. ಶ್ರೀರಂಗಪಟ್ಟಣ | ೬೬/೧೧ | ೧ | ೮.೦ | ೮.೦ |
| ೧೫. ಬಿ.ಜಿ.ನಗರ | ೬೬/೧೧ | ೧ | ೬.೩ | ೬.೩ |
| ೧೬. ಬೆಳಗೊಳ | ೧೧೦/೧೧ | ೨ | ೧೦.೦ | ೨೦.೦ |
| | ೧೧೦/೪.೬ | ೪ | ೩.೩ | ೧೩.೨ |
| ೧೭. ಮಂದಗೆರೆ (ಕಿಕ್ಕೇರಿ) | ೬೬/೧೧ | ೧ | ೬.೩ | ೬.೩ |
| | ೬೬/೧೧ | ೧ | ೮.೦ | ೮.೦ |
| ಒಟ್ಟು | | ೩೨ | | ೪೧೩.೩ |

ಆಧಾರ : ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ನಿಗಮ, ಬೆಂಗಳೂರು.

ಜಿಲ್ಲೆಯಲ್ಲಿ ೨೦೦೦–೨೦೦೧ ಹಾಗೂ ೨೦೦೧–೨೦೦೨ರಲ್ಲಿದ್ದಂತೆ ಗೃಹಬಳಕೆ, ಭಾಗ್ಯಜ್ಯೋತಿ, ಸಂಪೂರ್ಣ ವಿದ್ಯುತ್, ವಾಣಿಜ್ಯ ದೀಪ ಮುಂತಾದ ಪ್ರವರ್ಗವಾರು ಬಳಕೆದಾರರ ವಿವರಗಳನ್ನು ಕೋಷ್ಟಕ ೫.೨ರಲ್ಲಿ ನೀಡಿದೆ.

**ಕೋಷ್ಟಕ ೫.೨ ಜಿಲ್ಲೆಯಲ್ಲಿ ೨೦೦೦–೨೦೦೧ ಮತ್ತು ೨೦೦೧–೨೦೦೨ರಲ್ಲಿದ್ದ ವರ್ಗಾವಾರು ವಿದ್ಯುತ್ ಬಳಕೆದಾರರ ವಿವರ (ಸಂಖ್ಯೆಗಳಲ್ಲಿ)**

| ಕ್ರ.ಸಂ. | ೨೦೦೦–೨೦೦೧ | ೨೦೦೧–೨೦೦೨ |
|---|---|---|
| ೧ | ೨ | ೩ |
| ೧ ಗೃಹಬಳಕೆ | ೨,೦೫,೮೦೬ | ೨,೨೩,೧೩೯ |
| ೨ ಸರ್ವ ವಿದ್ಯುತ್ ಗೃಹಗಳು | ೧೮,೪೭೦ | ೧೮,೯೪೬ |
| ೩ ವಾಣಿಜ್ಯ ವಿದ್ಯುತ್ | ೨೫,೦೪೧ | ೨೬,೬೬೩ |
| ೪ ಕುಡಿಯುವ ನೀರು | ೨,೦೧೫ | ೨,೧೮೩ |
| ೫ ಎಲ್ ಟಿ ವಿದ್ಯುತ್ | ೯,೯೧೬ | ೧೦,೧೬೮ |
| ೬ ನೀರಾವರಿ ಪಂಪ್ ಸೆಟ್ಟುಗಳು | ೩೯,೮೪೦ | ೪೧,೭೦೯ |

| ೧ | ೨ | ೩ |
|---|---|---|
| ೭ ಬೀದಿ ದೀಪಗಳು | ೨೯,೬೭೭ | ೨೯,೭೬೮ |
| ೮ ಹೆಚ್.ಟಿ.ಸೌಲಭ್ಯ | ೬೩ | ೬೪ |
| ೯ ಭಾಗ್ಯಜ್ಯೋತಿ/ಕುಟೀರಜ್ಯೋತಿ | ೮೪,೫೧೧ | ೯೦,೭೫೯ |
| ೧೦ ಒಟ್ಟು (ಬೀದಿ ದೀಪಗಳನ್ನು ಬಿಟ್ಟು) | ೩,೮೫,೬೬೨ | ೪,೧೩,೬೧೩ |

ಆಧಾರ : ವಾರ್ಷಿಕ ಆಡಳಿತ ವರದಿ, ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ನಿಗಮ ಬೆಂಗಳೂರು

ಮಂಡ್ಯ ಜಿಲ್ಲೆಯಲ್ಲಿ ೨೦೦೧–೨೦೦೨ರಲ್ಲಿದ್ದ ತಾಲೂಕುವಾರು ಜನವಸತಿ ಹೊಂದಿದ ಗ್ರಾಮಗಳು, ವಿದ್ಯುತ್ ಸೌಲಭ್ಯ ಪಡೆದಿರುವ ಗ್ರಾಮಗಳು ಮತ್ತು ಉಪಗ್ರಾಮಗಳು ಮತ್ತು ವಿದ್ಯುತ್ ಸೌಲಭ್ಯ ಪಡೆದಿರುವ ಪಂಪುಸೆಟ್ಟುಗಳ ವಿವರಗಳನ್ನು ಕೋಷ್ಟಕ ೫.೩ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೩**

| ತಾಲೂಕು | ಜನವಸತಿಯಿರುವ ಗ್ರಾಮಗಳ ಸಂಖ್ಯೆ | ವಿದ್ಯುತ್ ಸೌಲಭ್ಯ ಪಡೆದಿರುವ ಗ್ರಾಮಗಳ ಸಂಖ್ಯೆ | ವಿದ್ಯುತ್ ಸೌಲಭ್ಯ ಪಡೆದಿರುವ ಉಪ ಗ್ರಾಮಗಳ ಸಂಖ್ಯೆ | ವಿದ್ಯುತ್ ಸೌಲಭ್ಯ ಪಡೆದಿರುವ ನೀರಾವರಿ ಪಂಪ್ ಸೆಟ್ಟುಗಳು |
|---|---|---|---|---|
| ೧ | ೨ | ೩ | ೪ | ೫ |
| ೧. ಕೃಷ್ಣರಾಜಪೇಟೆ | ೨೯೬ | ೨೮೯ | ೫೭ | ೮೫೩೫ |
| ೨. ಮದ್ದೂರು | ೧೫೩ | ೧೫೩ | ೭೩ | ೬೦೨೧ |
| ೩. ಮಳವಳ್ಳಿ | ೧೭೨ | ೧೬೯ | ೫೭ | ೯೧೧೯ |
| ೪. ಮಂಡ್ಯ | ೧೭೪ | ೧೭೩ | ೭೪ | ೫೯೧೨ |
| ೫. ನಾಗಮಂಗಲ | ೩೪೩ | ೩೪೩ | ೧೪೦ | ೫೮೧೩ |
| ೬. ಪಾಂಡವಪುರ | ೧೪೦ | ೧೩೯ | ೪೨ | ೪೩೫೨ |
| ೭. ಶ್ರೀರಂಗಪಟ್ಟಣ | ೮೭ | ೮೫ | ೨೫ | ೧೯೫೭ |
| ಒಟ್ಟು | ೧೩೬೫ | ೧೩೫೧ | ೪೬೮ | ೪೧೭೦೯ |

ಆಧಾರ : ವಾರ್ಷಿಕ ಆಡಳಿತ ವರದಿ ೨೦೦೦–೨೦೦೧ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಜಿಲ್ಲೆಯಲ್ಲಿ ೨೦೦೧ರ ಜನಗಣತಿಯ ಪ್ರಕಾರ ಒಟ್ಟು ೧,೩೬೫ ವಸತಿ ಗ್ರಾಮಗಳಿದ್ದು, ೨೦೦೨ರ ಮಾರ್ಚ್, ಅಂತ್ಯದ ವೇಳೆಗೆ ೧,೩೫೧ ವಸತಿ ಗ್ರಾಮಗಳು ವಿದ್ಯುತ್ ಸೌಲಭ್ಯ ಪಡೆದುಕೊಂಡಿದ್ದವು. ಇದೇ ಕಾಲಾವಧಿಯಲ್ಲಿ ಒಟ್ಟು ೪೬೮ ಉಪಗ್ರಾಮಗಳು ವಿದ್ಯುತ್ ಸೌಲಭ್ಯ ಪಡೆದಿದ್ದವು. ಒಟ್ಟು ೪೧,೭೦೯ ನೀರಾವರಿ ಪಂಪ್‌ಸೆಟ್ಟುಗಳು ಸಹ ವಿದ್ಯುತ್ ಸೌಲಭ್ಯ ಪಡೆದಿದ್ದವು.

# ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು

## ಸಕ್ಕರೆ ಕಾರ್ಖಾನೆ

ಸಕ್ಕರೆ ಕಾರ್ಖಾನೆಯು ರಾಷ್ಟ್ರದ ಪ್ರಮುಖ ಕೈಗಾರಿಕೆಗಳಲ್ಲಿ ಒಂದಾಗಿದೆ. ಭಾರತ ಸರ್ಕಾರವು ೧೯೩೨ರಲ್ಲಿ ಸಕ್ಕರೆ ಕಾರ್ಖಾನೆಗಳ ಕಾಯ್ದೆಯನ್ನು (ಸಂರಕ್ಷಣಾ ಕಾಯ್ದೆ) ಜಾರಿಗೆ ತಂದು, ಭಾರತದ ಸಕ್ಕರೆ ಕಾರ್ಖಾನೆಗಳಿಗೆ ೧೫ ವರ್ಷಗಳ ಸಂರಕ್ಷಣೆಯನ್ನು ಒದಗಿಸಿದುದರ ಪರಿಣಾಮವಾಗಿ, ಸಕ್ಕರೆ ಕಾರ್ಖಾನೆಗಳು ಪ್ರಾರಂಭವಾದವು. ಮೈಸೂರು ಸರ್ಕಾರವು ಅದಕ್ಕೂ ಮೊದಲೇ ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಯ ಸ್ಥಾಪನೆಗೆ ಪ್ರಯತ್ನಿಸಿತ್ತು. ಆದರೆ ಉದ್ದಿಮೆದಾರರು ಕಬ್ಬಿನ ಬೆಳೆಯನ್ನು ಕಾಣದೆ ಕಾರ್ಖಾನೆಯ ಮೇಲೆ ಬಂಡವಾಳವನ್ನು ತೊಡಗಿಸಲು ಹಿಂಜರಿಯತೊಡಗಿದ್ದು, ರೈತರು ತಾವು ಬೆಳೆಯುವ ಕಬ್ಬಿಗೆ ಮಾರುಕಟ್ಟೆ ಸೌಲಭ್ಯ ಸ್ಪಷ್ಟವಾಗಿ ಗೋಚರಿಸದೇ ಇದ್ದುದರಿಂದ ಕಬ್ಬನ್ನು ಬೆಳೆಯಲು ಹಿಂಜರಿಯುತ್ತಿದ್ದರು. ಇದರಿಂದಾಗಿ ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳ ಸ್ಥಾಪನೆ ವಿಳಂಬಗೊಂಡಿತು. ಕೃಷ್ಣರಾಜಸಾಗರ ಅಣೆಕಟ್ಟು ೧೯೩೨ರಲ್ಲಿ ನಿರ್ಮಾಣವಾಗಿ ಇರ್ವಿನ್ ನಾಲಾ ಕಾರ್ಯ ಪೂರ್ಣಗೊಂಡ ಮೇಲೆ ಮಂಡ್ಯ ಜಿಲ್ಲೆಯ ಮದ್ದೂರು, ಮಂಡ್ಯ ಮತ್ತು ಮಳವಳ್ಳಿ ತಾಲೂಕುಗಳಲ್ಲಿ ಸುಮಾರು ೧,೨೦,೦೦೦ ಎಕರೆ ಭೂಮಿ ನೀರಾವರಿ ಸೌಲಭ್ಯವನ್ನು ಪಡೆಯುವಂತಾಯಿತು. ನಾಲಾ ನೀರಿನ ತೆರಿಗೆಯ ಭಾರವನ್ನು ಕಡಿಮೆ ಮಾಡಿಕೊಳ್ಳಬೇಕಾದರೆ ವಾಣಿಜ್ಯ ಬೆಳೆಯಾದ ಕಬ್ಬನ್ನು ಅಧಿಕ ಪ್ರಮಾಣದಲ್ಲಿ ಬೆಳೆಯುವುದು ಜಿಲ್ಲೆಯ ರೈತರಿಗೆ ಅನಿವಾರ್ಯವಾಯಿತು. ಸರ್ಕಾರವು ತನ್ನ ಕೃಷಿ ಕ್ಷೇತ್ರದ ೧೦ ಎಕರೆಯಲ್ಲಿ ಪ್ರದರ್ಶನಾರ್ಥವಾಗಿ ಹೆಚ್.ಎಂ.೩೨೦ ತಳಿಯನ್ನು ಬೆಳೆದು, ಅಧಿಕ ಇಳುವರಿ ಕಬ್ಬನ್ನು ಬೆಳೆಯಲು ರೈತರಿಗೆ ನೆರವನ್ನೊದಗಿಸಿತು. ಕೃಷಿ ಇಲಾಖೆಯು ಖಾಸಗಿ ರೈತರಿಗೆ ಕಬ್ಬು ಬೆಳೆಯಲು ಅವಶ್ಯಕವಾದ ಉಪಕರಣ, ರಾಸಾಯನಿಕ ಗೊಬ್ಬರ ಮೊದಲಾದವುಗಳನ್ನು ಕೊಳ್ಳಲು ಮುಂಗಡ ಹಣವನ್ನು ಮಂಜೂರು ಮಾಡಿ ರೈತರು ಕಬ್ಬನ್ನು ಬೆಳೆಯಲು ಪ್ರೇರೇಪಿಸಿತು. ಭಾರತ ಸರ್ಕಾರದ ಸಂರಕ್ಷಣಾ ಕಾಯ್ದೆ, ರಾಜ್ಯ ಸರ್ಕಾರದ ಬೆಂಬಲ ಮತ್ತು ರೈತರ ಪ್ರೋತ್ಸಾಹದಿಂದ ರಾಜ್ಯದಲ್ಲಿ ಎರಡು ಸಕ್ಕರೆ ಕಾರ್ಖಾನೆಗಳು ಪ್ರಾರಂಭಗೊಂಡವು. ಅವುಗಳಲ್ಲಿ ಒಂದು ಮಂಡ್ಯದಲ್ಲೂ, ಮತ್ತೊಂದು ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲೂ ಕಾರ್ಯಾರಂಭಿಸಿದವು. ಮಂಡ್ಯ ಜಿಲ್ಲೆಯಲ್ಲಿ ೨೦೦೨ನೇ ಮಾರ್ಚ್ ಅಂತ್ಯದ ವೇಳೆಗೆ ನಾಲ್ಕು ಸಕ್ಕರೆ ಕಾರ್ಖಾನೆಗಳು ಮತ್ತು ಆರು ಖಂಡಸಾರಿ ಸಕ್ಕರೆ ಕಾರ್ಖಾನೆಗಳೂ ಸಕ್ಕರೆ ಉತ್ಪಾದನಾ ಕಾರ್ಯದಲ್ಲಿ ತೊಡಗಿದ್ದವು.

## ಮೈಸೂರು ಸಕ್ಕರೆ ಕಂಪೆನಿ

ಭಾರತದ ಇಂಪೀರಿಯಲ್ ಕೌನ್ಸಿಲ್ ಆಫ್ ಅಗ್ರಿಕಲ್ಚರ್ ರೀಸರ್ಚ್‌ನ ಸಕ್ಕರೆ ತಜ್ಞರಾದ ಆರ್.ಸಿ.ಶ್ರೀವಾಸ್ತವರವರು ೧೯೩೨ರ ಮಾರ್ಚ್‌ನಲ್ಲಿ ದಕ್ಷಿಣದ ನಾಲಾ ಪ್ರದೇಶದಲ್ಲಿ ಸಕ್ಕರೆ ಮತ್ತು ಬೆಲ್ಲ ತಯಾರಿಕೆ ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಿಸಿದ ಜ್ಞಾಪನಾ ಪತ್ರವು ಮೈಸೂರು ಸರ್ಕಾರ, ದಕ್ಷಿಣದ ಉದ್ಯಮಿಗಳು ಮತ್ತು ರೈತರು ಕಣ್ಣು ತೆರೆಯುವಂತೆ ಮಾಡಿತು. ಇಲ್ಲಿಯವರೆಗೂ ನಾಲಾ ಬೈಲಿನಲ್ಲಿ ಬೆಳೆದ ಕಬ್ಬು ಬೆಲ್ಲ ತಯಾರಿಕೆಯನ್ನು ಮಾತ್ರ ಅವಲಂಬಿಸಿತ್ತು. ಉತ್ತರ ಭಾರತದಲ್ಲಿ ಬೆಲ್ಲದ ಬೇಡಿಕೆ ಸಂಪೂರ್ಣವಾಗಿ ಕುಸಿದಿದ್ದುದರಿಂದ ಮತ್ತು ಜನರಲ್ಲಿ ಬೆಲ್ಲದ ಅಭಿರುಚಿ ಬದಲಾಗಿ ಸಕ್ಕರೆಗೆ ಬೇಡಿಕೆ ಹೆಚ್ಚುತ್ತಿದ್ದುದರಿಂದ ನಾಲಾ ಬಯಲಿನಲ್ಲಿ ಸಕ್ಕರೆ ಕೈಗಾರಿಕೆ ಲಾಭದಾಯಕ ಉದ್ದಿಮೆಯಾಗುವುದೆಂದು ಆರ್.ಸಿ.ಶ್ರೀವಾಸ್ತವರವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಅವರಿಂದ ಪ್ರೇರಿತರಾದ ಮೈಸೂರು ಸರ್ಕಾರದ ಕೃಷಿ ಹಾಗೂ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖಾ ನಿರ್ದೇಶಕರು ಜಂಟಿಯಾಗಿ ಇರ್ವಿನ್ ನಾಲಾ ಪ್ರದೇಶದಲ್ಲಿ ಒಂದು ಕಾರ್ಖಾನೆಯ ಸ್ಥಾಪನೆ ಎಂಬ ಶೀರ್ಷಿಕೆಯಡಿ ತಯಾರಿಸಿದ

ಕೈಪತ್ರ ಮಂಡ್ಯದ ಸಕ್ಕರೆ ಕಾರ್ಖಾನೆಯ ಸ್ಥಾಪನೆಗೆ ನಾಂದಿಯಾಯಿತು. ಅವರು ಅಭಿಪ್ರಾಯಪಟ್ಟಿದ್ದಂತೆ ೧೯೩೩ರ ಮಾರ್ಚ್ ವೇಳೆಗೆ ೧೬೦ ಎಕರೆ ಕಬ್ಬು ಸರ್ಕಾರಿ ಕೃಷಿ ಕ್ಷೇತ್ರದಿಂದಲೂ (ಫಾರಂನಿಂದ) ಮತ್ತು ೨೦ ಎಕರೆ ಕಬ್ಬು ರೈತರಿಂದಲೂ ಪೂರೈಕೆಯಾಗುವುದೆಂದೂ, ಪ್ರಾರಂಭದಲ್ಲಿ ಕಾರ್ಖಾನೆಯ ಚಾಲನೆಗೆ ಇಷ್ಟು ಕಬ್ಬು ಸಾಕಾಗುವುದೆಂದೂ ಮತ್ತು ೧೯೩೪ಕ್ಕೆ ೫೦೦ ಎಕರೆ ರೈತರಿಂದಲೂ ಮತ್ತು ೧೫೦ ಎಕರೆ ಕೃಷಿ ಕ್ಷೇತ್ರದಿಂದಲೂ ಸೇರಿ ಒಟ್ಟು ೬೫೦ ಎಕರೆ ಪ್ರದೇಶದಲ್ಲಿ ಕಬ್ಬು ಬೆಳೆದು ಕಾರ್ಖಾನೆಗೆ ಪೂರೈಕೆ ಆಗುವುದೆಂದು ಅಂದಾಜಿಸಿದರು. ೧೯೩೪ರ ಕಬ್ಬಿನ ಬೆಳೆಯ ಲಾಭಾಂಶದಿಂದ ಪ್ರೇರಿತರಾದ ರೈತರು ೧೯೩೫ನೇ ಇಸವಿಯಲ್ಲಿ ೨೫೦೦ ಎಕರೆ ಪ್ರದೇಶದಲ್ಲಿ ಕಬ್ಬನ್ನು ಬೆಳೆದು ಕಾರ್ಖಾನೆಗೆ ಪೂರೈಸಲು ಸಮರ್ಥರಾಗುವರೆಂದೂ ಸಹ ಅಭಿಪ್ರಾಯಪಟ್ಟಿದ್ದರು. ಈ ಅಂಕಿ ಸಂಖ್ಯೆಗಳು ಫಲಪ್ರದವಾಗಬೇಕಾದರೆ, ಸಕ್ಕರೆ ಕಾರ್ಖಾನೆ ೧೯೩೩ ಮಾರ್ಚ್ ವೇಳೆಗೆ ಕಾರ್ಯರೂಪಗೊಳ್ಳಬೇಕೆಂದೂ, ಇಲ್ಲದಿದ್ದರೆ ಸುಮಾರು ೭೦,೦೦೦ ರೂಪಾಯಿಗಳಷ್ಟು ನಷ್ಟ ಉಂಟಾಗಿ ಮುಂದಿನ ವರ್ಷಗಳ ಕಬ್ಬಿನ ಬೆಳೆಯಲ್ಲಿ ಕುಂಠಿತ ಉಂಟಾಗುತ್ತದೆ ಎಂದೂ ತಿಳಿಸಿದ್ದರು. ಇದರ ಜೊತೆಗೆ ಕಾರ್ಖಾನೆಯ ಆಡಳಿತ ವ್ಯವಸ್ಥೆ ಸರ್ಕಾರದ್ದಾಗಿರಬೇಕೆಂದೂ, ಕಾರ್ಖಾನೆಯ ಆಡಳಿತ ಮಂಡಳಿಯಲ್ಲಿ ಮೈಸೂರಿನ ಕಂದಾಯ ಆಯುಕ್ತರು, ಕೃಷಿ ನಿರ್ದೇಶಕರು ಮತ್ತು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖಾ ನಿರ್ದೇಶಕರು ಇರಬೇಕೆಂದೂ ಅಭಿಪ್ರಾಯಪಟ್ಟಿದ್ದರು. ೧೯೩೩–೩೪ರ ವೇಳೆಗೆ ದಿನ ಒಂದಕ್ಕೆ ೬೦ ಟನ್ ಕಬ್ಬು ಅರೆಯುವ ಸಾಮರ್ಥ್ಯವಿರುವ ಯಂತ್ರವನ್ನು ಹಾಗೂ ೧೯೩೫ರ ವೇಳೆಗೆ ದಿನ ಒಂದಕ್ಕೆ ೪೦೦ ರಿಂದ ೬೦೦ ಟನ್ ಕಬ್ಬು ಅರೆಯುವ ಸಾಮರ್ಥ್ಯವಿರುವ ಯಂತ್ರವನ್ನು ಜೋಡಿಸಬೇಕೆಂದೂ ವರದಿಯಲ್ಲಿ ತಿಳಿಸಿದ್ದರು.

ಕಾರ್ಖಾನೆಗೆ ಸಾಕಾಗುವಷ್ಟು ಕಬ್ಬು ಪೂರೈಕೆಯಾಗುವುದು ಖಚಿತವಾಗಿದ್ದರಿಂದ ರೂ.೨೦ ಲಕ್ಷ ಬಂಡವಾಳದೊಂದಿಗೆ ಕೂಡು ಬಂಡವಾಳ ಸಂಸ್ಥೆ (ಜಾಯಿಂಟ್ ಸ್ಟಾಕ್ ಕಂಪೆನಿ) ೧೯೩೩ನೇ ಇಸವಿ ಜನವರಿ ಮಾಹೆಯಲ್ಲಿ ಮಂಡ್ಯದಲ್ಲಿ ನೋಂದಣಿಗೊಂಡಿತು. ಇದರ ಷೇರು ಬಂಡವಾಳದ ಶೇಕಡ ೬೦ರಷ್ಟು ಷೇರುಗಳನ್ನು ಸರ್ಕಾರ ಕೊಂಡುಕೊಳ್ಳುವುದರ ಮೂಲಕ ಖಾಸಗಿಯವರಿಗೆ ಕಂಪೆನಿಯ ವಿಷಯದಲ್ಲಿ ನಂಬಿಕೆ ಬರುವಂತೆ ಮಾಡಿತು. ಕಂಪೆನಿಯು ಸಕ್ಕರೆ ಘಟಕಕ್ಕೆ ಬೇಕಾಗುವ ಯಂತ್ರಗಳನ್ನು ಸ್ಕಾಟ್ಲೆಂಡ್ ಮಿರ್ಲೀಸ್ ವಾಟರ್ ಸನ್ ಕಂಪೆನಿಯಿಂದ ಪಡೆಯಲು ಒಪ್ಪಂದ ಮಾಡಿಕೊಂಡಿತು. ಕಬ್ಬಿನ ಋತುಮಾನಕ್ಕೆ ಸರಿಯಾಗಿ ಕಾರ್ಖಾನೆಯ ಸ್ಥಾಪನಾ ಕಾರ್ಯ ಪೂರ್ಣಗೊಂಡು ದಿನಾಂಕ ೧೫–೧೨–೧೯೩೩ರಂದು ದಿನ ಒಂದಕ್ಕೆ ೪೦೦ ಟನ್ ಕಬ್ಬನ್ನು ಅರೆಯುವ ಸಾಮರ್ಥ್ಯವಿರುವ ಯಂತ್ರವು, ಉತ್ಪಾದನಾ ಕಾರ್ಯವನ್ನಾರಂಭಿಸಿತು. ಇದರ ಪೂರ್ಣ ಪ್ರಮಾಣದ ಉತ್ಪಾದನಾ ಕಾರ್ಯಾರಂಭ ೧೯೩೪ರ ಜನವರಿಯ ಆದಿಭಾಗದಲ್ಲಾಯಿತು. ಆ ಸಾಲಿನಲ್ಲಿ ೫೩,೧೯ ಟನ್ ಕಬ್ಬನ್ನು ಅರೆಯಲಾಯಿತು. ಆ ಪೈಕಿ ೧೯,೫೦೨ ಟನ್ ಕಬ್ಬನ್ನು, ಮುಂಗಡ ಪಡೆದ ರೈತರಿಂದ ಟನ್ ಒಂದಕ್ಕೆ ೧೨ ರೂ.ನಂತೆ ಕೊಂಡಿದ್ದೇ ಅಲ್ಲದೇ ಒಪ್ಪಿಗೆದಾರರಿಗೆ ಸಾರಿಗೆ ವೆಚ್ಚದ ಅರ್ಧದಷ್ಟು ಹಣವನ್ನು ಕಂಪೆನಿಯು ತುಂಬಿಕೊಟ್ಟಿತು. ಕಾರ್ಖಾನೆಯ ಯಶಸ್ವಿ ಕಾರ್ಯಾರಂಭದಿಂದ ಮತ್ತು ರೈತರಿಗೆ ಆಕರ್ಷಕ ಬೆಲೆ ದೊರಕಿದುದರ ಪರಿಣಾಮವಾಗಿ, ಕೇವಲ ಮೂರೇ ತಿಂಗಳಲ್ಲಿ ಅಧಿಕ ರೈತರಿಂದ ಕಬ್ಬನ್ನು ಬೆಳೆದು ಕಾರ್ಖಾನೆಗೆ ಪೂರೈಕೆ ಮಾಡಲು ಅನುಮತಿ ನೀಡಬೇಕೆಂಬ ಬೇಡಿಕೆಯುಂಟಾಯಿತು. ಇದರಿಂದಾಗಿ ದಿನ ಒಂದಕ್ಕೆ ಕಬ್ಬನ್ನು ಅರೆಯುವ ಸಾಮರ್ಥ್ಯವನ್ನು ೬೦೦ ಟನ್‌ಗೆ ಹೆಚ್ಚಳಗೊಳಿಸಿ, ಮೊದಲನೆಯ ವರ್ಷದಲ್ಲಿಯೇ ಕಂಪೆನಿಯು ೩,೦೭,೫೦೦ ರೂಪಾಯಿಗಳ ನಿವ್ವಳ ಲಾಭಗಳಿಸಿ ತನ್ನ ಷೇರುದಾರರಿಗೆ ಶೇಕಡ ೧೦ ರಂತೆ ಲಾಭಾಂಶ ನೀಡಿತು. ಇದರಿಂದ ಉತ್ತೇಜಿತರಾದ ರೈತರು ಅಧಿಕ ಪ್ರಮಾಣದ ಕಬ್ಬನ್ನು ಬೆಳೆದು ಕಾರ್ಖಾನೆಗೆ ಪೂರೈಕೆ ಮಾಡಲು ಮುಂದೆ ಬಂದುದರಿಂದ ಆಡಳಿತ ಮಂಡಳಿಯು ಕಬ್ಬನ್ನು ಅರೆಯುವ ಸಾಮರ್ಥ್ಯವನ್ನು ಹೆಚ್ಚಿಸಲು ತೀರ್ಮಾನಿಸಿ ದಿನ ಒಂದಕ್ಕೆ ೧,೪೦೦ ಟನ್ ಕಬ್ಬು

ಅರೆಯುವ ಸಾಮರ್ಥ್ಯವುಳ್ಳ ಬಿ.ಮಿಲ್.ಯಂತ್ರವನ್ನು ಅಳವಡಿಸಿ, ದಿನಾಂಕ ೨೬-೮-೧೯೩೫ರಂದು ಚಾಲನೆಗೊಳ್ಳುವಂತೆ ಮಾಡಿತು.

**ಕಂಪೆನಿಯ ಏತ ನೀರಾವರಿ ಯೋಜನೆ**

ಮಂಡ್ಯ ತಾಲೂಕಿನ ಇರ್ವಿನ್ ನಾಲಾ ಬಯಲಿನ ಮೇಲ್ಭಾಗದಲ್ಲಿ, ೮೦೦ ಎಕರೆಯಷ್ಟು ಜಮೀನು ಕಂದಾಯ ರಹಿತ ಬಂಜರು ಭೂಮಿಯಾಗಿರುವುದನ್ನು ಕಂಪೆನಿಯು ಸ್ವಂತ ಖರ್ಚಿನಿಂದ ಸರ್ವೆ ಮಾಡಿಸಿ ದೃಢಪಡಿಸಿಕೊಂಡು ಅದನ್ನು ಏತ ನೀರಾವರಿ ಸೌಲಭ್ಯಕ್ಕೊಳಪಡಿಸಲು ಯೋಗ್ಯವೆಂದು ಪರಿಗಣಿಸಿತ್ತು. ಆ ಭೂಮಿಯು ಮಂಡ್ಯ ತಾಲೂಕಿನ ಮಲ್ಲಿಗೆರೆ, ಶಂಭೂನಹಳ್ಳಿ ಗ್ರಾಮಗಳಲ್ಲೂ ಮತ್ತು ಮಲ್ಲಿಗೆರೆಯ ಕಂಪೆನಿ ಫಾರಂ ಪಕ್ಕದಲ್ಲಿಯೂ ಇತ್ತು. ವಿದ್ಯುಚ್ಛಕ್ತಿ ಇಲಾಖೆಯು ೧೫ ಲೋಡಿನ ವಿದ್ಯುತ್ ಸರಬರಾಜು ಮಾಡಿ ಪ್ರತೀ ಕಿ.ವ್ಯಾ.ಗೆ ೩/೪ ಆಣೆ (ಸುಮಾರು ಐದು ಪೈಸೆ) ಬೆಲೆಯಲ್ಲಿ ವಿದ್ಯುತ್ ಒದಗಿಸಲು ಒಪ್ಪಿತ್ತು. ಅಲ್ಲದೆ ವಾರ್ಷಿಕ ಕನಿಷ್ಠ ೭೦೦ ರೂ.ಗಳಂತೆ ಐದು ವರ್ಷಗಳ ಕಂದಾಯ ಸಂದಾಯ ಮಾಡಬೇಕೆಂಬ ವಿದ್ಯುತ್ ಇಲಾಖೆಯ ಷರತ್ತನ್ನೂ ಸಹ ಕಂಪೆನಿಯು ಒಪ್ಪಿಕೊಂಡಿತು.

ಮೈಸೂರು ಸರ್ಕಾರ ನೀಡಿದ ಆದೇಶ ಪತ್ರ ಸಂಖ್ಯೆ ಆರ್.೨೩೨-೬ ದಿನಾಂಕ ೧೬-೭-೧೯೩೭, ಬೆಂಗಳೂರು ಪ್ರಕಾರ (೧) ಮಂಡ್ಯ ತಾಲೂಕಿನ ಮಲ್ಲಿಗೆರೆ ಗ್ರಾಮ, ಶಂಭೂನಹಳ್ಳಿ ಗ್ರಾಮ ಮತ್ತು ಮಲ್ಲಿಗೆರೆ ಕಂಪೆನಿ ಫಾರಂ ಪಕ್ಕದಲ್ಲಿರುವ ಸರ್ಕಾರಿ ಬಂಜರು ಭೂಮಿಯಲ್ಲಿ ಎಕರೆ ಒಂದಕ್ಕೆ ಐದು ರೂ.ಗಳಂತೆ ೧೦೦ ಎಕರೆ ಪ್ರದೇಶವನ್ನು ಮಂಜೂರು ಮಾಡಿ ಉಳಿದ ೭೦೦ ಎಕರೆ ಪ್ರದೇಶವನ್ನು ಕಂಪೆನಿಯು ತದನಂತರ ಉಪಯೋಗಿಸಿಕೊಳ್ಳಲು ಕಾಯ್ದಿರಿಸಲಾಯಿತು. (೨) ಕಂಪೆನಿಯು ಮದ್ದೂರು ಮುಖ್ಯ ಕಾಲುವೆಯಿಂದ ನೀರನ್ನು ಏತ ನೀರಾವರಿಗೆ ಉಪಯೋಗಿಸಿಕೊಳ್ಳಲು ಎಕರೆ ಒಂದಕ್ಕೆ ೨-೮-೦ (ರೂ.೨.೫೦) ಯಂತೆ ನೀರಿನ ದರ ಕೊಡಲು ಮತ್ತು ನೀರಾವರಿಯ ಸವಲತ್ತನ್ನು ಬಳಸಿಕೊಳ್ಳದೇ ಇರುವ ಭೂಮಿಗೆ ಸರ್ವೆ ಇಲಾಖೆಯು ನಿಗದಿಪಡಿಸಿರುವ ಕಂದಾಯವನ್ನು ಪಾವತಿ ಮಾಡಲು ಸಮ್ಮತಿಸಲಾಯಿತು. (೩) ಏತ ನೀರಾವರಿಗೆ ಬೇಕಾಗುವ ವಿದ್ಯುಚ್ಛಕ್ತಿಯನ್ನು ಕಿ.ವ್ಯಾ. ಒಂದಕ್ಕೆ ೩/೪ ಆಣೆ (ಸುಮಾರು ಐದು ಪೈಸೆ) ಯಂತೆ ೧೫ ಹೆಚ್.ಪಿ ಲೋಡ್‌ನಲ್ಲಿ ಪಡೆಯಲು ವಿದ್ಯುಚ್ಛಕ್ತಿ ಇಲಾಖೆ ನಿಗದಿಪಡಿಸಿದ ವಾರ್ಷಿಕ ೭೦೦ ರೂ.ನಂತೆ ಐದು ವರ್ಷ ಅವಧಿಯ ಗ್ಯಾರಂಟಿ ಹಣವನ್ನು ಭರ್ತಿ ಮಾಡಿ ವಿದ್ಯುತ್ ಅನ್ನು ಉಪಯೋಗಿಸಲು ಸಮ್ಮತಿಸಿ ಆದೇಶ ನೀಡಿತು.

ಈ ಕಾರ್ಖಾನೆಗೆ ಪೂರೈಕೆಯಾಗುವ ಕಬ್ಬನ್ನು ಸುತ್ತಮುತ್ತಲಿನ ಸುಮಾರು ೧೨,೦೦೦ ಎಕರೆ ಪ್ರದೇಶದಲ್ಲಿ ಬೆಳೆಯಲಾಗುತ್ತಿತ್ತು. ಕಂಪೆನಿಯು ೧೨ ರಿಂದ ೧೬ ತಿಂಗಳು ಮುಂಚಿತವಾಗಿಯೇ ಸುಮಾರು ೧೨,೦೦೦ ರೈತರಿಂದ ಕಾರ್ಖಾನೆಗೆ ಕಬ್ಬು ಪೂರೈಕೆಯ ಒಪ್ಪಿಗೆಯನ್ನು ಪಡೆದಿತ್ತು. ಇದರ ಜೊತೆಗೆ ಕಂಪೆನಿಯು ತನ್ನದೇ ಆದ ಹನ್ನೊಂದು ಪ್ಲಾಟುಗಳಲ್ಲಿ ಇದ್ದ ೨,೬೦೦ ಎಕರೆ ಭೂಮಿಯಲ್ಲಿ ಕಬ್ಬನ್ನು ಬೆಳೆದು ಉಪಯೋಗಿಸಿಕೊಳ್ಳುತ್ತಿತ್ತು. ಕಂಪೆನಿಯ ಫಾರಂಗಳು ಕಬ್ಬಿನ ಇಳುವರಿಗೆ ಮಾದರಿಯಾಗಿದ್ದು, ಪ್ರದರ್ಶನ ಕಾರ್ಯವನ್ನೂ ನಿರ್ವಹಿಸುತ್ತಿದ್ದವು. ಕಂಪೆನಿಯು ತನ್ನದೇ ಆದ ಫೀಲ್ಡ್‌ಮೆನ್, ಮೇಲ್ವಿಚಾರಕರನ್ನು ಸಾಕಷ್ಟು ಹೊಂದಿದ್ದು, ಒಪ್ಪಿಗೆದಾರರ ಕಬ್ಬಿನ ಮೇಲ್ವಿಚಾರಣಾ ಕಾರ್ಯವನ್ನು ನಿರ್ವಹಿಸುತ್ತಿದ್ದುದರಿಂದ ರೈತರು ಬೆಳೆಯುವ ಕಬ್ಬಿನ ಇಳುವರಿ ೧೯೩೩-೩೪ರಲ್ಲಿ ಎಕರೆಗೆ ೧೪ ಟನ್ ಇದ್ದ ಪ್ರಮಾಣವು ೧೯೩೮-೩೯ರಲ್ಲಿ ೨೮ ಟನ್‌ಗಳಿಗೇರಿತು. ಕೆಲವು ಪ್ಲಾಟುಗಳಲ್ಲಿ ಅದು ೫೦ ರಿಂದ ೬೦ ಟನ್‌ಗಳಷ್ಟಿತ್ತು. ಕಂಪೆನಿಯು ರೈತರಿಗೆ ಕೊಡುವ ಕಬ್ಬಿನ ಬೆಲೆಯು ಸಕ್ಕರೆ ಬೆಲೆಗನುಗುಣವಾಗಿ ವ್ಯತ್ಯಾಸ ಹೊಂದುತ್ತಿತ್ತು. ಸಕ್ಕರೆಯ ಅಂದಾಜು ಬೆಲೆಯನ್ನು ಆಧರಿಸಿ ರೈತರಿಗೆ ಕಬ್ಬಿನ ಬೆಲೆಯನ್ನು ನಿಗದಿಪಡಿಸಲಾಗುತ್ತಿತ್ತು.

ಸಕ್ಕರೆ ಬೆಲೆ ಹೆಚ್ಚಳಗೊಂಡರೆ ಬೋನಸ್ ರೂಪದಲ್ಲಿ ಹೆಚ್ಚಳಗೊಂಡ ಹಣ ರೈತರ ಕೈಸೇರುವಂತೆ ಮಾಡಲಾಗುತ್ತಿತ್ತು. ಈ ಕಾರ್ಖಾನೆಯು ವರ್ಷದಲ್ಲಿ ಸರಾಸರಿ ೨೫೦ಕ್ಕೂ ಹೆಚ್ಚು ದಿನ ಕೆಲಸ ಮಾಡುತ್ತಿತ್ತು. ಇದು ೧೯೪೮-೪೯ರಲ್ಲಿ ೩೪೧ ದಿನ ಕೆಲಸ ಮಾಡಿತು. ಇದರಿಂದ ರೈತರ ಕಬ್ಬು ಕಾಲಮೀರಿ ಕಟಾವು ಆಗುತ್ತಿದ್ದು ಮುಂದಿನ ಬೆಳೆಗೆ ಜಮೀನು ತೆರವಾಗುವುದಕ್ಕೆ ಅಡ್ಡಿಯಾಗುತ್ತಿದುದೇ ಅಲ್ಲದೇ ಕಾಲ ಮೀರಿ ಕಟಾವಾದ ಕಬ್ಬಿನಲ್ಲಿ ಸಕ್ಕರೆ ಅಂಶ ಕಡಿಮೆಯಾಗುತ್ತಿದ್ದುದರಿಂದ, ರೈತರು ಹಾಗೂ ಕಾರ್ಖಾನೆಗಳೆರಡಕ್ಕೂ ನಷ್ಟ ಸಂಭವಿಸುತ್ತಿತ್ತು. ಇದನ್ನು ಮನಗಂಡ ಸರ್ಕಾರವು ಕಾರ್ಖಾನೆಯ ಉತ್ಪನ್ನವನ್ನು ಹೆಚ್ಚಿಸಲು ಕಾರ್ಯಕ್ರಮ ರೂಪಿಸಿತು.

**ಕಾರ್ಖಾನೆಯ ವಿಸ್ತರಣಾ ಯೋಜನೆ**

ಕಾರ್ಖಾನೆಗೆ ಹೆಚ್ಚಿನ ಪ್ರಮಾಣದಲ್ಲಿ ಕಬ್ಬು ಪೂರೈಕೆಯಾಗಲು ಪ್ರಾರಂಭಗೊಂಡುದರ ಪರಿಣಾಮವಾಗಿ ಕಾರ್ಖಾನೆಯು ತನ್ನ ಕಬ್ಬು ಅರೆಯುವ ಸಾಮರ್ಥ್ಯವನ್ನು ೧೯೬೪ರಲ್ಲಿ ದಿನ ಒಂದಕ್ಕೆ ೨,೦೦೦ ಟನ್‌ಗೂ, ೧೯೬೮ರಲ್ಲಿ ಹಲವಾರು ತಾಂತ್ರಿಕ ಮಾರ್ಪಾಡುಗಳನ್ನು ಮಾಡಿ ಕೇಂದ್ರ ಸರ್ಕಾರದ ಅನುಮತಿಯೊಂದಿಗೆ ದಿನ ಒಂದಕ್ಕೆ ೨,೫೦೦ ಟನ್ ಕಬ್ಬು ಅರೆಯುವಂತೆ ವಿಸ್ತರಿಸಿಗೊಂಡಿತು. ಆ ಹೊತ್ತಿಗೆ ಶಿಥಿಲವಾಗಿದ್ದ ಎ.ಮಿಲ್ ಯಂತ್ರವನ್ನು ಮಾರಾಟ ಮಾಡಿ ೧೯೭೧-೭೨ರಲ್ಲಿ ದಿನ ಒಂದಕ್ಕೆ ೨,೫೦೦ ರಿಂದ ೩,೦೦೦ ಟನ್ ಕಬ್ಬು ಅರೆಯುವ ಸಾಮರ್ಥ್ಯವಿರುವ ಬೇರೊಂದು ಯಂತ್ರವನ್ನು ಅಳವಡಿಸಲಾಯಿತು. ಕಂಪೆನಿಯು ೧೯೩೩ನೇ ಇಸವಿಯಿಂದ ಹೊಂದಿದ್ದ ತನ್ನ ಅಧಿಕೃತ ಮೂಲ ಬಂಡವಾಳ ೨೦ ಲಕ್ಷ ರೂ.ಗಳನ್ನು ೧೯೬೪ರಲ್ಲಿ ೨೦೦ ಲಕ್ಷ ರೂ.ಗಳಿಗೆ ಹೆಚ್ಚಿಸಿಕೊಂಡಿತು. ಅದು ೧೯೯೩-೯೪ರಲ್ಲಿ ೨೭೩ ಲಕ್ಷ ರೂ.ಗಳಷ್ಟಾಗಿತ್ತು. ಕಂಪೆನಿಯ ಆಡಳಿತ ಮಂಡಳಿಯು ಕಾರ್ಖಾನೆಯ ವಿಸ್ತರಣಾ ಯೋಜನೆಯನ್ನು ರೂಪಿಸಿ ಮೂರು ಹಂತಗಳಲ್ಲಿ ರೂ. ೩೪೯ ಲಕ್ಷಗಳ ಅಂದಾಜು ವೆಚ್ಚದಲ್ಲಿ ಪೂರ್ಣಗೊಳಿಸಲು ೧೯೭೦ರಲ್ಲಿ ನಿರ್ಧರಿಸಿತು. ಯಂತ್ರಗಳ ಸರಬರಾಜು ವೆಚ್ಚ ಹೆಚ್ಚಾದುದರಿಂದ ತಾಂತ್ರಿಕ ಸಲಹಾ ಸಮಿತಿಯ ವರದಿಯ ಮೇರೆಗೆ ೧೯೭೪ರಲ್ಲಿ ೫೩೫ ಲಕ್ಷ ರೂ. ಅಂದಾಜು ವೆಚ್ಚಕ್ಕೆ ಆಡಳಿತ ಮಂಡಳಿಯು ಅಂಗೀಕಾರ ನೀಡಿತು. ಕಾರ್ಖಾನೆಯು ದಿನ ಒಂದಕ್ಕೆ ೫೦೦೦ ಟನ್ ಕಬ್ಬನ್ನು ಅರೆಯುವ ಪರವಾನಿಗಿಯನ್ನು ಕೇಂದ್ರಸರ್ಕಾರದಿಂದ ೧೯೭೩ರಲ್ಲಿ ಪಡೆದಿದ್ದರು. ಕಾರ್ಖಾನೆಯ ವಿಸ್ತರಣಾ ಯೋಜನೆಯು ೧೯೭೫ರಲ್ಲಿ ಪೂರ್ಣಗೊಂಡಿತು. ಕಾರ್ಖಾನೆಯ ಮೊದಲ ಅಧ್ಯಕ್ಷರು ಹಾಗೂ ಕಾರ್ಯನಿರ್ವಾಹಕರೂ ಆದ ಡಾ.ಲೆಸ್ಲಿ.ಸಿ.ಕೋಲ್‌ಮನ್‌ರವರು ಮುಂದಾಲೋಚಿಸಿ ಮೈಸೂರು ಸಂಸ್ಥಾನದ ಮೊದಲ ಕಾರ್ಖಾನೆಯಾದ ಮೈಸೂರು ಸಕ್ಕರೆ ಕಾರ್ಖಾನೆಗೆ ಯಾವುದೇ ಕಾರಣಕ್ಕೂ ಕಬ್ಬಿನ ಅಭಾವ ಉಂಟಾಗಬಾರದೆಂದು ೨೪ ಕೃಷಿ ಫಾರಂಗಳನ್ನು ಪ್ರಾರಂಭಿಸಿದ್ದರು. ಕಾರ್ಖಾನೆಯು ದಿನ ಒಂದಕ್ಕೆ ೪೦೦ ಟನ್ ಕಬ್ಬು ಅರೆಯುವ ಸಾಮರ್ಥ್ಯದೊಂದಿಗೆ ಪ್ರಾರಂಭಗೊಂಡು, ೧೯೭೪-೭೫ರ ವೇಳೆಗೆ ದಿನ ಒಂದಕ್ಕೆ ೫,೦೦೦ ಟನ್ ಕಬ್ಬನ್ನು ಅರೆಯುವ ಸಾಮರ್ಥ್ಯವನ್ನು ಪಡೆದುಕೊಂಡಿತು. ಈ ಕಾರ್ಖಾನೆಯು ತನ್ನ ಸುದೀರ್ಘ ಅವಧಿಯಲ್ಲಿ ಅನೇಕ ಏಳುಬೀಳುಗಳನ್ನು ಕಂಡಿದೆ. ಕೃಷ್ಣರಾಜಸಾಗರದಲ್ಲಿ ನೀರಿಲ್ಲದೆ ಸಂಕಷ್ಟಕ್ಕೊಳಗಾದ ದಿನಗಳಲ್ಲಿ ಕಂಪೆನಿಯು ತನ್ನ ಕೃಷಿ ಫಾರಂಗಳನ್ನು ಮಾರಿ ತನ್ನ ಅಸ್ತಿತ್ವ ಉಳಿಸಿಕೊಂಡಿದೆ. ಈಗ ಕಾರ್ಖಾನೆಯು ಸಕ್ಕರೆಯನ್ನು ತಯಾರಿಸಲು ಸಂಪೂರ್ಣವಾಗಿ ಕೃಷಿಕರು ಬೆಳೆಯುವ ಕಬ್ಬನ್ನೆ ಅವಲಂಬಿಸಿದೆ.

**ಭಟ್ಟಿ ಇಳಿಸುವ ಘಟಕ (ಡಿಸ್ಟಿಲರಿ)**

ಕಾರ್ಖಾನೆಯಲ್ಲಿ ಸಕ್ಕರೆಯನ್ನು ತಯಾರಿಸುವಾಗ ಬರುವ ಕಾಕಂಬಿಯನ್ನು ಸದುಪಯೋಗಪಡಿಸಿಕೊಳ್ಳುವ ಉದ್ದೇಶದಿಂದ ಪ್ರತಿಶತ ೯೬ರಷ್ಟು ಗುಣಮಟ್ಟವುಳ್ಳ ಮತ್ತು ದಿನ ಒಂದಕ್ಕೆ ೧೫೦೦ ಗ್ಯಾಲನ್ ರೆಕ್ಟಿಫೈಡ್ ಸ್ಪಿರಿಟ್

ಉತ್ಪಾದಿಸುವ ಆಧುನಿಕ ಭಟ್ಟಿ ಇಳಿಸುವ ಯಂತ್ರವನ್ನು ಕಂಪೆನಿಯ ಆವರಣದಲ್ಲಿ ೧೯೩೫ರಲ್ಲಿ ಸ್ಥಾಪಿಸಲಾಯಿತು. ಆನಂತರ ಇದರ ಉತ್ಪಾದನೆಯನ್ನು ೩.೭೫ ಲಕ್ಷ ಲೀಟರ್‌ಗೆ ಹೆಚ್ಚಿಸಲಾಗಿದೆ. ಸಾಲಿಯಾನ ೫೫ ಸಾವಿರ ಟನ್ ಕಾಕಂಬಿಯನ್ನು ಉಪಯೋಗಿಸಿಕೊಂಡು ಭಟ್ಟಿ ಇಳಿಸುವ ಈ ಯಂತ್ರಾಗಾರಕ್ಕೆ ಕಂಪೆನಿಯಲ್ಲಿ ಒದಗುವ ಕಾಕಂಬಿಯ ಜೊತೆಗೆ ಪಾಂಡವಪುರ, ಕೆ.ಎಂ.ದೊಡ್ಡಿ (ಭಾರತೀನಗರ), ಕಂಪ್ಲಿ ಮೊದಲಾದ ಸಕ್ಕರೆ ಕಾರ್ಖಾನೆಗಳಿಂದಲೂ ಕಾಕಂಬಿಯನ್ನು ಖರೀದಿಸಲಾಗುತ್ತಿದೆ. ಭಟ್ಟಿ ಇಳಿಸುವ ಮುನ್ನ ಕಾಕಂಬಿಯನ್ನು ಹದಗೊಳಿಸುವಾಗ ಬರುವ ಕಾರ್ಬನ್ ಡೈ ಆಕ್ಸೈಡ್ ಅನಿಲವನ್ನು ಶೇಖರಿಸಿ ಕಾರ್ಖಾನೆಯ ಆವರಣದಲ್ಲೇ ಉತ್ಪತ್ತಿ ಮಾಡುವ ಕಾರ್ಬನ್ ಅನಿಲವನ್ನು ಕಂಪನಿಯು ಸಾಲಿಯಾನ ೮೦೦ ಟನ್ ಅನಿಲವನ್ನು ಮಾರಾಟ ಮಾಡುತ್ತಿದೆ. ಸೋಡಾ ತಯಾರಿಕೆಗೆ ಬೇಕಾಗುವ ಈ ಅನಿಲಕ್ಕೆ ಹೆಚ್ಚಿನ ಬೇಡಿಕೆ ಇದೆ. ಮಾದಕ ಪಾನೀಯಗಳಾದ ಬ್ರಾಂದಿ, ವಿಸ್ಕಿ, ಜಿನ್ ಮತ್ತು ರಮ್‌ಗಳನ್ನು ಡಿಸ್ಟಿಲರಿಯಲ್ಲಿ ತಯಾರಿಸಿ ಮಾರುಕಟ್ಟೆಗೆ ಸರಬರಾಜು ಮಾಡಲಾಗುತ್ತಿದೆ. ಇಲ್ಲಿ ತಯಾರಿಸುವ ರಮ್ ಅನ್ನು ಸೈನ್ಯಕ್ಕೆ ಸರಬರಾಜಾಗುತ್ತಿದ್ದು, ಕೊಲ್ಲಿ ರಾಷ್ಟ್ರಗಳಿಗೆ ರಫ್ತಾಗುತ್ತಿದೆ. ಕಂಪನಿಯ ಆವರಣದಲ್ಲಿರುವ ಅಬ್ಸಲೂಟ್ ಆಲ್ಕೋಹಾಲ್ ಘಟಕವು ತಯಾರಿಸುವ ಅಬ್ಸಲೂಟ್ ಆಲ್ಕೋಹಾಲ್ ರಾಜ್ಯದಲ್ಲಿಯೇ ಹೆಸರುವಾಸಿಯಾಗಿದೆ. ಇದು ಔಷಧ ತಯಾರಿಕಾ ಘಟಕ, ಆಸ್ಪತ್ರೆ, ವಿದ್ಯಾಸಂಸ್ಥೆ ಮತ್ತು ಸಂಶೋಧನಾ ಸಂಸ್ಥೆಗಳಿಗೆ ಮಾರಾಟವಾಗುತ್ತಿದೆ. ಎರಡನೇ ಮಹಾಯುದ್ಧದ ಸಮಯದಲ್ಲಿ ರೈಲ್ವೆ ಇಂಜನ್, ಟ್ರಾಕ್ಟರ್ ಹಾಗೂ ಪೆಟ್ರೋಲ್ ಚಾಲಿತ ವಾಹನಗಳಿಗೆ ಉಪಯೋಗಿಸುವ ಸಲುವಾಗಿ ಪವರ್ ಆಲ್ಕೋಹಾಲನ್ನೂ ತಯಾರಿಸಲಾಯಿತು. ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಕಂಪನಿಗೆ ಅಸಿಟಿಕ್ ಆಸಿಡ್ ಅನ್ನು ಸರಬರಾಜು ಮಾಡುವ ಸಲುವಾಗಿ ಕಂಪನಿಯು ೧೯೬೬ರಲ್ಲಿ ದಿನ ಒಂದಕ್ಕೆ ೧೨ ಟನ್ ಅಸಿಟಿಕ್ ಆಸಿಡ್ ತಯಾರಿಸುವ ಸಾಮರ್ಥ್ಯವುಳ್ಳ ಅಸಿಟಿಕ್ ಆಸಿಡ್ ಘಟಕವನ್ನು ಕಾರ್ಯಾರಂಭಗೊಳಿಸಿತು. ಈ ಘಟಕವು ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಕಂಪನಿಗೆ ಮಾರುಕಟ್ಟೆಯ ಬೆಲೆಗಿಂತಲೂ ಕಡಿಮೆ ಬೆಲೆಗೆ ಅಸಿಟಿಕ್ ಆಸಿಡ್ ಅನ್ನು ಸರಬರಾಜು ಮಾಡುತ್ತಿತ್ತು ಅಲ್ಲದೆ ಇದನ್ನು ಫೋಟೋಫಿಲಂಗಳಿಗೆ ಬೇಕಾಗುವ ಕಚ್ಚಾ ವಸ್ತುವನ್ನು ತಯಾರಿಸಲೂ ಉಪಯೋಗಿಸಲಾಗುತ್ತದೆ.

ಪೆಪ್ಪರ್‌ಮೆಂಟ್ ತಯಾರಿಕಾ ತಜ್ಞರಾದ ಜರ್ಮನಿಯ ಹೆನ್ರಿಚ್ ಕ್ಯಾಪ್ಸ್‌ರವರ ನೇತೃತ್ವದಲ್ಲಿ ಆಧುನಿಕ ಸ್ವಯಂಚಾಲಿತ ಜರ್ಮನ್ ಯಂತ್ರಗಳಿಂದ ಪೆಪ್ಪರ್‌ಮೆಂಟ್, ಚಾಕೋಲೇಟ್ ಮುಂತಾದವನ್ನು ತಯಾರಿಸುವ ಸಲುವಾಗಿ ೧೯೫೦ರಲ್ಲಿ ಜೆಲ್ಲಿ ಚಾಕೋಲೇಟ್ ಘಟಕವನ್ನು ಸ್ಥಾಪಿಸಿ ಮೈಸ್ವೀಟ್ಸ್ ಎಂಬ ಹೆಸರಿನಲ್ಲಿ ಪ್ರಖ್ಯಾತವಾದ ಪೆಪ್ಪರ್‌ಮೆಂಟ್, ಜೆಲ್ಲಿ ಚಾಕೋಲೇಟ್‌ಗಳನ್ನು ತಯಾರಿಸಲಾಗುತ್ತಿತ್ತು. ಸಕ್ಕರೆಯನ್ನು ಗ್ಲೂಕೋಸ್ ಆಗಿ ಪರಿವರ್ತಿಸಿ ಗೋಲ್ಡ್‌ಸಿರಪ್ ತಯಾರಿಸಲಾಗುತ್ತಿದೆ.

### ಬಯೋಗ್ಯಾಸ್ ಘಟಕ

ಸಾರಾಯಿ ಭಟ್ಟಿ ಇಳಿಸುವ ಘಟಕದಿಂದ ಹೊರಬರುವ ಕಲ್ಮಶ ನೀರಿನಿಂದ ಬಯೋಗ್ಯಾಸ್ ಉತ್ಪಾದಿಸಲು ೨೦೦ ಲಕ್ಷ ರೂ.ಗಳ ವೆಚ್ಚದಲ್ಲಿ ಜಲಮಾಲಿನ್ಯ ಯಂತ್ರಾಗಾರವನ್ನು ನಿರ್ಮಿಸಿ ಬಯೋಗ್ಯಾಸ್ ಉತ್ಪಾದನೆಗೆ ಮುಂದಾಯಿತು. ಇದನ್ನು ಕಂಪನಿಯ ಬಾಯಲರ್‌ಗಳಿಗೆ ಸರಬರಾಜು ಮಾಡುತ್ತಿದ್ದುದರಿಂದ ಸೌದೆ ಮತ್ತು ಕಲ್ಲಿದ್ದಲಿನ ಬಳಕೆಯಲ್ಲಿ ಉಳಿತಾಯ ಉಂಟಾಗಿರುವುದರ ಜೊತೆಗೆ ನೀರು ಶುದ್ಧೀಕರಣವು ಆಗುತ್ತಿದೆ.

### ಕಾರ್ಮಿಕ ಕಲ್ಯಾಣ ಕಾರ್ಯಕ್ರಮಗಳು

ಕಾರ್ಮಿಕರಿಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸುವುದಕ್ಕೋಸ್ಕರ ಸುಸಜ್ಜಿತ ಆಸ್ಪತ್ರೆಯನ್ನು ನಿರ್ಮಿಸಲಾಗಿದೆ. ಹೆರಿಗೆ ಆಸ್ಪತ್ರೆಯೂ ಇದೆ. ಕಾರ್ಮಿಕರಿಗೆ ಉಚಿತವಾಗಿ ಔಷಧಿಗಳನ್ನು ನೀಡಲಾಗುತ್ತಿದೆ. ಕಾರ್ಮಿಕರ ಮಕ್ಕಳಿಗೆ

ಶಿಶುವಿಹಾರದಿಂದ ಪ್ರೌಢಶಾಲೆಯವರೆಗೆ ಉಚಿತ ಶಿಕ್ಷಣ ಸೌಲಭ್ಯವನ್ನೊದಗಿಸಲು ಶಾಲೆಗಳನ್ನು ಸ್ಥಾಪಿಸಲಾಗಿದೆ. ಮಂಡ್ಯ ಷುಗರ್ ಟೌನ್‌ನಲ್ಲಿ ೩೦೦ ಕಾರ್ಮಿಕರ ಮತ್ತು ಅಧಿಕಾರಿಗಳಿಗೆ ಮನೆಗಳನ್ನು ನಿರ್ಮಿಸಿದೆ. ಹುಡ್ಕೋ ನೆರವಿನಿಂದ ತನ್ನ ಕಾರ್ಮಿಕರು ಸ್ವಂತ ಮನೆಯನ್ನು ಹೊಂದುವ ವ್ಯವಸ್ಥೆ ಮಾಡಿ, ಅದಕ್ಕೆ ಸ್ವರ್ಣಸಂದ್ರ ಎಂದು ಹೆಸರಿಡಲಾಗಿದೆ. ಇದಲ್ಲದೇ ಷುಗರ್‌ಟೌನ್‌ನಲ್ಲಿ ಇನ್ನೂ ೩೦೦ ಮನೆಗಳಿರುವ ಅಪಾರ್ಟ್‌ಮೆಂಟ್ ಕಟ್ಟುವ ಗುರಿಯನ್ನೂ ಕಂಪೆನಿಯು ಹೊಂದಿದೆ. ಎಲ್ಲಾ ಕೆಲಸಗಾರರಿಗೆಂದು ಕಾರ್ಖಾನೆಯಲ್ಲಿ ಉಪಹಾರ ಗೃಹದ ಸೌಲಭ್ಯವಿದೆ. ಕಾರ್ಖಾನೆಗಳ ಕಾಯಿದೆಯನ್ವಯ ಸಿಬ್ಬಂದಿಯ ಹಿತರಕ್ಷಣೆಗೆ ಸುರಕ್ಷತಾ ಏರ್ಪಾಟನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ. ಕೆಲಸಗಾರರ ಮನರಂಜನೆಗೋಸ್ಕರ ಸುಸಜ್ಜಿತ ಆಟದ ಮೈದಾನಗಳ ಸೌಲಭ್ಯವನ್ನೊದಗಿಸಲಾಗಿದೆ. ಕ್ರೀಡಾ ಸಾಮಗ್ರಿಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ. ಕಂಪೆನಿಯ ಕಾರ್ಮಿಕರಿಗೆ ವಾರ್ಷಿಕ ಬೋನಸ್ ಜೊತೆಗೆ ಉತ್ಪಾದನಾ ಬೋನಸ್ಸನ್ನು ಸಹ ಕಂಪನಿಯು ನೀಡುತ್ತಿದೆ.

ಕಾರ್ಖಾನೆಯು ೨೦೦೦ರ ಮಾರ್ಚ್ ಅಂತ್ಯಕ್ಕೆ ಒಟ್ಟು ೬,೮೦೦ ಲಕ್ಷ ರೂ.ಬಂಡವಾಳವನ್ನು ಹೊಂದಿತ್ತು. ಇದರಲ್ಲಿ ಅಧಿಕೃತ ಬಂಡವಾಳ ರೂ.೧,೩೦೦ ಲಕ್ಷ ಮತ್ತು ಕಾರ್ಯ ಬಂಡವಾಳ ರೂ. ೫,೫೦೦ ಲಕ್ಷ ಸೇರಿದೆ. ಇದರ ಕೂಡು ಬಂಡವಾಳವಾದ ೧,೩೦೦ ಲಕ್ಷ ರೂ.ಗಳಲ್ಲಿ ಕರ್ನಾಟಕ ಸರ್ಕಾರದ ಪಾಲುಗಾರಿಕೆ ಪ್ರತಿಶತ ೮೬.೨೪ರಷ್ಟಿದೆ. ಈ ಕಾರ್ಖಾನೆಯು ಒಟ್ಟು ೧,೯೯೩ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸಿದೆ ೧೯೯೯–೨೦೦೦ನೇ ಸಾಲಿನಲ್ಲಿ ೯,೦೧,೦೧೮ ಕ್ವಿಂಟಾಲ್ ಸಕ್ಕರೆಯನ್ನು ಉತ್ಪಾದಿಸಿದೆ. ಅದೇ ಸಾಲಿನಲ್ಲಿ ೧,೪೦,೧೦,೫೦೪ ಲೀಟರ್‌ಗಳಷ್ಟು ಆಲ್ಕೋಹಾಲ್ ಅನ್ನು ಉತ್ಪಾದಿಸಲಾಗಿದೆ. ಇಲ್ಲಿ ಉತ್ಪಾದಿಸಲ್ಪಟ್ಟ ಸಕ್ಕರೆಯು ಕೇಂದ್ರ ಸರ್ಕಾರದ ಆದೇಶದ ಪ್ರಕಾರ ಲೆವಿ ಮತ್ತು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟಗೊಳ್ಳುತ್ತಿದೆ. ಇಲ್ಲಿ ತಯಾರಾಗುವ ಅಲ್ಕೋಹಾಲ್ ರಾಜ್ಯ ಅಬ್ಕಾರಿ ಇಲಾಖೆಯ ಹಂಚಿಕೆಗನುಗುಣವಾಗಿ ಮಾರಾಟಗೊಳ್ಳುತ್ತಿದೆ. ೨೦೦೦–೨೦೦೧ರ ಅಂತ್ಯಕ್ಕೆ ಕಾರ್ಖಾನೆಯು ೮,೮೯,೭೫೦ ಮೆಟ್ರಿಕ್ ಟನ್ ಕಬ್ಬನ್ನು ಅರೆದು ೮,೩೭,೭೪೨ ಕ್ವಿಂಟಾಲ್ ಸಕ್ಕರೆಯನ್ನು ಉತ್ಪಾದಿಸಿದೆ. ಶೇಕಡಾವಾರು ಇಳುವರಿ ೯.೨೪ರಷ್ಟಿತ್ತು. ಇದೇ ಅವಧಿಯಲ್ಲಿ ಸಾರಾಯಿ ಉತ್ಪಾದನೆ ೫,೮೭,೩೨,೪೮೯ ಲೀಟರ್ ಆಗಿದ್ದು ೫,೮೬,೦೮,೩೫೯ ಲೀಟರ್‌ನಷ್ಟು ಮಾರಾಟ ಮಾಡಿದೆ. ೧೯೯೯–೨೦೦೦ನೇ ಸಾಲಿನಲ್ಲಿ ಸಕ್ಕರೆ ಘಟಕವು ಅನುಭವಿಸಿದ ನಷ್ಟ ರೂ.೧೧೬೯.೪೨ ಲಕ್ಷಗಳಾಗಿದ್ದರೆ, ಇದು ೨೦೦೦–೨೦೦೧ರಲ್ಲಿ ೧,೫೧೪.೩೫ ಲಕ್ಷಗಳಾಗಿದೆ. ಯಂತ್ರಗಳ ರಿಪೇರಿ ಮತ್ತು ನಿರ್ವಹಣೆಗಾಗಿ ರೂ.೨೮೨ ಲಕ್ಷ, ಹಾಗೂ ಸಕ್ಕರೆ ರಫ್ತಿಗಾಗಿ ರೂ.೧೨೦ ಲಕ್ಷ ವೆಚ್ಚ ಮಾಡಲಾಗಿದೆ. ಕಂಪನಿಯು ಹೆಚ್ಚುವರಿ ದುಡಿಮೆ ಬಂಡವಾಳವಾಗಿ ರೂ.೫,೪೫೦ ಲಕ್ಷಗಳನ್ನು ಸಾಲವಾಗಿ ಪಡೆದ ಪರಿಣಾಮವಾಗಿ, ೩೦೨ ಲಕ್ಷ ಹೆಚ್ಚುವರಿ ಬಡ್ಡಿಯ ಹೊರೆಯು ಕಂಪನಿಯ ನಷ್ಟಕ್ಕೆ ಕಾರಣವಾಗಿದೆ. ೧೯೯೦–೯೧ ರಿಂದ ೨೦೦೦–೨೦೦೧ರವರೆಗೆ ಅರೆದ ಕಬ್ಬು, ಸಕ್ಕರೆ ಉತ್ಪಾದನೆ, ಇಳುವರಿ ಹಾಗೂ ಕಬ್ಬಿನ ಬೆಲೆ ಮುಂತಾದ ಮಾಹಿತಿಗಳಿಗಾಗಿ ಕೋಷ್ಟಕ ೫.೪ ಅನ್ನು ನೋಡಿ.

**ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ**

ರಾಷ್ಟ್ರಾದ್ಯಂತ ಪ್ರಚಲಿತಗೊಂಡಿದ್ದ ಸಹಕಾರ ಆಂದೋಲನದಿಂದ ಪ್ರೇರಿತರಾದ ಪಾಂಡವಪುರದ ಸುತ್ತಮುತ್ತಲಿನ ಜನರು ಆಧುನಿಕ ಕೃಷಿ ಉಪಕರಣಗಳನ್ನು ಒದಗಿಸಿ ಜಂಟಿ ಮತ್ತು ಸಹಕಾರಿ ಬೇಸಾಯ ಪದ್ಧತಿಯನ್ನು ಅಳವಡಿಸುವುದರ ಮೂಲಕ ಕೃಷಿ ಮತ್ತು ಕೈಗಾರಿಕೆಗಳನ್ನು ಸಹಕಾರ ಮಾರ್ಗದಲ್ಲಿ ಅಭಿವೃದ್ಧಿಪಡಿಸುವುದರ ಜೊತೆಗೆ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಿ, ಅದನ್ನು ನಡೆಸಿಕೊಂಡು ಹೋಗುವ ಉದ್ದೇಶದಿಂದ ಜನವರಿ ೧೦, ೧೯೫೫ರಂದು ಸಹಕಾರ ಸಂಘವನ್ನು ಮಂಡ್ಯದಲ್ಲಿ ನೋಂದಾಯಿಸಿಕೊಂಡರು. ಪಾಂಡವಪುರದ ಸುತ್ತಮುತ್ತ

**ಕೋಷ್ಟಕ ೫.೪**

| | ೧೯೯೧–೯೨ | ೧೯೯೨–೯೩ | ೧೯೯೩–೯೪ | ೧೯೯೪–೯೫ | ೧೯೯೫–೯೬ | ೧೯೯೬–೯೭ | ೧೯೯೭–೯೮ | ೧೯೯೮–೯೯ | ೧೯೯೯–೨೦೦೦ | ೨೦೦೦–೦೧ |
|---|---|---|---|---|---|---|---|---|---|---|
| ೧. ಕಬ್ಬು ಅರೆದದ್ದು (ಮೆ ಟ್ರಿಕ್ ಟನ್‌ಗಳಲ್ಲಿ) | ೬,೬೪,೩೨೯ | ೫,೯೧,೨೨೯ | ೪,೭೨,೫೬೧ | ೮,೭೯,೧೪೭ | ೭,೭೯,೦೪೪ | ೬,೪೩,೧೫೧ | ೩,೫೬,೮೧೮ | ೮,೪೦,೬೩೯ | ೯,೫೮,೧೩೫ | ೮,೮೯,೭೫೦ |
| ೨. ಸಕ್ಕರೆ ತಯಾರಿಸಿದ್ದು (ಮೆಟ್ರಿಕ್ ಟನ್‌ಗಳಲ್ಲಿ) | ೬೦,೨೮೯ | ೫೨,೨೪೮ | ೪೨,೫೬೫ | ೮೨,೬೩೫ | ೭೨,೪೨೨ | ೫೦,೩೩೦ | ೨೯,೪೦೩ | ೭೪,೩೧೬ | ೮೯,೪೧೭ | ೮೩,೭೭೪ |
| ೩. ಶೇಕಡಾ ಇಳುವರಿ | ೯.೨೧ | ೮.೮೪ | ೯.೦೦ | ೯.೪೦ | ೯.೩೦ | ೭.೮೩ | ೮.೨೫ | ೮.೮೪ | ೯.೨೯ | ೯.೪೧ |
| ೪. ಕಬ್ಬಿನ ಬೆಲೆ (ಟನ್ ಬೆಲೆ) (ಸಬ್ಸಿಡಿ ಸೇರಿ) (ರೂ.ಗಳಲ್ಲಿ) | ೪೨೦ | ೪೯೫ | ೬೦೦ | ೭೦೦ | ೭೧೦ | ೭೩೦ | ೮೧೦ | ೮೬೫ | ೮೮೦ | ೮೮೦ |
| ೫. ಮದ್ಯಸಾರ ಉತ್ಪಾದನೆ (ಹೆಚ್.ಎಲ್) | ೮೩,೫೧೦ | ೭೭,೪೨೪ | ೭೫,೧೫೧ | ೭೩,೧೭೧ | ೭೨,೧೭೧ | ೫೩,೬೪೯ | ೪೯,೯೮೨ | ೭೬,೫೪೧ | ೯೮,೫೮೬ | ೧,೦೩,೬೮೮ |
| ೬. ಅಸಿಟಿಕ್ ಆಮ್ಲ ತಯಾರಿಸಿದ್ದು (ಟನ್) | ೧,೧೫೪.೪೪ | ೧,೦೧೭ | ೨೮೩ | – | – | – | – | – | – | – |

ಆಧಾರ: ವಾರ್ಷಿಕ ವರದಿ ಮೈಸೂರು ಸಕ್ಕರೆ ಕಾರ್ಖಾನೆ

ಅಧಿಕ ಪ್ರಮಾಣದಲ್ಲಿ ಕಬ್ಬನ್ನು ಬೆಳೆಯಲು ಪ್ರಾರಂಭಿಸಿಲಾಯಿತು. ಈ ಕಾರಣದಿಂದ ಏಪ್ರಿಲ್ ೨, ೧೯೫೬ ರಂದು ಕಾರ್ಖಾನೆಗಳ ಕಾಯ್ದೆ ಪ್ರಕಾರ ದಿನ ಒಂದಕ್ಕೆ ೮೦೦ ಟನ್ ಕಬ್ಬನ್ನು ಅರೆಯುವ ಸಾಮರ್ಥ್ಯವಿರುವ ಕಾರ್ಖಾನೆಯನ್ನು ಸ್ಥಾಪಿಸಲು ಈ ಸಂಘವು ಪರವಾನಿಗಿ ಪಡೆಯಿತು. ಈ ಸಹಕಾರ ಸಕ್ಕರೆ ಕಾರ್ಖಾನೆಯ ಆಡಳಿತವು, ಅಧ್ಯಕ್ಷರೂ ಸೇರಿದಂತೆ ೧೫ ಮಂದಿ ನಿರ್ದೇಶಕರಿರುವ ಮಂಡಳಿಯಿಂದ ನಿರ್ವಹಿಸಲ್ಪಡುತ್ತಿತ್ತು ಅವರಲ್ಲಿ ೧೨ ಮಂದಿ ಚುನಾವಣೆಯ ಮೂಲಕವೂ ಉಳಿದ ಮೂರು ಮಂದಿ ಸರ್ಕಾರದಿಂದ ಮತ್ತು ಹಣಕಾಸು ನಿಗಮದಿಂದ ನಾಮಕರಣ ಹೊಂದಿದವರಾಗಿದ್ದರು. ಈ ಕಾರ್ಖಾನೆಗೆ ತೊಡಗಿಸಿದ್ದ ಬಂಡವಾಳ ರೂ.೩೫,೫೦,೩೦೦ ಆಗಿತ್ತು. ಆ ಪೈಕಿ ರೂ.೧೭,೭೦,೬೪೪ ಕಬ್ಬು ಬೆಳೆಗಾರರಿಂದಲೂ, ೧೫ ಲಕ್ಷ ರೂ.ಗಳು ರಾಜ್ಯ ಸರ್ಕಾರದಿಂದಲೂ ಮತ್ತು ಉಳಿದ ಬಂಡವಾಳ ಸಹಕಾರ ಸಂಘಗಳಿಂದ ಮತ್ತು ಪೋಷಕರಿಂದಲೂ ಪಡೆದದ್ದಾಗಿತ್ತು. ಈ ಕಾರ್ಖಾನೆಯ ಶಂಕುಸ್ಥಾಪನೆ ಅಕ್ಟೋಬರ್ ೨೪, ೧೯೫೬ ರಂದು ನೆರವೇರಿತು. ಇದಕ್ಕೆ ಬೇಕಾದ ಯಂತ್ರಗಳನ್ನು ಪಶ್ಚಿಮಜರ್ಮನಿಯಿಂದ ಪಡೆದು ೧೯೫೭ರ ಡಿಸೆಂಬರ್‌ನಲ್ಲಿ ಜೋಡಿಸಲಾಯಿತು. ಈ ಕಾರ್ಖಾನೆಯು ೧೯೫೯ರ ಸೆಪ್ಟೆಂಬರ್‌ನಲ್ಲಿ ಉತ್ಪಾದನೆಯನ್ನಾರಂಭಿಸಿತು. ಕರ್ನಾಟಕ ಸರ್ಕಾರದ ಅಧಿಸೂಚನೆ ಕ್ರ.ಸಂ. ಸಿ.ಐ.:೨೫೫ ಎಸ್.ಜಿ.ಎಫ್ ೯೭ ದಿನಾಂಕ ೪-೬-೯೮ರ ಅನ್ವಯ ಪಾಂಡವಪುರ ತಾಲೂಕಿನ ೧೧೩ ಗ್ರಾಮ, ಶ್ರೀರಂಗಪಟ್ಟಣ ತಾಲೂಕಿನ ೬೧ ಗ್ರಾಮ ಮತ್ತು ಕೃಷ್ಣರಾಜಪೇಟೆ ತಾಲೂಕಿನ ೧೪೨ ಗ್ರಾಮಗಳನ್ನು ಈ ಸಹಕಾರ ಸಕ್ಕರೆ ಕಾರ್ಖಾನೆಯ ಕಬ್ಬು ಬೆಳೆಯುವ ಮೀಸಲು ಪ್ರದೇಶವೆಂದು ಗುರುತಿಸಲಾಯಿತು. ಈ ಕಾರ್ಖಾನೆಯು ೧೯೯೮-೯೯ನೇ ಸಾಲಿನ ಕಬ್ಬು ಅರೆಯುವಿಕೆಯನ್ನು ದಿನಾಂಕ ೧೪-೬-೯೮ ರಿಂದ ಪ್ರಾರಂಭಿಸಿ ದಿನಾಂಕ ೫-೪-೯೯ರವರೆಗೆ ೨,೯೬,೭೩೭ ಮೆಟ್ರಿಕ್‌ಟನ್ ಕಬ್ಬು ಅರೆದು ೧,೯೮,೪೮೬ ಕ್ವಿಂಟಾಲ್ ಸಕ್ಕರೆ ಉತ್ಪಾದಿಲಾಯಿತು. ಸಕ್ಕರೆ ಇಳುವರಿಯು ಶೇ.೬.೬೯ ಆಗಿತ್ತು. ೧೯೯೮-೯೯ನೇ ಸಾಲಿನ ಆರಂಭದಲ್ಲಿ ದಾಸ್ತಾನಿನಲ್ಲಿದ್ದ ೧೭,೩೧೧ ಕ್ವಿಂಟಾಲ್ ಸಕ್ಕರೆಯೂ ಸೇರಿದಂತೆ ೫೫,೭೯೯ ಕ್ವಿಂಟಾಲ್ ಸಕ್ಕರೆಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮತ್ತು ೨೪,೫೦೩ ಕ್ವಿಂಟಾಲ್ ಸಕ್ಕರೆಯನ್ನು ಲೆವಿದರದಲ್ಲಿ ಮಾರಾಟ ಮಾಡಲಾಗಿದ್ದು, ವರ್ಷಾಂತ್ಯದಲ್ಲಿ ೧,೩೦,೫೯೦ ಕ್ವಿಂಟಾಲ್ ಸಕ್ಕರೆ ದಾಸ್ತಾನು ಮಾಡಲಾಗಿತ್ತು. ಲೆವಿಸಕ್ಕರೆ ಮಾರಾಟದಿಂದ ಕ್ವಿಂಟಾಲ್ ಒಂದಕ್ಕೆ ರೂ.೧,೦೦೯.೧೧ ಮತ್ತು ಮುಕ್ತ ಮಾರುಕಟ್ಟೆ ಸಕ್ಕರೆಯಿಂದ ಕ್ವಿಂಟಾಲ್ ಒಂದಕ್ಕೆ ರೂ.೧,೨೩೨.೫೮ ಸರಾಸರಿ ಬೆಲೆ ಬಂದಿತು. ೧೯೯೯-೨೦೦೦ನೇ ಸಾಲಿನ ಕಬ್ಬು ಅರೆಯುವಿಕೆಯು ದಿನಾಂಕ ೨-೮-೯೯ ರಿಂದ ಪ್ರಾರಂಭಗೊಂಡು, ದಿನಾಂಕ ೧೨-೯-೯೯ರವರೆಗೆ ೭೫,೫೯೦ ಟನ್ ಕಬ್ಬು ಅರೆದು ೫೮,೪೨೦ ಕ್ವಿಂಟಾಲ್ ಸಕ್ಕರೆಯನ್ನು ಉತ್ಪಾದಿಸಲಾಯಿತು.

ಈ ಕಾರ್ಖಾನೆಯು ೨೦೦೦ದ ಮಾರ್ಚ್ ಅಂತ್ಯಕ್ಕೆ ರೂ.೬,೯೪೧.೫೦ ಲಕ್ಷ ಬಂಡವಾಳವನ್ನು ಹೊಂದಿದ್ದು, ೭೯೬ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸಿತ್ತು. ಆ ಪೈಕಿ ೩೪೫ ಖಾಯಂ ಕಾರ್ಮಿಕರು, ೨೮೦ ಋತುಮಾನ ಕಾರ್ಮಿಕರು ಮತ್ತು ೧೭೧ ದಿನಗೂಲಿ ಕಾರ್ಮಿಕರು ಆಗಿದ್ದರು. ಈ ಕಾರ್ಖಾನೆಯ ಉತ್ಪಾದನಾ ಸಾಮರ್ಥ್ಯ ದಿನಕ್ಕೆ ೩,೫೦೦ ಟನ್ ಇದ್ದು, ೨,೮೬,೫೨೦ ಕ್ವಿಂಟಾಲ್ ಸಕ್ಕರೆಯನ್ನು ಉತ್ಪಾದಿಸಲಾಗಿದೆ. ಈ ಕಾರ್ಖಾನೆಯು ತನ್ನ ಕಾರ್ಮಿಕರ ಮಕ್ಕಳ ಕಲ್ಯಾಣಾರ್ಥವಾಗಿ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಮತ್ತು ಜೂನಿಯರ್ ಕಾಲೇಜುಗಳನ್ನೂ, ಹಾಗೂ ಕಾರ್ಮಿಕರ ಕಲ್ಯಾಣಾರ್ಥವಾಗಿ ವೈದ್ಯಕೀಯ ಸೌಲಭ್ಯವನ್ನೂ ಒದಗಿಸುತ್ತಿದೆ. ಅಧಿಕಾರಿಗಳಿಗೋಸ್ಕರ ೩೦ ವಸತಿ ಗೃಹಗಳನ್ನೂ ಕಾರ್ಮಿಕರಿಗೆ ೨೩೮ ವಸತಿ ಗೃಹಗಳನ್ನೂ ಒದಗಿಸಿದೆ. ೨೦೦೧ರ ಮಾರ್ಚ್ ಅಂತ್ಯಕ್ಕೆ ರೂ.೫,೫೭೬ ಲಕ್ಷ ಬಂಡವಾಳ ತೊಡಗಿಸಲಾಗಿತ್ತು. ೨೦೦೨ರ ಮಾರ್ಚಿ ವೇಳೆಗೆ ೪೫೧ ಕಾರ್ಮಿಕರಿಗೆ ಉದ್ಯೋಗ ಒದಗಿಸಿದ್ದು, ಇವರ ಪೈಕಿ ೩೬ ಮಂದಿ ದಿನಗೂಲಿ, ೨೧೫ ಋತುಮಾನ ಹಾಗೂ ೨೦೦ ಖಾಯಂ ಕಾರ್ಮಿಕರಿದ್ದರು. ಈ ಕಾರ್ಖಾನೆಯ ಉತ್ಪಾದನಾ ಸಾಮರ್ಥ್ಯ ದಿನಕ್ಕೆ ೩,೫೦೦ ಮೆಟ್ರಿಕ್ ಟನ್ ಇದ್ದು, ೧,೫೫,೭೨೧ ಮೆಟ್ರಿಕ್

ಟನ್ ಕಬ್ಬನ್ನು ಅರೆದು ೧,೩೭,೦೨೫ ಕ್ವಿಂಟಾಲ್ ಸಕ್ಕರೆಯನ್ನು ಉತ್ಪಾದಿಸಿದೆ. ಕಬ್ಬು ಬೆಳೆಗಾರರಿಗೆ ಕಾರ್ಖಾನೆಯು, ಟನ್ ಒಂದಕ್ಕೆ ೮೨೫ ರೂ.ಗಳ ಬೆಲೆಯನ್ನು ನೀಡುತ್ತಿದೆ. ೧೯೯೦–೯೧ರಿಂದ ೨೦೦೧–೨೦೦೨ರವರೆಗೆ ಅರೆದ ಕಬ್ಬು, ಸಕ್ಕರೆ ಉತ್ಪಾದನೆ, ಇಳುವರಿ, ವರ್ಷದಲ್ಲಿ ಕಬ್ಬನ್ನು ಅರೆದ ದಿನಗಳು ಮುಂತಾದ ಮಾಹಿತಿಯನ್ನು ಕೋಷ್ಟಕ ೫.೫ ರಲ್ಲಿ ನೀಡಿದೆ.

**ಕೋಷ್ಟಕ ೫.೫**

| ವರ್ಷ | ಅರೆದ ಕಬ್ಬು (ಮೆಟ್ರಿಕ್‌ಟನ್ನುಗಳಲ್ಲಿ) | ಸಕ್ಕರೆ ಉತ್ಪಾದನೆ (ಕ್ವಿಂಟಾಲ್‌ಗಳಲ್ಲಿ) | ಇಳುವರಿ (ಶೇಕಡ) | ವರ್ಷದಲ್ಲಿ ಕಬ್ಬು ಅರೆದ ದಿನಗಳು | ಕಬ್ಬು ಬೆಳೆಗಾರರಿಗೆ ನೀಡಿದ ಕಬ್ಬಿನ ಬೆಲೆ (ಮೆಟ್ರಿಕ್‌ಟನ್‌ಗೆ) |
|---|---|---|---|---|---|
| ೧೯೯೦–೯೧ | ೨,೮೩,೨೯೭ | ೨,೭೪,೮೭೦ | ೯.೭೦ | ೨೬೮ | ೪೦೪.೦೦ |
| ೧೯೯೧–೯೨ | ೨,೪೬,೪೭೪ | ೨,೨೫,೮೧೫ | ೯.೧೨ | ೨೪೧ | ೪೨೫.೦೦ |
| ೧೯೯೨–೯೩ | ೨,೨೩,೪೫೯ | ೨,೧೨,೫೧೫ | ೯.೧೩ | ೨೧೮ | ೪೬೦.೦೦ |
| ೧೯೯೩–೯೪ | ೧,೬೯,೩೦೨ | ೧,೬೦,೩೪೫ | ೯.೪೫ | ೧೬೮ | ೫೫೦.೦೦ |
| ೧೯೯೪–೯೫ | ೨,೭೪,೮೯೬ | ೨,೫೧,೩೪೫ | ೯.೧೦ | ೨೫೨ | ೬೭೫.೦೦ |
| ೧೯೯೫–೯೬ | ೨,೯೦,೫೪೦ | ೨,೭೪,೩೮೮ | ೯.೪೪ | ೨೯೦ | ೬೦೦.೦೦ |
| ೧೯೯೬–೯೭ | ೧,೫೮,೬೦೭ | ೧,೩೧,೨೯೭ | ೮.೨೮ | ೧೬೯ | ೭೧೫.೦೦ |
| ೧೯೯೭–೯೮ | | ಕಾರ್ಖಾನೆಯ ವಿಸ್ತರಣಾ ಅವಧಿ | | | |
| ೧೯೯೮–೯೯ | ೨,೯೬,೭೩೭ | ೧,೯೮,೩೪೦ | ೬.೬೯ | ೨೯೬ | ೮೦೦.೦೦ |
| ೧೯೯೯–೨೦೦೦ | ೩,೩೧,೩೩೭ | ೨,೮೬,೫೨೦ | ೮.೫೫ | ೨೧೪ | ೮೦೦.೦೦ |
| ೨೦೦೦–೨೦೦೧ | ೩,೩೯,೮೫೦ | ೩,೦೨,೬೯೦ | ೮.೯೦ | ೨೧೪ | ೮೨೦.೦೦ |
| ೨೦೦೧–೨೦೦೨ | ೧,೫೫,೭೨೧ | ೧,೩೭,೦೨೫ | ೮.೮೦ | ೧೪೨ | ೮೨೫.೦೦ |

## ಚಾಮುಂಡೇಶ್ವರಿ ಷುಗರ್ಸ್ ಲಿಮಿಟೆಡ್

ಚಾಮುಂಡೇಶ್ವರಿ ಷುಗರ್ಸ್ ಲಿಮಿಟೆಡ್ ೧೯೭೦ರಲ್ಲಿ ನೋಂದಣಿಗೊಂಡು ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಭಾರತೀನಗರದಲ್ಲಿ ಸ್ಥಾಪಿತವಾಗಿದೆ. ಇದರ ನಿರ್ಮಾಣ ಕಾರ್ಯ ೧೯೭೨ರಲ್ಲಿ ಮತ್ತು ಉತ್ಪಾದನಾ ಕಾರ್ಯ ೧೯೭೪ರಲ್ಲಿ ಆರಂಭವಾಯಿತು. ಇದು ಖಾಸಗಿ ವಲಯದ ಕಾರ್ಖಾನೆಯಾಗಿದ್ದು, ಆಡಳಿತವು ನಿರ್ದೇಶಕ ಮಂಡಳಿಯಿಂದ ನಿರ್ವಹಿಸಲ್ಪಡುತ್ತಿದೆ. ಬಿಳಿಯ ಹರಳು ಸಕ್ಕರೆಯನ್ನೂ ಉತ್ಪಾದಿಸಲಾಗುತ್ತಿದೆ. ೨೦೦೦ದ ಮಾರ್ಚ್ ಅಂತ್ಯದವರೆಗೆ ಈ ಕಾರ್ಖಾನೆಯಲ್ಲಿ ತೊಡಗಿಸಿದ್ದ ಒಟ್ಟು ಬಂಡವಾಳ ೫,೮೩೪ ಲಕ್ಷ ರೂಪಾಯಿಗಳಾಗಿದ್ದು, ೨೦೦೦–೨೦೦೧ನೇ ಸಾಲಿನಲ್ಲಿ ೭೦೦ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸಲಾಗಿತ್ತು. ಈ ಕಾರ್ಖಾನೆಯ ಉತ್ಪಾದನಾ ಸಾಮರ್ಥ್ಯ ದಿನ ಒಂದಕ್ಕೆ ೪೦೦೦ ಮೆಟ್ರಿಕ್ ಟನ್ ಆಗಿದ್ದು, ಪ್ರತಿನಿತ್ಯ ೪,೦೦೦ ಕ್ವಿಂಟಾಲ್ ಸಕ್ಕರೆಯನ್ನು ಉತ್ಪಾದಿಸುತ್ತಿದೆ. ಈ ಕಾರ್ಖಾನೆಯು ವರ್ಷದಲ್ಲಿ ಒಂಬತ್ತರಿಂದ ಹತ್ತು ತಿಂಗಳವರೆಗೆ ಕಬ್ಬು ಅರೆಯುವ ಕಾರ್ಯ ನಿರ್ವಹಿಸುತ್ತದೆ. ಕಬ್ಬು ಸ್ಥಳೀಯ ರೈತರಿಂದ ಪೂರೈಸಲ್ಪಡುತ್ತದೆ. ಇಲ್ಲಿ ಉತ್ಪಾದಿಸಿದ ಸಕ್ಕರೆಯು ಸರ್ಕಾರದ

ಆದೇಶದಂತೆ ಲೆವಿ ಮತ್ತು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟಗೊಳ್ಳುತ್ತಿದೆ. ಸಕ್ಕರೆಯನ್ನು ಉತ್ಪಾದಿಸುವಾಗ ದೊರಕುವ ಕಾಕಂಬಿಯನ್ನು ಸದುಪಯೋಗಪಡಿಸಿಕೊಳ್ಳುವ ಸಲುವಾಗಿ ಡಿಸ್ಟಿಲರಿಯನ್ನು ಸ್ಥಾಪಿಸುವ ಪ್ರಯತ್ನ ನಡೆಯುತ್ತಿದೆ.

ಕಂಪನಿಯು ತನ್ನ ಕಾರ್ಮಿಕರ ವಸತಿ ಸೌಲಭ್ಯಕ್ಕಾಗಿ ೧೬೭ ಮನೆಗಳನ್ನು ನಿರ್ಮಿಸಿ ಸೇವಾ ಜೇಷ್ಠತೆಯ ಆಧಾರದ ಮೇಲೆ ನೀಡುವುದರ ಜೊತೆಗೆ ಸುಮಾರು ೧೩೦ ಮನೆಗಳನ್ನು ಗುತ್ತಿಗೆ ಆಧಾರದಲ್ಲಿ ಪಡೆದು ತನ್ನ ಕಾರ್ಮಿಕರಿಗೆ ವಸತಿ ಸೌಲಭ್ಯವನ್ನೊದಗಿಸಿದೆ. ಕಾರ್ಮಿಕರ ಮತ್ತು ಕಬ್ಬು ಬೆಳೆಗಾರರ ಮಕ್ಕಳಿಗೆ ಶಿಕ್ಷಣ ಸೌಲಭ್ಯವನ್ನು ಒದಗಿಸುವುದಕ್ಕಾಗಿ ಶ್ರೀ ಚಾಮ್ ಷುಗರ್ ಎಜುಕೇಷನ್ ಸೊಸೈಟಿ ಎಂಬ ಹೆಸರಿನಲ್ಲಿ ನರ್ಸರಿಯಿಂದ ಹತ್ತನೆಯ ತರಗತಿಯವರೆಗೆ ಶಾಲೆಯನ್ನೂ ನಡೆಸುತ್ತಿದೆ. ಕಾರ್ಮಿಕರ ಮಕ್ಕಳು ಭಾರತೀನಗರದಿಂದ ಹೊರಗಡೆಯ ಶಾಲೆಯಲ್ಲಿ ಕಲಿಯುತ್ತಿದ್ದರೆ ಅವರಿಗೆ ಹತ್ತನೇ ತರಗತಿಯವರೆಗಿನ ಶಿಕ್ಷಣ ಶುಲ್ಕವನ್ನು ಕಂಪನಿಯೇ ಭರಿಸುತ್ತದೆ. ಕಂಪನಿಯ ಸಹಕಾರ ಸಂಘವು ಕಾರ್ಮಿಕರ ಅವಶ್ಯಕ ಪದಾರ್ಥಗಳಾದ ಸೀಮೆಎಣ್ಣೆ, ಆಹಾರಧಾನ್ಯ, ಬಟ್ಟೆ ಮೊದಲಾದವನ್ನು ನ್ಯಾಯ ಬೆಲೆಯಲ್ಲಿ ಒದಗಿಸುತ್ತಿದೆ. ಕಂಪನಿಯ ಪತ್ತಿನ ಸಹಕಾರ ಸಂಘವು ರೂ.೫೦,೦೦೦ದವರೆಗೆ ಗೃಹ ನಿರ್ಮಾಣ, ವೈದ್ಯಕೀಯ, ವಿದ್ಯಾಭ್ಯಾಸ, ಮದುವೆ ಮೊದಲಾದವುಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲಸೌಲಭ್ಯವನ್ನೂ ನೀಡುತ್ತಿದೆ. ಕಂಪನಿಯು ತನ್ನದೇ ಆದ ಆಸ್ಪತ್ರೆಯನ್ನು ಹೊಂದಿದ್ದು, ತುರ್ತು ಚಿಕಿತ್ಸೆಯ ನೆರವಿಗಾಗಿ ಕಂಪನಿಯು ಆಂಬ್ಯಲೆನ್ಸನ್ನೂ ಸಹ ಹೊಂದಿದೆ.

## ಐ.ಸಿ.ಎಲ್ ಸಕ್ಕರೆ ಕಾರ್ಖಾನೆ

ಐ.ಸಿ.ಎಲ್ ಸಕ್ಕರೆ ಕಾರ್ಖಾನೆಯು, ಮಂಡ್ಯ ಜಿಲ್ಲೆಯ, ಕೃಷ್ಣರಾಜಪೇಟೆ ತಾಲೂಕಿನ, ಮಾಕವಳ್ಳಿ ಎಂಬಲ್ಲಿ, ಜಿಲ್ಲೆಯ ನಾಲ್ಕನೆಯ ಸಕ್ಕರೆ ಕಾರ್ಖಾನೆಯಾಗಿ, ಖಾಸಗಿ ವಲಯದಲ್ಲಿ ೧೯೯೬ರಲ್ಲಿ ನೋಂದಣಿಗೊಂಡು, ೧೯೯೯ರಲ್ಲಿ ಕಬ್ಬು ಅರೆಯುವ ಕಾರ್ಯ ಪ್ರಾರಂಭಿಸಿತು. ಮಾರ್ಚ್ ೨೦೦೦ದ ಅಂತ್ಯಕ್ಕೆ ಒಟ್ಟು ತೊಡಗಿಸಿದ್ದ ಬಂಡವಾಳವು ೧೧,೩೩೨ ಲಕ್ಷ ರೂ. ಆಗಿದ್ದು, ೧೬೮ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸಿತ್ತು. ಈ ಕಾರ್ಖಾನೆಯ ಉತ್ಪಾದನಾ ಸಾಮರ್ಥ್ಯ ದಿನ ಒಂದಕ್ಕೆ ೨,೫೦೦ ಮೆಟ್ರಿಕ್ ಟನ್ ಆಗಿದ್ದು, ರೂ.೧೮,೭೨,೧೫,೩೬೦ ಮೌಲ್ಯದ ೧೪,೫೯೨ ಮೆಟ್ರಿಕ್ ಟನ್ ಸಕ್ಕರೆಯನ್ನು ಉತ್ಪಾದಿಸಿ, ೧,೨೪,೦೩,೬೨೦ ರೂ. ಮೌಲ್ಯದ ೯,೭೪೭.೪೫ ಮೆಟ್ರಿಕ್ ಟನ್ ಕಾಕಂಬಿಯನ್ನು ಉತ್ಪಾದಿಸಿದೆ. ಕಾರ್ಖಾನೆಯಲ್ಲಿ ದುಡಿಯುವ ಕಾರ್ಮಿಕರಿಗೆ ಕಾರ್ಮಿಕರ ಭವಿಷ್ಯ ನಿಧಿ (EPF) ಗ್ರಾಚ್ಯುಯಿಟಿ, ಬೋನಸ್, ಬಸ್ ಸೌಲಭ್ಯ, ಕ್ಯಾಂಟಿನ್, ಕ್ವಾರ್ಟರ್ಸ್, ಕಾರ್ಮಿಕರ ಪರಿಹಾರ ವಿಮೆ ಮುಂತಾದ ಕಾರ್ಮಿಕ ಕಲ್ಯಾಣ ಸೌಲಭ್ಯಗಳನ್ನು ಒದಗಿಸಲಾಗಿದೆ.

## ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.

ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ಮೈಸೂರು ಹಾಲು ಒಕ್ಕೂಟದಿಂದ ವಿಭಜನೆಗೊಂಡು ೧೯೮೭ರಲ್ಲಿ ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಗೆಜ್ಜಲಗೆರೆಯಲ್ಲಿ ಅಸ್ಥಿತ್ವಕ್ಕೆ ಬಂದಿತು. ಕರ್ನಾಟಕ ಹಾಲು ಮಹಾಮಂಡಳಿಯ ಅಧೀನದಲ್ಲಿದ್ದ ಈ ಹಾಲು ಉತ್ಪನ್ನ ಘಟಕವನ್ನು ೧೯೮೮ರಲ್ಲಿ ಮಂಡ್ಯ ಹಾಲು ಒಕ್ಕೂಟಕ್ಕೆ ಹಸ್ತಾಂತರಿಸಲಾಯಿತು. ಮಂಡ್ಯ ಹಾಲು ಒಕ್ಕೂಟ ಅಸ್ತಿತ್ವಕ್ಕೆ ಬಂದಾಗ ೪೬೪ ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯಾಚರಣೆಯಲ್ಲಿದ್ದು, ಹಾಲಿನ ಮಾರುಕಟ್ಟೆ ಸೌಲಭ್ಯವಿಲ್ಲದಿದ್ದುದರಿಂದ ಶೇಖರಿಸಿದ ಹಾಲನ್ನು ಹಾಲಿನ ಉತ್ಪನ್ನಗಳನ್ನಾಗಿ ಪರಿವರ್ತಿಸಿ ಮಾರಾಟ ಮಾಡಲು ಪ್ರಾರಂಭಿಸಲಾಯಿತು. ಈ

ಹಾಲು ಒಕ್ಕೂಟವು ಪ್ರಾರಂಭಗೊಂಡಾಗ ಕರ್ನಾಟಕ ಹಾಲು ಮಹಾಮಂಡಳಿಯಿಂದ ಹಸ್ತಾಂತರಗೊಂಡ ಹಾಲು ಸಂಸ್ಕರಣಾ ಘಟಕವು ದಿನ ಒಂದಕ್ಕೆ ಒಂದು ಲಕ್ಷ ಲೀಟರ್ ಹಾಲನ್ನು ಸಂಸ್ಕರಿಸುವ ಸಾಮರ್ಥ್ಯವನ್ನು ಹೊಂದಿತ್ತು. ಇದರ ಸಾಮರ್ಥ್ಯವನ್ನು ೧೯೯೩-೯೪ರಲ್ಲಿ ದಿನ ಒಂದಕ್ಕೆ ಎರಡು ಲಕ್ಷ ಲೀಟರ್‌ಗೆ ವಿಸ್ತರಿಸಲಾಯಿತು. ನಾಗಮಂಗಲ ಮತ್ತು ಕೃಷ್ಣರಾಜಪೇಟೆಗಳಲ್ಲಿನ ಶೀತಲ ಕೇಂದ್ರಗಳ ಸಾಮರ್ಥ್ಯವನ್ನು ೧೯೯೨-೯೩ರಲ್ಲಿ ವಿಸ್ತರಿಸಿ ನವೀಕರಿಸಲಾಗಿದೆ. ಇವುಗಳ ಜೊತೆಗೆ ೧೯೯೮ರಲ್ಲಿ ಮಳವಳ್ಳಿಯಲ್ಲಿ ೬.೫ ಲಕ್ಷ ರೂ.ಗಳ ವೆಚ್ಚದಲ್ಲಿ ಶೀತಲ ಕೇಂದ್ರವನ್ನು ಸ್ಥಾಪಿಸಿ ಕಾರ್ಯಾರಂಭ ಮಾಡಲಾಗಿದೆ. ನಂದಿನಿ ಉತ್ಪನ್ನಗಳಲ್ಲಿ ತೊಡಗಿರುವ ರಾಜ್ಯದ ಹದಿಮೂರು ಹಾಲು ಒಕ್ಕೂಟಗಳ ಪೈಕಿ ಮಂಡ್ಯ ಹಾಲು ಒಕ್ಕೂಟವು ಬರ್ಫಿ ತಯಾರಿಸುವ ಏಕೈಕ ಒಕ್ಕೂಟವಾಗಿದೆ. ಕರ್ನಾಟಕದಲ್ಲಿ ಹಾಲುಪುಡಿ ತಯಾರಿಸುವ ಮೂರು ಒಕ್ಕೂಟಗಳ ಪೈಕಿ ಮಂಡ್ಯ ಒಕ್ಕೂಟವೂ ಒಂದಾಗಿದ್ದು, ದಿನ ಒಂದಕ್ಕೆ ಒಂದು ಲಕ್ಷ ಲೀಟರ್ ಹಾಲನ್ನು ಪುಡಿಯನ್ನಾಗಿ ಪರಿವರ್ತನೆಗೊಳಿಸುವ ಸಾಮರ್ಥ್ಯವಿರುವ ಘಟಕವನ್ನು ಹೊಂದಿದೆ. ಉಳಿದೆರಡು ಘಟಕಗಳು ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳಲ್ಲಿವೆ. ಮಂಡ್ಯ ಹಾಲು ಒಕ್ಕೂಟವು ೨೦೦೧-೨೦೦೨ನೇ ಸಾಲಿನಲ್ಲಿ ೪೧೬ ಮೆಟ್ರಿಕ್ ಟನ್ ತುಪ್ಪ, ೬೧೪.೮೭ ಟನ್ ಬೆಣ್ಣೆ ಮತ್ತು ೭೧೨.೯೫ ಮೆಟ್ರಿಕ್ ಟನ್ ಹಾಲಿನ ಪುಡಿಯನ್ನು ಮಾರಾಟ ಮಾಡಿದೆ. ಈ ಉತ್ಪನ್ನಗಳನ್ನು ಕೇರಳ, ದೆಹಲಿ ಮತ್ತು ಕಲ್ಕತ್ತಾ ಡೇರಿಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಈ ಒಕ್ಕೂಟದಲ್ಲಿ ಹಾಲು ಉತ್ಪನ್ನ ಮತ್ತು ಹಾಲನ್ನು ಶೀತಲೀಕರಿಸಲು ನಾಲ್ಕು ಕಂಪ್ರೈಸರ್‌ಗಳಿವೆ. ಸ್ಯಾಚೆಟ್ ಹಾಲನ್ನು ಶೇಖರಿಸಲು ೪೦ ಸಾವಿರ ಲೀಟರ್ ಸಾಮರ್ಥ್ಯದ ಶೀತಲ ಘಟಕವಿದೆ. ಹಾಲನ್ನು ಸಂಸ್ಕರಿಸಲು ಐದು ಮೆಟ್ರಿಕ್ ಟನ್ ಸಾಮರ್ಥ್ಯದ ಹಬೆಯ ಯಂತ್ರವಿದ್ದು, ಬೇಸಿಗೆ ಕಾಲದಲ್ಲಿ ಹಾಲಿನ ಉತ್ಪಾದನೆ ಕಡಿಮೆಯಿರುವುದರಿಂದ, ಅದನ್ನು ಕಡಿಮೆ ಖರ್ಚಿನಲ್ಲಿ ಸಂಸ್ಕರಿಸಲು ಎರಡು ಮೆಟ್ರಿಕ್ ಟನ್ ಸಾಮರ್ಥ್ಯದ ಹಬೆಯಂತ್ರವನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ.

ಈ ಒಕ್ಕೂಟದಲ್ಲಿ ೪೧೦ ಸಿಬ್ಬಂದಿ ಕಾರ್ಯನಿರ್ವಹಿಸಲು ಮಂಜೂರಾತಿಯಿದ್ದು, ಕಚೇರಿ ನೌಕರರೂ ಸೇರಿ ಒಟ್ಟು ೩೧೭ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದರು. ಸಹಕಾರಿ ಕಾಯ್ದೆಯ ಪ್ರಕಾರ ಸದಸ್ಯ ಸಂಘಗಳು ಗಳಿಸಿದ ಲಾಭಾಂಶದ ಶೇ.೨೦ ರಷ್ಟು ಹಣವನ್ನು ಒಕ್ಕೂಟದಲ್ಲಿ ಹೆಚ್ಚುವರಿ ಷೇರನ್ನಾಗಿ ತೊಡಗಿಸಬೇಕೆಂಬ ನಿಯಮವಿರುವುದರಿಂದ ಮಂಡ್ಯ ಹಾಲು ಒಕ್ಕೂಟವು ೧.೧೮ ಕೋಟಿ ರೂ.ಷೇರು ಬಂಡವಾಳವನ್ನು ಹೊಂದಿದೆ.

ಈ ಒಕ್ಕೂಟವು ೨೦೦೦ದ ಮಾರ್ಚ್ ಅಂತ್ಯಕ್ಕೆ ಜಿಲ್ಲೆಯ ೬೫೯ ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ದಿನವಹಿ ೧,೫೮,೦೦೦ ಲೀಟರ್ ಹಾಲನ್ನು ಪಡೆದು ಸಂಸ್ಕರಿಸುತ್ತಿದೆ. ಸಂಸ್ಕರಿಸಿದ ಹಾಲಿನಲ್ಲಿ ಸರಾಸರಿ ೪.೫ ಜಿಡ್ಡು ಹಾಗೂ ೮.೫ ಜಿಡ್ಡೇತರ ಅಂಶಗಳಿದ್ದು, ಅದರಲ್ಲಿ ೩.೦ ಜಿಡ್ಡು ಅಂಶವಿರುವ ಮತ್ತು ೮.೫ ಜಿಡ್ಡೇತರ ಅಂಶವಿರುವ ೯೫,೦೦೦ ಲೀಟರ್ ಟೋನ್ಡ್ ಹಾಲನ್ನು ಮಂಡ್ಯ ಹಾಗೂ ಬೆಂಗಳೂರು ನಗರದ ಕೆಲವು ಪ್ರದೇಶಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಉಳಿದ ಹಾಲನ್ನು ಹಾಲಿನಪುಡಿ, ಬೆಣ್ಣೆ ಮುಂತಾದ ಹಾಲು ಉತ್ಪನ್ನಗಳನ್ನಾಗಿ ಪರಿವರ್ತಿಸಿ ಮಾರಾಟ ಮಾಡಲಾಗುತ್ತಿದೆ. ಇದರಲ್ಲಿ ತೊಡಗಿಸಿದ್ದ ಒಟ್ಟು ಬಂಡವಾಳ ೧,೨೦೦ ಲಕ್ಷ ರೂ.ಗಳು. ಇಲ್ಲಿ ಹಾಲಿನಪುಡಿ, ಬೆಣ್ಣೆ, ತುಪ್ಪ, ಪೇಡ ಮತ್ತು ಬರ್ಫಿಗಳನ್ನು ಉತ್ಪಾದಿಸಲಾಗುತ್ತಿದೆ. ಇಲ್ಲಿ ಸಂಸ್ಕರಿಸಲ್ಪಟ್ಟ ಮತ್ತು ಉತ್ಪಾದಿಸಲ್ಪಟ್ಟ ಹಾಲು ಮತ್ತು ಹಾಲಿನ ಉತ್ಪನ್ನಗಳು ಮಂಡ್ಯ ಜಿಲ್ಲೆ, ಬೆಂಗಳೂರು ನಗರದ ಕೆಲವು ಭಾಗಗಳು, ಕೇರಳ, ತಮಿಳುನಾಡು, ಮಹಾರಾಷ್ಟ್ರ ಮತ್ತು ಗೋವಾಗಳಲ್ಲಿ ಮಾರಾಟಗೊಳ್ಳುತ್ತಲಿವೆ. ವಿವರಗಳಿಗೆ ಕೋಷ್ಟಕ ೫.೬ ಅನ್ನು ನೋಡಿ.

**ಕೋಷ್ಟಕ ೫.೬ ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ (ನಿ).**

| | | ೧೯೯೯–೨೦೦೦ | ೨೦೦೦–೨೦೦೧ | ೨೦೦೧–೨೦೦೨ |
|---|---|---|---|---|
| ೧ | ಹಾಲು ಉತ್ಪಾದಕರ ಸಹಕಾರ ಸಂಘಗಳ ಸಂಖ್ಯೆ | ೬೫೯ | ೭೦೬ | ೭೧೯ |
| ೨ | ಒಟ್ಟು ಸದಸ್ಯರು ಸಂಖ್ಯೆಗಳಲ್ಲಿ | – | ೨,೦೨,೯೯೫ | ೨,೦೬,೧೧೪ |
| ೩ | ಶೇಖರಿಸಿದ ಹಾಲಿನ ಪ್ರಮಾಣ (ಲಕ್ಷ ಕೆ.ಜಿ.ಗಳಲ್ಲಿ) | – | – | ೬೦೭.೪೮ |
| ೪ | ತುಪ್ಪ (ಟನ್ನುಗಳಲ್ಲಿ) | ೪೪೬ | ೩೮೧ | ೪೫೪ |
| ೫ | ಬೆಣ್ಣೆ (ಟನ್ನುಗಳಲ್ಲಿ) | ೧೦೫೩ | ೮೦೫ | ೧,೩೪೦ |
| ೬ | ಪೇಡಾ (ಟನ್ನುಗಳಲ್ಲಿ) | – | – | ೧೪ |
| ೭ | ಮೊಸರು (ಟನ್ನುಗಳಲ್ಲಿ) | – | – | ೧,೪೭೯ |
| ೮ | ಕೆನೆರಹಿತ ಹಾಲಿನ ಪುಡಿ (ಟನ್ನುಗಳಲ್ಲಿ) | ೭೩೪ | ೧,೧೯೫ | ೧,೬೩೨ |

## ಮಂಡ್ಯ ರಾಷ್ಟ್ರೀಯ ಕಾಗದದ ಕಾರ್ಖಾನೆ

ಕಬ್ಬಿನ ಸಿಪ್ಪೆಯನ್ನು ಉಪಯೋಗಿಸಿಕೊಂಡು ಮುದ್ರಣ ಮತ್ತು ಬರವಣಿಗೆಗೆ ಬೇಕಾಗುವ ಉತ್ತಮ ಗುಣಮಟ್ಟದ ಕಾಗದವನ್ನು ತಯಾರಿಸುವುದರಲ್ಲಿ ಮಂಡ್ಯ ರಾಷ್ಟ್ರೀಯ ಕಾಗದದ ಕಾರ್ಖಾನೆ ಭಾರತದಲ್ಲೇ ಪ್ರಥಮದ್ದಾಗಿದೆ. ಅದಕ್ಕಿಂತಲೂ ಮುಂಚೆ ಬಿದುರನ್ನು ಕಾಗದದ ತಯಾರಿಕೆಗೆ ಉಪಯೋಗಿಸಲಾಗುತ್ತಿತ್ತು. ಬಿದುರಿಗೆ ಬದಲಾಗಿ ಜಿಲ್ಲೆಯಲ್ಲಿ ಅಧಿಕ ಪ್ರಮಾಣದಲ್ಲಿ ದೊರಕುವ ಅರೆದ ಕಬ್ಬಿನ ಸಿಪ್ಪೆಯನ್ನು ಉಪಯೋಗಿಸಿ ಕಾಗದವನ್ನು ತಯಾರಿಸುವ ಸಾಹಸಕ್ಕೆ ಮೆಸರ್ಸ್ ಬೇಡಿ ಮತ್ತು ಕಂಪನಿ ನಿ. ಕೈ ಹಾಕಿ, ಪ್ರಮುಖ ಕಾಗದ ತಯಾರಿಕಾ ಯಂತ್ರವನ್ನು ಉತ್ಪಾದಿಸುವ ನ್ಯೂಯಾರ್ಕಿನ ಮೆಸರ್ಸ್ ಪಾರಸನ್ಸ್ ಮತ್ತು ವ್ಹಿಟ್ಟೆಮೋರ್ ಜೊತೆ ಒಪ್ಪಂದ ಮಾಡಿಕೊಂಡು, ೧೯೬೦ರಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳದಲ್ಲಿ ಈ ಕಾರ್ಖಾನೆಯನ್ನು ಪ್ರಾರಂಭಿಸಲು ನಿರ್ಧರಿಸಿದರು. ಈ ಕಾರ್ಖಾನೆಯನ್ನು ಕೃಷ್ಣರಾಜಸಾಗರ ಅಣೆಕಟ್ಟಿನ ಸಮೀಪದಲ್ಲಿ ಸ್ಥಾಪಿಸಲು ನಿರ್ಧರಿಸಿದ್ದರಿಂದ, ಸಾಕಷ್ಟು ನೀರಿನ ಸೌಕರ್ಯ ಪಡೆಯಲು ಅನುಕೂಲವಾಯಿತು. ಕಬ್ಬಿನ ಸಿಪ್ಪೆಯು ಮಂಡ್ಯ ಸಕ್ಕರೆ ಕಾರ್ಖಾನೆಯಿಂದ ಅಧಿಕ ಪ್ರಮಾಣದಲ್ಲಿ ದೊರಕುತ್ತಿದ್ದುದರಿಂದ, ೧೯೬೦ರ ಜೂನ್‌ನಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳದಲ್ಲಿ ಕಾರ್ಖಾನೆಯ ಕಟ್ಟಡದ ನಿರ್ಮಾಣ ಕಾರ್ಯಾರಂಭಗೊಂಡಿತು. ೧೯೬೧ರ ಮಾರ್ಚ್‌ನಲ್ಲಿ ಇದಕ್ಕೆ ಬೇಕಾಗುವ ಯಂತ್ರಗಳನ್ನು ತರಿಸಿಕೊಳ್ಳಲಾಯಿತು. ೧೯೬೨ರ ಫೆಬ್ರವರಿಯಲ್ಲಿ ಇದರ ಕಟ್ಟಡ ಮತ್ತು ಯಂತ್ರಗಳ ಜೋಡಣೆ ಕಾರ್ಯ ಮುಗಿದು, ೧೯೬೨ರ ಆಗಸ್ಟ್ ಎರಡರಂದು ಕಾಗದ ಉತ್ಪಾದನಾ ಕಾರ್ಯ ಪ್ರಾರಂಭಗೊಂಡಿತು. ಮುದ್ರಣ ಮತ್ತು ಬರವಣಿಗೆಗೆ ಬೇಕಾಗುವ ಕಾಗದವನ್ನು ತಯಾರಿಸಲು ಪ್ರತಿಶತ ೬೦ ರಷ್ಟು ಕಬ್ಬಿನ ಸಿಪ್ಪೆಯ ಪಲ್ಪು ಮತ್ತು ಪ್ರತಿಶತ ೪೦ ರಷ್ಟು ನಾರಿನ ಪಲ್ಪು ಉಪಯೋಗಿಸಲಾಗುತ್ತಿತ್ತು. ಉಳಿದಂತೆ ಕಾಗದಗಳ ತಯಾರಿಕೆಯಲ್ಲಿ ಬರೀ ಕಬ್ಬಿನ ಸಿಪ್ಪೆಯ ಪಲ್ಪನ್ನೇ ಉಪಯೋಗಿಸಲಾಗುತ್ತಿತ್ತು.

ಈ ಕಾರ್ಖಾನೆಯು ಪ್ರಾರಂಭದಲ್ಲಿ ದಿನ ಒಂದಕ್ಕೆ ೩೫ ಟನ್ ಕಾಗದವನ್ನು ಉತ್ಪಾದಿಸುತ್ತಿತ್ತು. ಕಾಗದದ ಬೇಡಿಕೆ ಹೆಚ್ಚಾದುದುರಿಂದ ಮತ್ತು ಸಮೀಪದಲ್ಲೇ ಇದ್ದ ಸಕ್ಕರೆ ಕಾರ್ಖಾನೆಗಳು ಅಧಿಕ ಪ್ರಮಾಣದಲ್ಲಿ ಕಬ್ಬಿನ ಸಿಪ್ಪೆಯನ್ನು ಪೂರೈಸುತ್ತಿದ್ದುದರಿಂದ, ದಿನ ಒಂದಕ್ಕೆ ೭೫ ಟನ್ ಕಾಗದವನ್ನು ಉತ್ಪಾದಿಸಲು ಕೈಗಾರಿಕಾ ಪರವಾನಿಗಿ ದೊರಕಿತು. ಈ ಕಾರ್ಖಾನೆಯ ವಿಸ್ತರಣಾ ಕಾರ್ಯಕ್ರಮವನ್ನು ಭಾರತದ ಕೈಗಾರಿಕಾ ಹಣಕಾಸು ನಿಗಮದಿಂದ

ನೇಮಿಸಲ್ಪಟ್ಟ ತಾಂತ್ರಿಕ ಸಮಿತಿ ಪರಿಶೀಲಿಸಿದ ನಂತರ ಕಂಪೆನಿಯು ತನ್ನ ಉತ್ಪಾದನಾ ಸಾಮರ್ಥ್ಯವನ್ನು ದಿನ ಒಂದಕ್ಕೆ ೧೦೦ ಟನ್ ಇರುವಂತೆ ಎರಡು ಹಂತಗಳಲ್ಲಿ ಹೆಚ್ಚಿಸಿತು. ಬೆಂಗಳೂರು-ಬೆಳಗೊಳ-ಮಡಿಕೇರಿ ರಸ್ತೆ-ಸೌಲಭ್ಯ ಮತ್ತು ಮೈಸೂರು ಅರಸೀಕೆರೆ ರೈಲುಸಾರಿಗೆ ಸೌಲಭ್ಯವಿದ್ದುದರಿಂದ ಸಾಗಾಣಿಕೆಯೂ ಸುಸೂತ್ರವಾಗಿ ನಡೆಯುತ್ತಿತ್ತು.

ಈ ಕಾರ್ಖಾನೆಯು ೧೯೭೪ರಲ್ಲಿ ಕೇಂದ್ರ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿತು. ಕಲ್ಕತ್ತದ ಹಿಂದೂಸ್ಥಾನ ಪೇಪರ್ ಕಂಪನಿಯು ಅದರ ನಿರ್ವಹಣಾ ಹೊಣೆ ಹೊತ್ತಿತ್ತು. ಉತ್ತಮವಾಗಿ ನಡೆಯುತ್ತಿದ್ದ ಈ ಕಾರ್ಖಾನೆ ೧೯೯೨ ರಿಂದ ಅವನತಿಯ ಹಾದಿ ಹಿಡಿಯಿತು. ರೋಗಗ್ರಸ್ಥವಾಗಿರುವ ಈ ಕಾರ್ಖಾನೆಯನ್ನು ಖಾಸಗಿಯವರಿಗೆ ವಹಿಸಲು ಕೈಗಾರಿಕಾ ಪುನರುಜ್ಜೀವನ ಮಂಡಳಿ ಶಿಫಾರಸ್ಸು ಮಾಡಿತು. ಈ ರೋಗಗ್ರಸ್ಥ ಕಾರ್ಖಾನೆಯನ್ನು ವಹಿಸಿಕೊಳ್ಳಲು ಯಾರೂ ಮುಂದೆ ಬಾರದೇ ಮುಚ್ಚಲ್ಪಟ್ಟಿರುವುದರಿಂದ ಕಾರ್ಮಿಕರ ಪರಿಹಾರಕ್ಕಾಗಿ ೨೦೦ ಲಕ್ಷ ರೂ.ಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ.

## ಮೈಸೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್

ಪ್ರಕೃತಿದತ್ತ ನೈಟ್ರೋಜಿನ್‌ನಿಂದ ರಾಸಾಯನಿಕ ಗೊಬ್ಬರವನ್ನು ತಯಾರಿಸುವ ಉದ್ದೇಶದಿಂದ ೧೯೩೭ರಲ್ಲಿ ಮೈಸೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ನಿ. ಎಂಬ ಕೂಡು ಬಂಡವಾಳ ಕಂಪನಿಯನ್ನು ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳದಲ್ಲಿ ಸ್ಥಾಪಿಸಲಾಯಿತು. ಇದು ಭಾರತದ ಮೊಟ್ಟಮೊದಲ ಸಿಂಥೆಟಿಕ್ ಅಮೋನಿಯ ಪ್ಲಾಂಟ್ ಆಗಿತ್ತು. ಮೈಸೂರು ರಾಜ್ಯದಲ್ಲಿ ಕಲ್ಲಿದ್ದಲು ದೊರಕದೇ ಇದ್ದುದರಿಂದ ಮತ್ತು ಕಡಿಮೆ ದರದಲ್ಲಿ ಬೇರೆ ಯಾವುದೇ ಉರವಲನ್ನು ಪಡೆಯಲು ಸಾಧ್ಯವಿಲ್ಲದಿದ್ದುದರಿಂದ ಅಮೋನಿಯವನ್ನು ತಯಾರಿಸಲು ಬೇಕಾಗುವ ಹೈಡ್ರೋಜನ್ ಅನ್ನು ಎಲೆಕ್ಟ್ರೋಲಿಸಿಸ್ ವಿಧಾನದಿಂದ ಪಡೆಯಲು ನಿರ್ಧರಿಸಲಾಯಿತು. ಇದಕ್ಕೆ ಅಧಿಕ ಪ್ರಮಾಣದಲ್ಲಿ ಬೇಕಾಗುವ ವಿದ್ಯುಚ್ಛಕ್ತಿಯನ್ನು ರಿಯಾಯಿತಿ ದರದಲ್ಲಿ ಒದಗಿಸಲು ಮೈಸೂರು ಸರ್ಕಾರ ೧೯೩೭ರ ಸೆಪ್ಟೆಂಬರ್‌ನಲ್ಲಿ ಮುಂದೆ ಬಂದುದರಿಂದ ಈ ಕಾರ್ಖಾನೆಯನ್ನು ೧೯೩೭ರ ನವೆಂಬರ್‌ನಲ್ಲಿ ೨೫ ಲಕ್ಷ ರೂ.ಗಳ ಬಂಡವಾಳದೊಂದಿಗೆ ಸ್ಥಾಪಿಸಲಾಯಿತು. ಇದಕ್ಕೆ ಬೇಕಾಗಿದ್ದ ಯಂತ್ರೋಪಕರಣಗಳನ್ನು ನ್ಯೂಯಾರ್ಕಿನ ಮೆಸರ್ಸ್. ಕೆಮಿಕಲ್ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನಿಂದ ಆಮದುಮಾಡಿಕೊಳ್ಳಲಾಯಿತು. ಉತ್ಪಾದನೆ ೧೯೪೦ರಿಂದ ಪ್ರಾರಂಭಗೊಂಡಿತು. ನ್ಯೂಯಾರ್ಕಿನ ಮೆಸರ್ಸ್. ಕೆಮಿಕಲ್ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನಿಂದ ಇಲೆಕ್ಟ್ರೋಲಿಟಿಕ್ ಹೈಡ್ರೋಜನ್ ಪ್ಲಾಂಟ್ ಮತ್ತು ಡಿ.ಸಿ.ಜನರೇಟರ್, ಅಮೋನಿಯ ಪ್ಲಾಂಟ್, ಅಮೋನಿಯ ಸಲ್ಫೇಟ್ ಪ್ಲಾಂಟ್ ಮತ್ತು ಆಸಿಡ್ ಪ್ಲಾಂಟ್‌ಗಳನ್ನು ಪಡೆದುಕೊಳ್ಳಲಾಯಿತು. ಇದಕ್ಕೆ ಬೇಕಾಗುವ ವಿದ್ಯುತ್ತನ್ನು ಮೈಸೂರು ಸರ್ಕಾರದಿಂದ ಯೂನಿಟ್ ಒಂದಕ್ಕೆ ೧/೪ ಆಣೆಯಂತೆ ಪಡೆದುಕೊಂಡಿತು. ಈ ದರವು ಕಂಪನಿ ಆದಾಯದ ಪ್ರತಿಶತ ಐದರಷ್ಟು ಹೆಚ್ಚುವವರಿಗೂ ಇರಬೇಕೆಂದೂ ಆದಾಯ ಹೆಚ್ಚಿದಂತೆ ವಿದ್ಯುತ್‌ದರದ ಪ್ರಮಾಣವನ್ನು ಹೆಚ್ಚಿಸಬಹುದೆಂದೂ, ಅಲ್ಲಿಯವರೆಗೆ ಒಂದು ಯೂನಿಟ್‌ಗೆ ೧/೪ ಆಣೆ ಮುಂದುವರಿಯಬೇಕೆಂಬ ಒಪ್ಪಂದದ ಮೇಲೆ ಮೈಸೂರು ಸರ್ಕಾರದಿಂದ ವಿದ್ಯುತ್ ಸೌಲಭ್ಯ ಪಡೆಯಿತು. ಕಾರ್ಖಾನೆ ಪಡೆಯುತ್ತಿದ್ದ ೫೦೦೦ ಹೆಚ್.ಪಿ. ವಿದ್ಯುತ್‌ನಲ್ಲಿ ಸುಮಾರು ೪೭೦೦ ಹೆಚ್.ಪಿ ವಿದ್ಯುತ್‌ಅನ್ನು ಅಮೋನಿಯಂ ಸಲ್ಫೇಟ್ ಉತ್ಪಾದಿಸಲು ಬಳಸಲಾಗುತ್ತಿತ್ತು. ಈ ಕಾರ್ಖಾನೆಯು ಉಪಯೋಗಿಸುತ್ತಿದ್ದ ವಿದ್ಯುತ್ತಿನ ದರವನ್ನು ಅನೇಕ ಸಂದರ್ಭಗಳಲ್ಲಿ ಹೆಚ್ಚಿಸಲಾಯಿತಾದರೂ, ೧೯೫೭ಕ್ಕಿಂತ ಮುಂಚೆ ಹೆಚ್ಚಳಗೊಂಡ ದರ ಯೂನಿಟ್‌ಗೆ ೧/೪ ಆಣೆಗಿಂತ ಅಧಿಕವಾಗದೆ ೧೯೫೭ರ ಒಪ್ಪಂದಕ್ಕನುಗುಣವಾಗಿತ್ತು. ಮೈಸೂರು ರಾಜ್ಯ ವಿದ್ಯುಚ್ಛಕ್ತಿ ಮಂಡಳಿ ೧೯೫೭ರ ಡಿಸೆಂಬರ್‌ನಲ್ಲಿ ಯೂನಿಟ್ ಒಂದಕ್ಕೆ ೨.೭ ಪೈಸೆಯಂತೆ ೧೯೬೮ರ ಅಂತ್ಯದವರೆಗೆ ವಿದ್ಯುತ್ ನೀಡಲು ಒಪ್ಪಿಗೆ ನೀಡಿತು. ಅದಾದನಂತರ

ಎಲ್ಲಾ ಕಾರ್ಖಾನೆಗಳಿಗೆ ಅನ್ವಯವಾಗುವ ದರವನ್ನು ಅದಕ್ಕೂ ನಿಗದಿಪಡಿಸಿತು. ಕಾರ್ಖಾನೆಗೆ ಬೇಕಾಗುವ ನೀರನ್ನು ಕೃಷ್ಣರಾಜಸಾಗರದಿಂದ ಪಡೆದುಕೊಳ್ಳಲಾಗುತ್ತಿದೆ. ಈ ಕಾರ್ಖಾನೆಯು ಕೃಷ್ಣರಾಜಸಾಗರದಿಂದ ನೀರನ್ನು ಪಡೆಯುವುದಕ್ಕೆ ಮತ್ತು ಕೊಳೆ ನೀರನ್ನು ಹೊರಬಿಡುವುದಕ್ಕೆ ಸ್ವಂತ ವ್ಯವಸ್ಥೆ ಮಾಡಿಕೊಂಡಿದೆ. ಈ ಕಾರ್ಖಾನೆಯು ೩.೭೫ ದಶಲಕ್ಷ ಗ್ಯಾಲನ್ ನೀರನ್ನು ಪಂಪ್ ಮಾಡಿಕೊಂಡು ತಂಪು ಮಾಡಲು ಉಪಯೋಗಿಸಿದ ನಂತರ ಶೇ.೯೫ರಷ್ಟು ನೀರನ್ನು ಪಂಪ್ ಮಾಡಿ ನಾಲೆಗೇ ಮರುಪರಿಸುತ್ತದೆ.

ಜಮೀನಿನಲ್ಲಿ ರಾಸಾಯನಿಕ ಗೊಬ್ಬರದಿಂದ ಹೆಚ್ಚು ಫಸಲನ್ನು ಪಡೆಯಬಹುದೆಂಬ ಅಂಶ ಮನವರಿಕೆಯಾದ ಮೇಲೆ ನೈಟ್ರೋಜಿನಸ್ ಗೊಬ್ಬರದಷ್ಟೇ ಫಾಸ್ಫಾಟಿಕ್ ಗೊಬ್ಬರವೂ ಮುಖ್ಯ ಎಂಬುದನ್ನರಿತು, ದಿನಕ್ಕೆ ಐದು ಟನ್ ಅಮೋನಿಯಂ ಮತ್ತು ೨೦ ಟನ್ ಅಮೋನಿಯಂ ಸಲ್ಫೇಟ್ ಉತ್ಪಾದನಾ ಸಾಮರ್ಥ್ಯದೊಂದಿಗೆ ಇದು ಕಾರ್ಯಾರಂಭ ಮಾಡಿತು. ಈ ಅಲ್ಪ ಉತ್ಪಾದನಾ ಸಾಮರ್ಥ್ಯದಿಂದ ಇರುವ ಬೇಡಿಕೆಯನ್ನು ಪೂರೈಸಲು ಅಸಮರ್ಥವಾದುದರಿಂದ, ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಕಾರ್ಯವನ್ನು ಕೈಗೊಂಡಿತು. ಅದರಂತೆ ದಿನ ಒಂದಕ್ಕೆ ೫೦ ಟನ್ ಉತ್ಪಾದನಾ ಸಾಮರ್ಥ್ಯದ ಸಲ್ಫೂರಿಕ್ ಆಸಿಡ್ ಪ್ಲಾಂಟ್ ಮತ್ತು ೧೫೦ ಟನ್ ಉತ್ಪಾದನಾ ಸಾಮರ್ಥ್ಯದ ಪೂರ್ಣ ತಾಂತ್ರಿಕ ಸಲ್ಫರ್ ಪಾಸ್ಫೇಟ್ ಪ್ಲಾಂಟುಗಳನ್ನು ಸ್ಥಾಪಿಸಲಾಯಿತು.

## ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಕಂಪೆನಿ

ಎಲ್ಲಾ ವಿಧವಾದ ರಾಸಾಯನಿಕಗಳನ್ನು ಮತ್ತು ಆಲ್ಕಲೀಸ್‌ಗಳನ್ನು ತಯಾರಿಸುವ ಉದ್ದೇಶದಿಂದ ೧೯೫೬ರ ಕಂಪೆನಿಗಳ ಕಾಯ್ದೆಯಡಿ ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಕಂಪನಿ ಲಿ. ೧೯೬೩ರ ಡಿಸೆಂಬರ್ ೨೪ರಂದು ಸಾರ್ವಜನಿಕ ಕಂಪನಿಯಾಗಿ ಮಂಡ್ಯದಲ್ಲಿ ಸ್ಥಾಪನೆಗೊಂಡಿತು. ಇದರ ವ್ಯವಹಾರಕ್ಕೆ ಬೇಕಾದ ಅನುಮತಿ ಪತ್ರವು ಕಂಪನಿಗಳ ರಿಜಿಸ್ಟ್ರಾರ್‌ರವರಿಂದ ೧೯೬೪ರ ಮೇ ಮಾಹೆಯಲ್ಲಿ ದೊರಕಿತು. ಎಲ್ಲಾ ವಿಧವಾದ ರಾಸಾಯನಿಕ ಮತ್ತು ಆಲ್ಕಲೀಸ್‌ಗಳನ್ನು ತಯಾರಿಸುವುದರ ಜೊತೆಗೆ ಅವುಗಳಿಂದ ಉತ್ಪತ್ತಿಯಾಗಬಹುದಾದ ಉಪಉತ್ಪನ್ನಗಳನ್ನು ತಯಾರಿಸುವುದೂ ಗುರಿಯಾಗಿತ್ತು. ಸೆಲ್ಯುಲೋಸ್, ಟ್ರೈ ಅಸಿಟೇಟ್, ಸೆಕೆಂಡರಿ ಅಸಿಟೇಟ್ ಮೌಲ್ಡಿಂಗ್ ಕಾಂಪೌಂಡ್ಸ್, ಪ್ಲಾಸ್ಟಿಸೈಸರ್ ಅಸಿಟಿಕ್ ಆಸಿಡ್, ಅಸಿಟಿಕ್ ಅನ್ ಹೈಡ್ರೇಡ್ ಮತ್ತು ಫಿಲಂ, ಪ್ಲಾಸ್ಟಿಸೈಸರ್ ಮತ್ತು ರಯಾನ್ ಕಾರ್ಖಾನೆಗಳಲ್ಲಿ ಉಪಯೋಗಿಸುವ ಎಲ್ಲಾ ಸರಕುಗಳನ್ನು ಮಾರುವುದು, ಕೊಳ್ಳುವುದು, ಆಮದು ಮತ್ತು ರಫ್ತು ಮಾಡುವುದು ಈ ಕಂಪನಿಯ ಕಾರ್ಯಚಟುವಟಿಕೆಗಳಾಗಿವೆ. ಅಸಿಟೇಟ್ ಕಾರ್ಖಾನೆಯು ಮಂಡ್ಯದ ಸಕ್ಕರೆ ಕಾರ್ಖಾನೆಯ ಪಕ್ಕದಲ್ಲಿಯೇ ಸ್ಥಾಪಿತವಾಗಿದೆ. ಅಸಿಟೇಟ್ ಮತ್ತು ಕೆಮಿಕಲ್ಸ್ ಕಂಪನಿಯು ಮೈಸೂರು ಸಕ್ಕರೆ ಕಂಪೆನಿಯಿಂದ ೬೪ ಎಕರೆ ಜಮೀನನ್ನು ೧,೦೪,೪೭೫ ರೂ.ಗಳಿಗೆ ಕೊಂಡು ಕಚೇರಿ, ವಾಸದ ಮನೆ, ದಾಸ್ತಾನು ಮಳಿಗೆ ಮೊದಲಾದವನ್ನು ೧,೨೧,೨೦೦ ರೂ.ಗಳ ವೆಚ್ಚದಲ್ಲಿ ನಿರ್ಮಿಸಿತು. ಈ ಕಂಪನಿಯು ಅಮೆರಿಕ ಸಂಸ್ಥಾನದ ಕ್ಯಾಲಿಪೋರ್ನಿಯಾದ ಮೆಸರ್ಸ್. ವಾನ್ ಕೊಹೊರ್ನ್ ಯೂನಿವರ್ಸಲ್ ಕಾರ್ಪೊರೇಷನ್ ಮತ್ತು ಸ್ವೀಡನ್ನಿನ ಸ್ಟಾಕ್‌ಹೋಮ್‌ನ ಮೆಸರ್ಸ್. ಅಕ್ಟಿ ಇಬೊಲಗೆಟ್ ಕಮಟೂರ್ ಜೊತೆ ಸೆಲಿಲೋಸ್ ಟ್ರೆ ಅಸಿಟೇಟ್, ಅಸಿಟೇಟ್ ಮೌಲ್ಡಿಂಗ್ ಕಾಂಪೌಂಡ್ಸ್ ಉತ್ಪಾದಿಸುವ ಪ್ಲಾಂಟ್ ಮತ್ತು ಯಂತ್ರಗಳನ್ನು ಪಡೆಯುವ ಕರಾರನ್ನೂ ಮಾಡಿಕೊಂಡಿತು. ಫೋಟೋಗ್ರಾಫಿಕ್ ಫಿಲಂಗೆ ಬೇಕಾಗುವ ಸೆಲ್ಯುಲೋಸ್ ಟ್ರೈ ಅಸಿಟೇಟ್ ಉತ್ಪಾದಿಸುವ ತಾಂತ್ರಿಕತೆಯ ಒಪ್ಪಂದವನ್ನು ಬೆಲ್ಜಿಯಂನ ಸುಪ್ರಸಿದ್ಧ ಕಂಪೆನಿಯಾದ ಮೆಸರ್ಸ್. ಗೆವರ್ಟ್ ಫೋಟೋ ಪ್ರೊಡಕ್ಷನ್ ಜೊತೆ ಒಪ್ಪಂದ ಮಾಡಿಕೊಂಡಿತ್ತು. ಆದರೆ ಈ ಕಾರ್ಖಾನೆಯು ಕಾರಣಾಂತರಗಳಿಂದಾಗಿ ಇಂದು ಮುಚ್ಚಲ್ಪಟ್ಟಿದೆ.

## ಹಬೀಬ್ ಸಾಲ್ವೆಂಟ್ಸ್ ಎಕ್ಸ್‌ಟ್ರ್ಯಾಕ್ಟ್ಸ್ (ಲಿ)

ಎಣ್ಣೆ ಬೀಜವನ್ನು ಅರೆದು ಶುದ್ಧೀಕರಿಸಿದ ಖಾದ್ಯ ತೈಲ, ಸೋಪು ತಯಾರಿಕೆಗೆ ಉಪಯೋಗಿಸುವ ತೈಲ ಮತ್ತು ಕೋಳಿ ಆಹಾರದ ಘಟಕಾಂಶಗಳನ್ನು ಉತ್ಪಾದಿಸುವ ಉದ್ದೇಶದಿಂದ ಹಬೀಬ್ ಸಾಲ್ವೆಂಟ್ಸ್ ಎಕ್ಸ್‌ಟ್ರ್ಯಾಕ್ಟ್ಸ್ (ಲಿ), ೧೯೭೯ರಲ್ಲಿ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟಿರುವ ಖಾಸಗಿ ವಲಯದ ಕಾರ್ಖಾನೆಯಾಗಿದೆ. ಈ ಘಟಕದಲ್ಲಿ ತೊಡಗಿಸಿರುವ ಒಟ್ಟು ಬಂಡವಾಳ ಸುಮಾರು ೬೦೦ ಲಕ್ಷ ರೂ.ಗಳಾಗಿದ್ದು, ಇಲ್ಲಿ ೨೦೦೦ದ ಮಾರ್ಚ್ ಅಂತ್ಯಕ್ಕೆ ೨೪ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಲಾಗಿತ್ತು. ಈ ಮಿಲ್ಲಿನ ಎಣ್ಣೆಬೀಜವನ್ನು ಅರೆಯುವ ಘಟಕವು ದಿನವೊಂದಕ್ಕೆ ೨೨೫ ಮೆಟ್ರಿಕ್ ಟನ್ ಅರೆಯುವ ಸಾಮರ್ಥ್ಯವನ್ನೂ ಮತ್ತು ತೈಲ ಶುದ್ಧೀಕರಣ ಘಟಕವು ದಿನ ಒಂದಕ್ಕೆ ೫೦ ಮೆಟ್ರಿಕ್ ಟನ್ ಸಾಮರ್ಥ್ಯವನ್ನೂ ಹೊಂದಿದ್ದವು. ಈ ಮಿಲ್ಲು ೧೯೯೯–೨೦೦೦ನೇ ಸಾಲಿನಲ್ಲಿ ೨೫,೩೭೯ ಮೆಟ್ರಿಕ್ ಟನ್ ಸರಕನ್ನು ಉತ್ಪಾದಿಸಿದೆ. ಈ ಸರಕಿನ ಮಾರುಕಟ್ಟೆಯ ಮೌಲ್ಯ ಸುಮಾರು ೨,೭೩೪ ಲಕ್ಷ ರೂಪಾಯಿಗಳಾಗಿದೆ. ಈ ಮಿಲ್ಲಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ, ಕಾರ್ಮಿಕ ಕಾಯ್ದೆಯ ಸೌಲಭ್ಯಗಳಾದ ಭವಿಷ್ಯನಿಧಿ, ಗ್ರಾಚ್ಯುಯಿಟಿ, ಮೊದಲಾದ ಸೌಲಭ್ಯಗಳು ದೊರಕುತ್ತಿವೆ.

## ಎಂ.ಕೆ.ಆಗ್ರೋಟೆಕ್ (ಲಿ)

ಎಣ್ಣೆ ತೆಗೆದ ಹಿಂಡಿ ಮತ್ತು ಶುದ್ಧೀಕರಿಸಿದ ತೈಲಗಳನ್ನು ಉತ್ಪಾದಿಸುವ ಉದ್ದೇಶದಿಂದ ಎಂ.ಕೆ.ಆಗ್ರೋಟೆಕ್ (ಲಿ)., ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಪ್ರಾರಂಭಗೊಂಡಿತು. ಇದರಲ್ಲಿ ತೊಡಗಿಸಲಾಗಿರುವ ಒಟ್ಟು ಬಂಡವಾಳ ಸುಮಾರು ೭೯ ಲಕ್ಷ ರೂ.ಗಳು. ೨೦೦೦ದ ಮಾರ್ಚ್ ಅಂತ್ಯಕ್ಕೆ ಈ ಕಾರ್ಖಾನೆಯು ೪೨ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸಿದೆ. ಅದೇ ಕಾಲಾವಧಿಯಲ್ಲಿ ಈ ಮಿಲ್ಲಿನ ಎಣ್ಣೆ ಬೀಜವನ್ನು ಅರೆಯುವ ಘಟಕವು ದಿನ ಒಂದಕ್ಕೆ ೨೫೦ ಟನ್ ಬೀಜ ಅರೆಯುವ ಸಾಮರ್ಥ್ಯವನ್ನು ಮತ್ತು ತೈಲ ಶುದ್ಧೀಕರಣ ಘಟಕವು ದಿನ ಒಂದಕ್ಕೆ ೧೦೦ ಟನ್ ತೈಲ ಶುದ್ಧೀಕರಣ ಸಾಮರ್ಥ್ಯವನ್ನೂ ಹೊಂದಿದ್ದವು. ೧೯೯೯–೨೦೦೦ನೇ ಸಾಲಿನಲ್ಲಿ ೪೦,೮೦೨ ಟನ್ ತೈಲರಹಿತ ಹಿಂಡಿ ಮತ್ತು ೧೧,೯೮ ಟನ್ ಶುದ್ಧೀಕರಿಸಿದ ತೈಲವನ್ನು ಉತ್ಪಾದಿಸಲಾಗಿದೆ. ಇವುಗಳ ಒಟ್ಟು ಮೌಲ್ಯ ೬,೨೯೦ ಲಕ್ಷ ರೂ.ಗಳು.

## ಕೀಲಾರ ಪವರ್ ಪ್ರೈ. (ಲಿ)

ನಾಲೆ ನೀರಿನಿಂದ ಜಲವಿದ್ಯುತ್ತನ್ನು ಉತ್ಪಾದಿಸಿ ಕರ್ನಾಟಕ ರಾಜ್ಯ ವಿದ್ಯುತ್ ಪ್ರಸರಣಾ ನಿಗಮದ ಮೂಲಕ ಗ್ರಾಹಕರಿಗೆ ಒದಗಿಸುವ ಉದ್ದೇಶದಿಂದ ಕೀಲಾರ ಕಿರು ವಿದ್ಯುತ್ ಯೋಜನೆಯು ೧೯೯೭ರಲ್ಲಿ ಮಂಡ್ಯ ಜಿಲ್ಲೆಯ ಕೀಲಾರದಲ್ಲಿ ಕಾರ್ಯಾರಂಭಗೊಂಡಿರುವ ಖಾಸಗಿ ವಿದ್ಯುತ್ ಯೋಜನೆಯಾಗಿದೆ. ಇದರಲ್ಲಿ ತೊಡಗಿಸಿರುವ ಬಂಡವಾಳ ೩೦೦ ಲಕ್ಷ ರೂ.ಗಳು. ಈ ಯೋಜನೆಯ ಉತ್ಪಾದನಾ ಸಾಮರ್ಥ್ಯ ಎರಡು ಮೆ.ವ್ಯಾ ರಷ್ಟಿದೆ. ಇಲ್ಲಿ ಉತ್ಪಾದಿಸಿದ ವಿದ್ಯುತ್ತನ್ನು ಕೈಗಾರಿಕಾ ಸಬ್‌ಸ್ಟೇಷನ್‌ನಲ್ಲಿರುವ ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮದ ಗ್ರಿಡ್‌ಗೆ ರವಾನಿಸಲಾಗುವುದು.

## ಬಿ.ಪಿ.ಎಲ್ ಪಿಟಿಐ ಪ್ರೈ. (ಲಿ)

ಡ್ರೈಸೆಲ್ ಬ್ಯಾಟರಿಯನ್ನು ತಯಾರಿಸುವ ಉದ್ದೇಶದಿಂದ ಬಿ.ಪಿ.ಎಲ್ ಪಿಟಿಐ ಪ್ರೈ (ಲಿ.) ಖಾಸಗಿ ವಲಯದ ಕಾರ್ಖಾನೆಯು ೧೯೯೮ರಲ್ಲಿ ಮದ್ದೂರು ತಾಲೂಕಿನ ಸೋಮನಹಳ್ಳಿಯ ಕರ್ನಾಟಕ ಕೈಗಾರಿಕಾ ಕ್ಷೇತ್ರಾಭಿವೃದ್ಧಿ

ಮಂಡಳಿಯ ನಿವೇಶನದಲ್ಲಿ ಸ್ಥಾಪನೆಗೊಂಡಿದೆ. ೨೦೦೦ದ ಮಾರ್ಚ್ ಅಂತ್ಯಕ್ಕೆ ತೊಡಗಿಸಿದ್ದ ಒಟ್ಟು ಬಂಡವಾಳ ೭,೫೮೬ ಲಕ್ಷ ರೂ.ಗಳಾಗಿತ್ತು. ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರ ಸಂಖ್ಯೆ ೨೮೪. ಈ ಕಾರ್ಖಾನೆಯ ಉತ್ಪಾದನಾ ಸಾಮರ್ಥ್ಯ ೨೪೦ ದಶಲಕ್ಷ ಸೆಲ್ಲುಗಳು. ಈ ಕಾರ್ಖಾನೆಯು ೧೯೯೯–೨೦೦೦ನೇ ಸಾಲಿನಲ್ಲಿ ೯೧ ದಶಲಕ್ಷ ಸೆಲ್ಲುಗಳನ್ನು ಉತ್ಪಾದಿಸಿತು. ಈ ಕಾರ್ಖಾನೆಗೆ ಬೇಕಾಗುವ ಕಚ್ಚಾ ಸರಕನ್ನು ಪ್ರಧಾನವಾಗಿ ವಿದೇಶಿ ಕಂಪನಿಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಇಲೆಕ್ಟ್ರೋಲೈಟ್ ಟಿನ್ ಪ್ಲೇಟನ್ನು ಜಪಾನಿನ ಮೆಸರ್ಸ್. ಮೆಟ್ ಸೂಯಿ ಕಂಪನಿ (ಲಿ) ನಿಂದ, ಸತುವನ್ನು ವಿಕ್ಟೋರಿಯಾದ ಮೆಸರ್ಸ್. ಪಾಸ್ಮಿಂಕೋ ಮೆಟಲ್ಸ್ ಪ್ರೈ.(ಲಿ) ನಿಂದ, ನ್ಯಾಚುರಲ್ ಮ್ಯಾಂಗನೀಸ್ ಡೈ ಆಕ್ಸೈಡ್ ಅನ್ನು ಸಿಂಗಪೂರ್‌ನ ಮೆಸರ್ಸ್. ಈಸ್ಟ್ ಬೋರನ್ ಕೆಮಿಕಲ್ಸ್ ಇಂಡಸ್ಟ್ರೀಸ್ ಪ್ರೈ.(ಲಿ) ನಿಂದ, ಅಮೋನಿಯಂ ಕ್ಲೋರೈಡ್ ಸೆಪರೇಟರ್ ಪೇಪರ್ ಮತ್ತು ಇಲೆಕ್ಟ್ರೋಲೈಟ್ ಮ್ಯಾಂಗನೀಸ್ ಡೈ ಆಕ್ಸೈಡ್ ಅನ್ನು ಜಪಾನಿನ ಮೆಸರ್ಸ್ ಕ್ಯೂಷಿನ್ ಶೋಜಿ ಕಂಪೆನಿ.ಲಿ. ನಿಂದ ಮತ್ತು ಕಾರ್ಬನ್ ರಾಡನ್ನು ಚೆನ್ನೈನ ಮೆಸರ್ಸ್. ಐ.ಎಂ.ಸಿ.ಸಿ. ನಿಂದ ಆಮದುಮಾಡಿಕೊಳ್ಳಲಾಗುತ್ತಿದೆ.

ಮಂಡ್ಯ ಜಿಲ್ಲೆಯಲ್ಲಿ ೨೦೦೧ದ ಮಾರ್ಚ್ ಅಂತ್ಯಕ್ಕೆ ಸ್ಥಾಪನೆಗೊಂಡಿದ್ದ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ವಿವರಗಳನ್ನು ಕೋಷ್ಟಕ ೫.೭ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೭**

| ಕ್ರ. ಸಂ. | ಕೈಗಾರಿಕೆಯ ಹೆಸರು ಮತ್ತು ವಿಳಾಸ | ಆಡಳಿತ ವ್ಯವಸ್ಥೆ | ಉತ್ಪಾದಿಸುವ ಸರಕು | ಪ್ರಸ್ತುತ ಸ್ಥಿತಿ | ಕಾರ್ಮಿಕರ ಸಂಖ್ಯೆ | ಬಂಡವಾಳ (ಲಕ್ಷ ರೂ.ಗಳಲ್ಲಿ) |
|---|---|---|---|---|---|---|
| ೧ | ೨ | ೩ | ೪ | ೫ | ೬ | ೭ |
| ೧ | ಮೈಸೂರು ಸಕ್ಕರೆ ಕಂಪೆನಿ ನಿಯಮಿತ, ಮಂಡ್ಯ | ಸರ್ಕಾರಿ | ಸಕ್ಕರೆ | ಈಗಲೂ ಕಾರ್ಯನಿರತವಾಗಿದ್ದು, ಉತ್ಪಾದನಾ ಕಾರ್ಯದಲ್ಲಿ ತೊಡಗಿದೆ. | ೧,೩೮೯ | ೧,೬೪೪ |
| ೨ | ಬಿಪಿಎಲ್ ಪಿಟಿಐ ಪ್ರೈ. (ಲಿ) ಸೋಮನಹಳ್ಳಿ ಕೈಗಾರಿಕಾ ಏರಿಯಾ, ಮದ್ದೂರು ತಾ. | ಖಾಸಗಿ | ಡ್ರೈಸೆಲ್ಸ್ | – ,, – | ೩೩೫ | ೮,೦೦೦ |
| ೩ | ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ಪಾಂಡವಪುರ | ಸಹಕಾರಿ | ಸಕ್ಕರೆ | – ,, – | ೭೯೬ | ೬೯೪೧.೫೦ |
| ೪ | ಚಾಮುಂಡಿ ಷುಗರ್ಸ್ (ಲಿ) ಭಾರತೀ ನಗರ ಮದ್ದೂರು ತಾ | ಖಾಸಗಿ | ಸಕ್ಕರೆ | – ,, – | ೭೦೦ | ೫೮೩೪ |
| ೫ | ಹಬೀಬ್ ಸಾಲ್ವೆಂಟ್ ಎಕ್ಸ್‌ಟ್ರ್ಯಾಕ್ಷನ್ (ಲಿ) ಶ್ರೀರಂಗಪಟ್ಟಣ | ಖಾಸಗಿ | ಖಾದ್ಯತೈಲ | – ,, – | ೨೬ | ೨೪೫ |
| ೬ | ಎಂ.ಕೆ.ಆಗ್ರೋಟೆಕ್ ಶ್ರೀರಂಗಪಟ್ಟಣ ತಾಲೂಕು | ಖಾಸಗಿ | ಖಾದ್ಯತೈಲ | – ,, – | ೪೨ | ೬೯೯ |

| ೧ | ೨ | ೩ | ೪ | ೫ | ೬ | ೭ |
|---|---|---|---|---|---|---|
| ೭ | ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ. ಗೆಜ್ಜಲಗೆರೆ | ಸಹಕಾರಿ | ಹಾಲು ಸಂಸ್ಕರಣೆ ಮತ್ತು ಹಾಲಿನಿಂದ ತಯಾರಿಸಿದ ಸರಕು | – ,, – | ೬೦೭ | ೩೫೯ |
| ೮ | ಐ.ಸಿ.ಎಲ್ ಷುಗರ್ಸ್ ಮಾಕವಳ್ಳಿ, ಕೃಷ್ಣರಾಜಪೇಟೆ ತಾಲ್ಲೂಕು | ಖಾಸಗಿ | ಸಕ್ಕರೆ | – ,, – | ೧೯೮ | ೧೧೩೩೨ |
| ೯ | ಕೀಲಾರ ಪವರ್ ಪ್ರಾಜೆಕ್ಟ್ ಕೀಲಾರ, ಮಂಡ್ಯ ತಾಲೂಕು | ಖಾಸಗಿ | ಜಲವಿದ್ಯುತ್ | – ,, – | ೧೨ | ೩೦೦ |
| ೧೦ | ಕರ್ನಾಟಕ ಮಲ್ಲಾದಿ ಬಯೋಟೆಕ್ ಲಿ. ತೂಬಿನಕೆರೆ ಕೈಗಾರಿಕಾ ವಲಯ, ಮಂಡ್ಯ ತಾ | ಖಾಸಗಿ | ಔಷಧಿಗಳು | – ,, – | ೧೫೬ | ೧೬೦೦ |
| ೧೧ | ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಕಂಪೆನಿ ಲಿ.ಮಂಡ್ಯ | ಸರ್ಕಾರಿ | ಬ್ಲೀಚ್ಡ್ ಲಿಂಟಲ್ ಕಾಟನ್ | ಉತ್ಪಾದನಾ ಕಾರ್ಯ ಸ್ಥಗಿತಗೊಂಡಿದೆ. | ೬೨೭ | ೯೫೬ |
| ೧೨ | ಮಂಡ್ಯ ರಾಷ್ಟ್ರೀಯ ಪೇಪರ್ ಮಿಲ್ಸ್ ಬೆಳಗೊಳ ಶ್ರೀರಂಗಪಟ್ಟಣ ತಾ. | ಸರ್ಕಾರಿ | ಕಾಗದ | – ,, – | ೯೫೬ | ೮೩೯ |
| ೧೩ | ಗ್ಯಾಮನ್ ಫಾರ್ಕೆಮ್ಸ್ ಇಂಡಿಯಾ ಲಿ. ಬೆಳಗೊಳ ಶ್ರೀರಂಗಪಟ್ಟಣ ತಾ | ಖಾಸಗಿ | ರಾಸಾಯನಿಕ | – ,, – | – | – |
| ೧೪ | ಮೈಸೂರು ಡೈಯರ್ಸ್ ಪ್ರೈ.ಲಿ. ಮೊಗರಹಳ್ಳಿ ಶ್ರೀರಂಗಪಟ್ಟಣ ತಾ. | ಖಾಸಗಿ | – | – ,, – | – | – |
| ೧೫ | ಡಿ.ಎಸ್.ಗ್ರಾನೈಟ್ಸ್ ಸೋಮನಹಳ್ಳಿ ಕೈಗಾರಿಕಾ ವಲಯ, ಮದ್ದೂರು ತಾ | ಖಾಸಗಿ | ಗ್ರಾನೈಟ್ ಕಟ್ಟಿಂಗ್ ಮತ್ತು ಪಾಲಿಷಿಂಗ್ | – ,, – | ೩೧ | ೨೨೦ |

## ಸಣ್ಣ ಪ್ರಮಾಣದ ಕೈಗಾರಿಕೆಗಳು

ಮಂಡ್ಯ ಜಿಲ್ಲೆಯಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳು ಪ್ರಗತಿಯತ್ತ ಸಾಗುತ್ತಿರುವುದನ್ನು ಕಾಣಬಹುದು. ೧೯೬೭ರ ವೇಳೆಗೆ ಜಿಲ್ಲೆಯಲ್ಲಿ ಕೇವಲ ೫೪ ಸಣ್ಣ ಪ್ರಮಾಣದ ಕೈಗಾರಿಕೆಗಳು ನೋಂದಣಿಗೊಂಡಿದ್ದವು. ಆನಂತರದ ವರ್ಷಗಳಲ್ಲಿ ಉದ್ದಿಮೆದಾರರಿಗೆ ದೊರಕಿದ ಪ್ರೋತ್ಸಾಹದಿಂದಾಗಿ ಅವುಗಳ ಬೆಳವಣಿಗೆಯಲ್ಲಿ ಹೆಚ್ಚಳ

ಉಂಟಾಯಿತು. ೨೦೦೦ದ ಮಾರ್ಚ್ ಅಂತ್ಯಕ್ಕೆ ಜಿಲ್ಲೆಯಲ್ಲಿ ೫೮೬೬ ನೋಂದಾಯಿತ ಸಣ್ಣ ಕೈಗಾರಿಕಾ ಘಟಕಗಳಿದ್ದು, ೨೮,೨೧೧ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಅವುಗಳಲ್ಲಿ ತೊಡಗಿಸಿದ್ದ ಬಂಡವಾಳ ರೂ.೮,೧೨೮.೪೮ ಲಕ್ಷವಾಗಿತ್ತು

ಕೋಷ್ಟಕ ೫.೮ ರಲ್ಲಿ ಜಿಲ್ಲೆಯಲ್ಲಿ ೧೯೮೭–೮೮ ರಿಂದ ೨೦೦೧–೦೨ರವರೆಗೆ ಸಣ್ಣ ಕೈಗಾರಿಕೆಗಳ ಬೆಳವಣಿಗೆಯ ವಿವರ.

**ಕೋಷ್ಟಕ ೫.೮**

| ವರ್ಷ | ಸಣ್ಣ ಕೈಗಾರಿಕಾ ಘಟಕಗಳ ಸಂಖ್ಯೆ | ಸ್ಥಿರ ಬಂಡವಾಳ (ಲಕ್ಷ ರೂ.ಗಳಲ್ಲಿ) | ಉದ್ಯೋಗಿಗಳ ಸಂಖ್ಯೆ | ಒಟ್ಟು ಮೊತ್ತ | | |
|---|---|---|---|---|---|---|
| | | | | ಸಣ್ಣ ಕೈಗಾರಿಕಾ ಘಟಕಗಳ ಸಂಖ್ಯೆ | ಸ್ಥಿರ ಬಂಡವಾಳ (ಲಕ್ಷ ರೂ.ಗಳಲ್ಲಿ) | ಉದ್ಯೋಗಿಗಳ ಸಂಖ್ಯೆ |
| ೧೯೮೭–೮೮ | ೨೦೦ | ೧೫೮.೨೦ | ೯೧೩ | ೧೯೯೯ | ೧೨೬೪.೯೦ | ೧೧೮೬೧ |
| ೧೯೮೮–೮೯ | ೨೦೯ | ೧೬೦.೩೯ | ೧೦೨೪ | ೨೨೦೮ | ೧೪೨೫.೨೯ | ೧೨೮೮೫ |
| ೧೯೮೯–೯೦ | ೨೧೪ | ೩೪೫.೫೮ | ೧೧೨೩ | ೨೪೨೨ | ೧೭೭೦.೮೭ | ೧೪೦೦೮ |
| ೧೯೯೦–೯೧ | ೨೪೮ | ೧೮೧.೫೨ | ೧೧೬೫ | ೨೬೭೦ | ೧೯೫೨.೩೯ | ೧೫೧೭೩ |
| ೧೯೯೧–೯೨ | ೧೮೧ | ೩೨೩.೦೦ | ೯೮೧ | ೨೮೫೧ | ೨೨೭೫.೩೯ | ೧೬೧೫೪ |
| ೧೯೯೨–೯೩ | ೨೦೧ | ೨೭೪.೨೨ | ೧೦೦೨ | ೩೦೫೨ | ೨೫೪೯.೬೧ | ೧೭೧೫೬ |
| ೧೯೯೩–೯೪ | ೨೮೮ | ೨೭೪.೦೯ | ೧೧೯೦ | ೩೩೪೦ | ೨೮೨೩.೭೦ | ೧೮೩೪೬ |
| ೧೯೯೪–೯೫ | ೨೫೦ | ೫೩೯.೭೦ | ೧೧೦೨ | ೩೫೯೦ | ೩೩೬೩.೪೦ | ೧೯೪೪೮ |
| ೧೯೯೫–೯೬ | ೧೭೭ | ೨೭೩.೫೫ | ೮೦೯ | ೩೭೬೭ | ೩೬೩೬.೯೫ | ೨೦೨೫೭ |
| ೧೯೯೬–೯೭ | ೩೧೮ | ೩೬೪.೮೨ | ೧೧೦೬ | ೪೦೮೫ | ೪೦೦೧.೭೭ | ೨೧೩೬೩ |
| ೧೯೯೭–೯೮ | ೮೯೭ | ೧೦೬೯.೭೫ | ೩೧೦೯ | ೪೯೮೨ | ೫೦೭೧.೫೨ | ೨೪೪೭೨ |
| ೧೯೯೮–೯೯ | ೪೬೦ | ೧೩೬೨.೨೫ | ೧೭೪೮ | ೫೪೪೨ | ೬೪೩೩.೭೭ | ೨೬೨೨೦ |
| ೧೯೯೯–೨೦೦೦ | ೪೨೪ | ೧೬೯೪.೭೧ | ೧೯೯೧ | ೫೮೬೬ | ೮೧೨೮.೪೮ | ೨೮೨೧೧ |
| ೨೦೦೦–೦೧ | ೪೩೮ | ೧೫೩೯.೦೭ | ೧೯೫೧ | ೬೩೦೪ | ೯೭೨೭.೫೫ | ೩೦೧೬೨ |
| ೨೦೦೧–೦೨ | ೪೭೦ | ೧೦೫೭.೧೪ | ೧೭೦೨ | ೬೭೭೪ | ೧೦೭೮೪.೬೯ | ೩೧೮೬೪ |

ಆಧಾರ : ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಡ್ಯ

ಮಂಡ್ಯ ಜಿಲ್ಲೆಯಲ್ಲಿ ೧೯೯೯–೨೦೦೦ನೇ ಹಾಗೂ ೨೦೦೧–೨೦೦೨ರಲ್ಲಿದ್ದ ಘಟಕವಾರು ಸಣ್ಣ ಕೈಗಾರಿಕೆಗಳು, ಅವುಗಳಲ್ಲಿ ತೊಡಗಿಸಲ್ಪಟ್ಟಿದ್ದ ಬಂಡವಾಳ ಮತ್ತು ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರ ಸಂಖ್ಯೆ ಇವುಗಳನ್ನು ಮುಂದಿನ ಕೋಷ್ಟಕ ೫.೯ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೯**

| ಕ್ರ. ಸಂ. | ಸಣ್ಣ ಕೈಗಾರಿಕಾ ಘಟಕಗಳ ವಿವರ | ಘಟಕಗಳ ಸಂಖ್ಯೆ | | ಸ್ಥಿರ ಬಂಡವಾಳ (ಲಕ್ಷ ರೂ.ಗಳಲ್ಲಿ) | | ಉದ್ಯೋಗಿಗಳ ಸಂಖ್ಯೆ | |
|---|---|---|---|---|---|---|---|
| | | ೧೯೯೯–೨೦೦೦ | ೨೦೦೧–೦೨ | ೧೯೯೯–೨೦೦೦ | ೨೦೦೧–೦೨ | ೧೯೯೯–೨೦೦೦ | ೨೦೦೧–೦೨ |
| ೧ | ಆಹಾರ ಮತ್ತು ಪಾನೀಯ | ೧೨೪೪ | ೪೮ | ೨೦೭೭.೦೩ | ೨೯೪.೨೫ | ೬೬೨೫ | ೨೮೧ |
| ೨ | ವಸ್ತ್ರ ಮತ್ತು ಸಿದ್ಧ ಉಡುಪುಗಳು | ೫೨೩ | ೮೪ | ೫೮೨.೫೩ | ೭೦.೯೭ | ೨೧೭೪ | ೨೩೯ |
| ೩ | ಮರದ ಗೃಹೋಪಯೋಗಿ ಮತ್ತು ಪೀಠೋಪಕರಣಗಳು | ೪೯೯ | ೨೧ | ೫೩೩.೨೪ | ೫೪.೧೮ | ೨೪೪೨ | ೯೦ |
| ೪ | ಮುದ್ರಣ ಮತ್ತು ಲೇಖನ ಸಾಮಗ್ರಿ | ೨೭೩ | ೧೫ | ೩೨೧.೮೦ | ೩೮.೦೯ | ೧೩೩೪ | ೪೩ |
| ೫ | ಚರ್ಮ ಹದ ಮಾಡುವುದು ಮತ್ತು ಚರ್ಮೋದ್ಯಮ | ೮೧ | ೦೪ | ೭೩.೪೮ | ೧೩.೮೦ | ೪೧೧ | ೨೦ |
| ೬ | ರಬ್ಬರ್ ಮತ್ತು ಪ್ಲಾಸ್ಟಿಕ್ | ೧೦೬ | ೦೫ | ೧೭೨.೧೭ | ೫೩.೦೭ | ೫೭೬ | ೩೦ |
| ೭ | ರಾಸಾಯನಿಕ ವಸ್ತುಗಳು | ೨೬೭ | ೩೧ | ೩೪೨.೧೯ | ೯.೨೨ | ೧೩೫೬ | ೮೬ |
| ೮ | ಗಾಜು ಮತ್ತು ಪಿಂಗಾಣಿ ವಸ್ತುಗಳು | ೧೧೬ | ೦೨ | ೩೦೨.೪೪ | ೩೨.೯೭ | ೭೨೬ | ೩೭ |
| ೯ | ಲೋಹದ ಸಾಮಾನುಗಳು | ೩೪೩ | ೦೩ | ೩೭೯.೭೧ | ೬.೦೦ | ೧೮೨೭ | ೧೨ |
| ೧೦ | ಜನರಲ್ ಇಂಜನಿಯರಿಂಗ್ | ೨೩೩ | ೨೪ | ೪೯೦.೩೧ | ೩೩.೮೦ | ೧೦೭೨ | ೮೪ |
| ೧೧ | ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ | ೧೯೦ | ೦೪ | ೨೧೨.೬೨ | ೧೦.೫೪ | ೯೩೮ | ೧೯ |
| ೧೨ | ಆಟೋಮೊಬೈಲ್ಸ್ | ೨೨ | ೦೩ | ೨೦.೫೬ | ೪.೨೦ | ೯೭ | ೦೯ |
| ೧೩ | ಸಾರಿಗೆ ಸಲಕರಣೆ ಮತ್ತು ಬಿಡಿಭಾಗಗಳು | ೧೭ | – | ೧೮.೬೧ | ೬.೬೦ | ೭೭ | – |
| ೧೪ | ಫೆರಸ್ ಮತ್ತು ನಾನ್ ಫೆರಸ್ ಸರಕುಗಳ ಉತ್ಪಾದನೆ | ೨೦ | ೦೧ | ೧೯.೬೦ | ೪೧.೪೩ | ೧೦೫ | ೦೪ |
| ೧೫ | ರಿಪೇರಿ ಮತ್ತು ಸೇವಾಕಾರ್ಯಗಳು | ೪೭೯ | ೪೨ | ೫೦೧.೮೪ | ೧೫೨.೫೦ | ೨೦೯೯ | ೧೦೨ |
| ೧೬ | ಇತರ ಸೇವಾಕಾರ್ಯಗಳು | ೮೩೫ | ೧೩೩ | ೧೦೬೫.೯೫ | ೨೩೫.೫೪ | ೩೩೭೦ | ೩೩೧ |
| ೧೭ | ಇತರೇ ವಿವಿಧ ಕೈಗಾರಿಕೆಗಳು | ೬೧೮ | ೫೦ | ೧೦೧೪.೪೨ | – | ೨೯೮೦ | ೩೦೫ |
| | ಒಟ್ಟು | ೫೮೬೬ | ೪೭೦ | ೮೧೨೮.೪೮ | ೧೦೫೭.೧೪ | ೨೮೨೦೯ | ೧೬೯೨ |

ಆಧಾರ : ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಡ್ಯ

ಸೂಚನೆ : ೧೯೯೯–೦೦ದಲ್ಲಿ ಕ್ಯೂಮ್ಯುಲೇಟಿವ್ ಅಂಕಿ ಅಂಶಗಳನ್ನು ನೀಡಲಾಗಿದೆ. ೨೦೦೧–೦೨ ರಲ್ಲಿ ಆಯಾ ವರ್ಷದ ಅಂಕಿ ಅಂಶಗಳನ್ನು ಮಾತ್ರ ನೀಡಲಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ೨೦೦೨ರ ಮಾರ್ಚ್ ಅಂತ್ಯಕ್ಕೆ ನೋಂದಣಿಗೊಂಡ ತಾಲೂಕುವಾರು ಸಣ್ಣ ಪ್ರಮಾಣದ ಕೈಗಾರಿಕೆಗಳ ವಿವರಗಳನ್ನು ಕೋಷ್ಟಕ ೫.೧೦ ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧೦**

| ಕ್ರ. ಸಂ. | ತಾಲೂಕು | ಸಣ್ಣ ಕೈಗಾರಿಕಾ ಘಟಕಗಳ ಸಂಖ್ಯೆ | ಸ್ಥಿರ ಬಂಡವಾಳ (ಲಕ್ಷ ರೂ.ಗಳಲ್ಲಿ) | ಉದ್ಯೋಗಿಗಳ ಸಂಖ್ಯೆ |
|---|---|---|---|---|
| ೧ | ಮಂಡ್ಯ | ೧೪೨ | ೪೧೪.೭೨ | ೫೮೫ |
| ೨ | ಮಳವಳ್ಳಿ | ೫೩ | ೯೧.೭೫ | ೧೮೫ |
| ೩ | ಮದ್ದೂರು | ೧೦೫ | ೨೮೫.೮೯ | ೩೬೭ |
| ೪ | ಕೃಷ್ಣರಾಜಪೇಟೆ | ೩೭ | ೨೩.೯೦ | ೮೦ |
| ೫ | ನಾಗಮಂಗಲ | ೩೮ | ೧೧೭.೪೯ | ೧೪೨ |
| ೬ | ಶ್ರೀರಂಗಪಟ್ಟಣ | ೫೫ | ೧೯.೪೦ | ೧೫೨ |
| ೭ | ಪಾಂಡವಪುರ | ೪೦ | ೧೦೪.೯೯ | ೧೭೭ |

**ಆಧಾರ : ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಡ್ಯ**

ಮಂಡ್ಯ ಜಿಲ್ಲೆಯಲ್ಲಿ ೨೦೦೦ದ ಮಾರ್ಚ್ ಅಂತ್ಯಕ್ಕೆ ತಾಲೂಕುವಾರು ಸಣ್ಣ ಕೈಗಾರಿಕೆಗಳು, ಅವುಗಳಲ್ಲಿ ತೊಡಗಿಸಲ್ಪಟ್ಟಿದ್ದ ಬಂಡವಾಳ ಮತ್ತು ಅವುಗಳು ಒದಗಿಸಿದ್ದ ಉದ್ಯೋಗ ಇವುಗಳ ವಿವರಗಳನ್ನು ಕೋಷ್ಟಕ ೫.೧೧ರಲ್ಲಿ ಒದಗಿಸಲಾಗಿದೆ.

ಜಿಲ್ಲೆಯಲ್ಲಿರುವ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳು ಪ್ರಧಾನವಾಗಿ ಆಹಾರ ಮತ್ತು ಪಾನೀಯ, ವಸ್ತ್ರ ಮತ್ತು ಸಿದ್ಧ ಉಡುಪುಗಳು, ಗೃಹೋಪಯೋಗಿ ಮತ್ತು ಪೀಠೋಪಕರಣಗಳು, ಪ್ಲಾಸ್ಟಿಕ್ ವಸ್ತುಗಳು, ರಾಸಾಯನಿಕ ವಸ್ತು, ಗಾಜು ಮತ್ತು ಪಿಂಗಾಣಿ ವಸ್ತು, ಲೋಹದ ಸಾಮಾನು, ಯಂತ್ರೋಪಕರಣ, ರಿಪೇರಿ ಮತ್ತು ಸೇವಾಕಾರ್ಯ ಹಾಗೂ ಇನ್ನಿತರೇ ಉತ್ಪಾದನಾ ಕಾರ್ಯಗಳಲ್ಲಿ ತೊಡಗಿದ್ದವು. ಜಿಲ್ಲೆಯಲ್ಲಿ ಸುಮಾರು ಶೇಕಡ ೧೦ರಷ್ಟು ಸಣ್ಣ ಪ್ರಮಾಣದ ಮತ್ತು ಅತೀ ಸಣ್ಣ ಪ್ರಮಾಣದ ಕೈಗಾರಿಕೆಗಳು ನೋಂದಣಿಗೊಳ್ಳದೇ ಕಾರ್ಯನಿರ್ವಹಿಸುತ್ತಿವೆ ಎಂದು ಅಂದಾಜು ಮಾಡಲಾಗಿದೆ.

## ೧. ಆಹಾರ ಮತ್ತು ಪಾನೀಯ ಕೈಗಾರಿಕೆ

ಕೃಷಿ ಆಧಾರಿತ (ಆಹಾರ ಮತ್ತು ಪಾನೀಯ) ಕೈಗಾರಿಕೆಗಳ ವ್ಯಾಪ್ತಿಗೆ ಪ್ರಧಾನವಾಗಿ ಹಿಟ್ಟಿನ ಗಿರಣಿ, ಪಶು ಮತ್ತು ಕೋಳಿ ಆಹಾರ ತಯಾರಿಕೆ, ಖಾದ್ಯತೈಲ, ಐಸ್‌ಕ್ರೀಂ ತಯಾರಿಕೆ, ಬೇಕರಿ ತಿನಿಸು, ಮಂಡಕ್ಕಿ ಮತ್ತು ಅವಲಕ್ಕಿ ತಯಾರಿಕೆ, ಬೀಡಿ ಕಟ್ಟುವುದು, ರೇಷ್ಮೆ ಗೂಡಿನಿಂದ ರೇಷ್ಮೆ ತೆಗೆಯುವುದು, ರೇಷ್ಮೆ ನೂಲು ತಯಾರಿಸುವುದು, ಕಬ್ಬಿನ ರಸ ತಯಾರಿಕೆ, ಬೆಲ್ಲ ತಯಾರಿಕೆ, ಅಕ್ಕಿ ಗಿರಣಿ ಮೊದಲಾದವುಗಳು ಸೇರುತ್ತವೆ. ಜಿಲ್ಲೆಯಲ್ಲಿ ೨೦೦೦ದ ಮಾರ್ಚ್ ಅಂತ್ಯಕ್ಕೆ ನೋಂದಣಿಗೊಂಡ ಕೃಷಿ ಆಧಾರಿತ ಕೈಗಾರಿಕೆಗಳ ಸಂಖ್ಯೆ ೧೨೪೪ ಆಗಿತ್ತು. ಇವುಗಳಲ್ಲಿ ತೊಡಗಿಸಲ್ಪಟ್ಟಿದ್ದ ಬಂಡವಾಳ ರೂ. ೨೦೭೭.೦೩ ಲಕ್ಷ ಆಗಿದ್ದು ಒಟ್ಟು ೬೬೨೫ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಅವುಗಳಲ್ಲಿ ಮಂಡ್ಯ ತಾಲೂಕು ೫೫೦ ಆಹಾರ ಮತ್ತು ಪಾನೀಯ ಕೈಗಾರಿಕಾ

## ಕೋಷ್ಟಕ ೫.೧೧

ಸಣ್ಣ ಪ್ರಮಾಣದ ಕೈಗಾರಿಕೆಗಳ ವಿವರ

| | ಆಹಾರ ಮತ್ತು ಪಾನೀಯ | ವಸ್ತ್ರ ಮತ್ತು ಸಿದ್ಧ ಉಡುಪು | ಮರದ ಗೃಹೋಪಯೋಗಿ ಮತ್ತು ಪೀಠೋಪಕರಣಗಳು | ಮುದ್ರಣ ಮತ್ತು ಲೇಖನ ಸಾಮಗ್ರಿಗಳು | ಚರ್ಮೋದ್ಯೋಗಗಳು | ರಬ್ಬರ್ ಮತ್ತು ಪ್ಲಾಸ್ಟಿಕ್ ಉತ್ಪಾದನೆ | ರಾಸಾಯನಿಕ ವಸ್ತುಗಳು | ಗಾಜು ಮತ್ತು ಪಿಂಗಾಣಿ | ಜನರಲ್ ಇಂಜಿನಿಯರಿಂಗ್ ಮತ್ತು ಇತರ ಸೇವಾ ಕಾರ್ಯಗಳು | ಇತರ ಕೈಗಾರಿಕೆಗಳು | ಒಟ್ಟು |
|---|---|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ |
| **ಮಂಡ್ಯ ತಾಲೂಕು** | | | | | | | | | | | |
| ಅ. | ೫೫೦ | ೯೪ | ೧೭೨ | ೯೭ | ೨೩ | ೫೪ | ೧೦೬ | ೨೫ | ೩೪೪ | ೮೨೩ | ೨೨೮೮ |
| ಆ. | ೯೭೩.೮೨ | ೧೩೮.೧೧ | ೨೧೬.೨೮ | ೧೪೧.೧೪ | ೨೭.೩೪ | ೧೦೮.೦೯ | ೨೦೭.೬೫ | ೩೦.೩೪ | ೬೬೦.೭೭ | ೧೦೭೦.೩೬ | ೩೫೭೩.೯೦ |
| ಇ. | ೨೯೧೯ | ೪೧೯ | ೮೩೯ | ೪೮೫ | ೧೨೩ | ೩೦೦ | ೫೧೦ | ೧೨೬ | ೧೭೫೫ | ೩೭೦೯ | ೧೧೧೮೫ |
| **ಮಳವಳ್ಳಿ ತಾಲೂಕು** | | | | | | | | | | | |
| ಅ. | ೧೭೦ | ೯೯ | ೫೬ | ೩೬ | ೧೩ | ೧೬ | ೨೧ | ೨೦ | ೮೩ | ೧೯೬ | ೭೧೦ |
| ಆ. | ೩೧೫.೮೦ | ೮೦.೦೮ | ೩೫.೮೦ | ೨೩.೩೫ | ೫.೨೨ | ೭.೮೦ | ೧೬.೧೦ | ೧೧.೨೮ | ೫೩.೮೮ | ೧೪೧.೩೭ | ೬೯೦.೬೮ |
| ಇ. | ೯೨೧ | ೪೫೧ | ೨೬೫ | ೧೭೭ | ೬೪ | ೮೬ | ೯೧ | ೧೦೨ | ೪೧೬ | ೧೦೦೬ | ೩೫೮೯ |
| **ಮದ್ದೂರು ತಾಲೂಕು** | | | | | | | | | | | |
| ಅ. | ೧೪೭ | ೫೯ | ೭೨ | ೪೫ | ೦೯ | ೧೬ | ೨೩ | ೧೦ | ೮೮ | ೩೦೭ | ೭೭೬ |
| ಆ. | ೨೨೨.೫೪ | ೭೮.೦೮ | ೮೩.೨೮ | ೫೪.೪೭ | ೧೦.೨೯ | ೧೯.೩೫ | ೨೬.೨೭ | ೧೧೯.೩೯ | ೯೯.೨೮ | ೫೫೨.೯೭ | ೧೨೬೫.೯೨ |
| ಇ. | ೮೦೮ | ೨೩೭ | ೩೭೫ | ೨೨೦ | ೪೮ | ೮೯ | ೧೨೨ | ೯೧ | ೪೪೦ | ೧೧೧೪ | ೩೫೪೪ |
| **ಕೃಷ್ಣರಾಜಪೇಟೆ ತಾಲೂಕು** | | | | | | | | | | | |
| ಆ. | ೧೦೨ | ೬೬ | ೨೯ | ೨೩ | ೧೬ | ೦೩ | ೧೪ | ೧೯ | ೮೧ | ೧೫೭ | ೫೧೦ |
| ಆ. | ೧೪೫.೩೦ | ೯೧.೧೩ | ೩೫.೯೬ | ೨೪.೨೮ | ೧೨.೮೮ | ೭.೩೮ | ೯.೬೬ | ೧೪.೫೭ | ೭೦.೭೪ | ೧೫೩.೪೭ | ೫೬೫.೩೭ |
| ಇ. | ೪೬೭ | ೨೩೬ | ೧೧೯ | ೧೦೩ | ೭೨ | ೧೩ | ೭೨ | ೧೧೩ | ೩೭೯ | ೬೩೬ | ೨೨೧೦ |

| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ |
|---|---|---|---|---|---|---|---|---|---|---|---|
| **ನಾಗಮಂಗಲ ತಾಲೂಕು** | | | | | | | | | | | |
| ಅ. | ೪೫ | ೩೫ | ೩೪ | ೨೩ | ೦೨ | ೧೦ | ೧೭ | ೧೯ | ೭೮ | ೧೮೧ | ೪೪೪ |
| ಆ. | ೪೪.೨೬ | ೨೨.೫೯ | ೨೪.೪೨ | ೨೨.೮೪ | ೧.೨೨ | ೨೨.೮೨ | ೧೦.೭೨ | ೧೧.೬೩ | ೪೯.೮೫ | ೨೨೨.೪೫ | ೪೩೨.೮೦ |
| ಇ. | ೨೩೦ | ೧೨೪ | ೧೫೭ | ೯೫ | ೧೦ | ೫೪ | ೮೫ | ೯೭ | ೩೧೬ | ೭೫೨ | ೧೯೭೦ |
| **ಶ್ರೀರಂಗಪಟ್ಟಣ ತಾಲೂಕು** | | | | | | | | | | | |
| ಅ. | ೧೦೫ | ೬೭ | ೬೨ | ೨೩ | ೧೦ | ೦೬ | ೭೦ | ೧೩ | ೭೫ | ೧೩೭ | ೫೬೮ |
| ಆ. | ೧೫೬.೬೨ | ೫೮.೦೨ | ೫೮.೩೦ | ೨೨.೨೦ | ೯.೦೫ | ೫.೮೭ | ೫೭.೩೫ | ೬೬.೯೩ | ೯೫.೫೭ | ೨೧೧.೩೫ | ೭೪೧.೨೬ |
| ಇ. | ೫೫೨ | ೨೮೦ | ೩೦೫ | ೧೧೫ | ೫೨ | ೨೮ | ೩೮೬ | ೧೧೧ | ೩೮೪ | ೬೩೭ | ೨೮೫೦ |
| **ಪಾಂಡವಪುರ ತಾಲೂಕು** | | | | | | | | | | | |
| ಅ. | ೧೨೫ | ೧೦೩ | ೭೪ | ೨೬ | ೦೮ | ೦೧ | ೧೬ | ೧೦ | ೭೬ | ೧೩೧ | ೫೨೦ |
| ಆ. | ೨೧೮.೬೯ | ೧೧೪.೫೩ | ೭೯.೨೦ | ೩೩.೪೯ | ೭.೪೭ | ೦.೮೭ | ೧೪.೪೪ | ೫೫.೩೦ | ೧೧೧.೩೩ | ೨೩೦.೨೪ | ೮೬೫.೫೬ |
| ಇ. | ೭೨೮ | ೪೨೭ | ೩೮೨ | ೧೩೯ | ೪೨ | ೦೬ | ೯೦ | ೮೬ | ೩೭೭ | ೫೮೬ | ೨೮೬೩ |

ಅ: ಘಟಕಗಳ ಸಂಖ್ಯೆ   ಆ: ಬಂಡವಾಳ (ಲಕ್ಷ ರೂ.ಗಳಲ್ಲಿ)   ಇ. ಉದ್ಯೋಗಿಗಳ ಸಂಖ್ಯೆ

ಆಧಾರ : ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಡ್ಯ

ಘಟಕಗಳನ್ನು ಹೊಂದಿದ್ದು, ರೂ.೯೭೩.೮೨ ಲಕ್ಷ ಬಂಡವಾಳದೊಂದಿಗೆ ೨೯೧೯ ಕಾರ್ಮಿಕರಿಗೆ ಉದ್ಯೋಗ ದೊರಕಿಸಿಕೊಟ್ಟು ಮೊದಲ ಸ್ಥಾನವನ್ನು ಪಡೆದಿದ್ದರೆ, ಉಳಿದ ಸ್ಥಾನವನ್ನು ಅನುಕ್ರಮವಾಗಿ ಮಳವಳ್ಳಿ (೧೭೦), ಮದ್ದೂರು (೧೪೭), ಪಾಂಡವಪುರ (೧೨೫), ಶ್ರೀರಂಗಪಟ್ಟಣ (೧೦೫) ಮತ್ತು ಕೃಷ್ಣರಾಜಪೇಟೆ (೧೦೨) ತಾಲೂಕುಗಳು ಪಡೆದುಕೊಂಡಿದ್ದರೆ, ನಾಗಮಂಗಲ ತಾಲೂಕು ೪೫ ಘಟಕಗಳೊಂದಿಗೆ ಕೊನೆಯ ಸ್ಥಾನದಲ್ಲಿದೆ.

## ೨. ಗಾಜು ಮತ್ತು ಪಿಂಗಾಣಿ ಕೈಗಾರಿಕೆ

ಜಿಲ್ಲೆಯಲ್ಲಿ ೨೦೦೦ದ ಮಾರ್ಚ್ ಅಂತ್ಯಕ್ಕೆ ನೋಂದಣಿಗೊಂಡ ಸಣ್ಣ ಪ್ರಮಾಣದ ಮತ್ತು ಅತೀ ಸಣ್ಣ ಪ್ರಮಾಣದ ಗಾಜು ಮತ್ತು ಪಿಂಗಾಣಿ ಕೈಗಾರಿಕಾ ಘಟಕಗಳ ಸಂಖ್ಯೆ ೧೧೬ ಆಗಿತ್ತು. ಹಾಗೂ ಅವುಗಳಲ್ಲಿ ತೊಡಗಿಸಿದ್ದ ಬಂಡವಾಳ ರೂ.೩೦೨.೪೪ ಲಕ್ಷ ವಾಗಿತ್ತು. ಈ ಘಟಕಗಳು ಒಟ್ಟು ೭೨೬ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಈ ಕೈಗಾರಿಕೆಗಳ ವ್ಯಾಪ್ತಿಗೆ ಪ್ರಧಾನವಾಗಿ ಸುಣ್ಣ ತಯಾರಿಕೆ, ಟೇಬಲ್ ಮೌಲ್ಡ್ ಇಟ್ಟಿಗೆ ತಯಾರಿಕೆ, ಮಂಗಳೂರು ಹೆಂಚು ತಯಾರಿಕೆ, ಕಲ್ಲನ್ನು ತುಂಡರಿಸುವುದು ಮತ್ತು ಪಾಲೀಶ್ ಮಾಡುವುದು, ಮೊಸಾಯಿಕ್ ಟೈಲ್ಸ್ ತಯಾರಿಕೆ, ಸಿಮೆಂಟ್ ಪೈಪ್ ತಯಾರಿಕೆ, ಅಸ್ಬೆಸ್ಟಾಸ್ ಪೌಡರ್ ತಯಾರಿಕೆ, ಬಳಪ, ಕಲ್ಲಿನ ಸಾಮಾನು ತಯಾರಿಕೆ ಮೊದಲಾದವುಗಳು ಸೇರಿರುತ್ತವೆ. ಈ ಘಟಕಗಳ ಸಂಖ್ಯೆ ಮಂಡ್ಯ ತಾಲೂಕಿನಲ್ಲಿ ಹೆಚ್ಚಾಗಿದ್ದು (೨೫ ಘಟಕಗಳು) ಅದಕ್ಕೆ ಮೊದಲ ಸ್ಥಾನ ದೊರಕುವಂತೆ ಮಾಡಿವೆ. ಉಳಿದ ಸ್ಥಾನವನ್ನು ಅನುಕ್ರಮವಾಗಿ ಮಳವಳ್ಳಿ (೨೦), ಕೃಷ್ಣರಾಜಪೇಟೆ (೧೯), ನಾಗಮಂಗಲ (೧೯), ಶ್ರೀರಂಗಪಟ್ಟಣ (೧೩), ತಾಲೂಕುಗಳು ಪಡೆದುಕೊಂಡಿವೆ. ಮದ್ದೂರು ಮತ್ತು ಪಾಂಡವಪುರ ತಾಲೂಕುಗಳು ತಲಾ ೧೦ ಘಟಕಗಳೊಂದಿಗೆ ಕೊನೆಯ ಸ್ಥಾನ ಪಡೆದಿದ್ದವು.

## ೩. ಚರ್ಮ ಮತ್ತು ರೆಗ್ಸಿನ್ ಕೈಗಾರಿಕೆ

ಚರ್ಮ ಮತ್ತು ರೆಗ್ಸಿನ್ ಕೈಗಾರಿಕೆಗಳ ವ್ಯಾಪ್ತಿಗೆ ಪ್ರಧಾನವಾಗಿ ಚರ್ಮದ ಪಾದರಕ್ಷೆಗಳು, ಆಟದ ಸಾಮಾನುಗಳು, ಫ್ಯಾನ್ಸಿ ಸರಕುಗಳು ಮತ್ತು ಚರ್ಮಹದ ಮಾಡುವ ಘಟಕಗಳು ಸೇರುತ್ತವೆ. ಜಿಲ್ಲೆಯಲ್ಲಿ ೨೦೦೦ದ ಮಾರ್ಚ್ ಅಂತ್ಯಕ್ಕೆ ನೋಂದಣಿಗೊಂಡಿದ್ದ ಚರ್ಮ ಮತ್ತು ರೆಗ್ಸಿನ್ ಉದ್ಯಮಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತೀಸಣ್ಣ ಕೈಗಾರಿಕಾ ಘಟಕಗಳ ಸಂಖ್ಯೆ ೮೧. ಇವುಗಳಲ್ಲಿ ತೊಡಗಿಸಲ್ಪಟ್ಟಿದ್ದ ಬಂಡವಾಳ ೭೩.೪೮ ಲಕ್ಷ ರೂ.ಗಳಾಗಿದ್ದು, ಒಟ್ಟು ೪೧೧ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಈ ಘಟಕಗಳ ಸಂಖ್ಯೆ ಮಂಡ್ಯ ತಾಲೂಕಿನಲ್ಲಿ ಹೆಚ್ಚಾಗಿದ್ದು, (೨೩ ಘಟಕಗಳು) ಅದಕ್ಕೆ ಮೊದಲ ಸ್ಥಾನ ದೊರಕುವಂತೆ ಮಾಡಿವೆ. ನಂತರದ ಸ್ಥಾನವನ್ನು ಅನುಕ್ರಮವಾಗಿ ಕೃಷ್ಣರಾಜಪೇಟೆ (೧೬), ಮಳವಳ್ಳಿ (೧೩), ಶ್ರೀರಂಗಪಟ್ಟಣ (೧೦), ಮದ್ದೂರು (೦೯), ಮತ್ತು ಪಾಂಡವಪುರ (೦೮) ತಾಲೂಕುಗಳು ಪಡೆದುಕೊಂಡಿವೆ. ನಾಗಮಂಗಲ ತಾಲೂಕು ಕೇವಲ ಎರಡು ಘಟಕಗಳನ್ನು ಹೊಂದಿದ್ದು, ಕೊನೆಯ ಸ್ಥಾನದಲ್ಲಿದೆ.

## ೪. ವಸ್ತ್ರ ಮತ್ತು ಸಿದ್ಧ ಉಡುಪುಗಳ ಕೈಗಾರಿಕೆ

ಜಿಲ್ಲೆಯ ವಸ್ತ್ರ ಮತ್ತು ಸಿದ್ಧ ಉಡುಪುಗಳಿಗೆ ಸಂಬಂಧಿಸಿದ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳ ವ್ಯಾಪ್ತಿಗೆ ಪ್ರಧಾನವಾಗಿ ಟವಲ್ಸ್, ನ್ಯಾಪ್ಕಿನ್ಸ್, ಹಾಗೂ ಸಿದ್ಧ ಉಡುಪುಗಳ ತಯಾರಿಕಾ ಘಟಕಗಳು ಸೇರುತ್ತವೆ. ಜಿಲ್ಲೆಯಲ್ಲಿ ೨೦೦೦ದ ಮಾರ್ಚ್ ಅಂತ್ಯಕ್ಕೆ ನೋಂದಣಿಗೊಂಡಿದ್ದ ವಸ್ತ್ರ ಮತ್ತು ಸಿದ್ಧ ಉಡುಪುಗಳ ಸಣ್ಣ ಮತ್ತು ಅತಿ ಸಣ್ಣ

ಕೈಗಾರಿಕಾ ಘಟಕಗಳ ಸಂಖ್ಯೆ ೫೨೩ ಆಗಿತ್ತು. ಇವುಗಳಲ್ಲಿ ತೊಡಗಿಸಿದ್ದ ಬಂಡವಾಳ ೫೮೨.೫೩ ಲಕ್ಷ ರೂ.ಗಳಾಗಿದ್ದು ಅವು ಒಟ್ಟು ೨೧೭೪ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಇವು ಜಿಲ್ಲೆಯ ಪಾಂಡವಪುರ ತಾಲ್ಲೂಕಿನಲ್ಲಿ ಹೆಚ್ಚಾಗಿದ್ದು (೧೦೩ ಘಟಕಗಳು) ಅದಕ್ಕೆ ಮೊದಲ ಸ್ಥಾನ ದೊರಕುವಂತೆ ಮಾಡಿವೆ. ಉಳಿದ ಸ್ಥಾನವನ್ನು ಅನುಕ್ರಮವಾಗಿ ಮಳವಳ್ಳಿ (೯೯), ಮಂಡ್ಯ (೯೪), ಶ್ರೀರಂಗಪಟ್ಟಣ (೬೭), ಕೃಷ್ಣರಾಜಪೇಟೆ (೬೬), ಮದ್ದೂರು (೫೯) ತಾಲೂಕುಗಳು ಪಡೆದುಕೊಂಡಿದ್ದವು. ನಾಗಮಂಗಲ ತಾಲೂಕು ಕೇವಲ ೩೫ ಘಟಕಗಳೊಂದಿಗೆ ಕೊನೆಯ ಸ್ಥಾನದಲ್ಲಿದೆ.

### ೫. ಮರದ ಗೃಹೋಪಯೋಗಿ ಮತ್ತು ಪೀಠೋಪಕರಣ ಕೈಗಾರಿಕೆ

ಜಿಲ್ಲೆಯಲ್ಲಿ ೨೦೦೦ದ ಮಾರ್ಚ್ ಅಂತ್ಯಕ್ಕೆ ನೋಂದಣಿಗೊಂಡಿದ್ದ ಸಣ್ಣ ಮತ್ತು ಅತೀ ಸಣ್ಣ ಗೃಹೋಪಯೋಗಿ ಮತ್ತು ಪೀಠೋಪಕರಣಗಳನ್ನು ತಯಾರಿಸುವ ಕೈಗಾರಿಕಾ ಘಟಕಗಳ ಸಂಖ್ಯೆ ೪೯೯ ಆಗಿತ್ತು; ಅವುಗಳಲ್ಲಿ ತೊಡಗಿಸಿದ್ದ ಬಂಡವಾಳ ೫೩೩.೨೪ ಲಕ್ಷ ರೂ.ಗಳಾಗಿದ್ದು, ಅವು ೨೪೪೨ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಈ ಘಟಕಗಳು ಜಿಲ್ಲೆಯಲ್ಲಿ ಪ್ರಧಾನವಾಗಿ ಮರಕೊಯ್ಯುವುದು, ಪೀಠೋಪಕರಣ, ಕಿಟಕಿ ಬಾಗಿಲು, ಎತ್ತಿನ ಗಾಡಿ, ಆಟದ ಸಾಮಾನು, ಮತ್ತು ಪೋಟೋ ಕಟ್ಟುಗಳನ್ನು ತಯಾರಿಸುವುದು, ವುಡನ್ ಇನ್ ಲೇ ವರ್ಕ್ಸ್ ಮಾಡುವುದೇ ಮೊದಲಾದ ಕಾರ್ಯಗಳಲ್ಲಿ ತೊಡಗಿವೆ. ಈ ಘಟಕಗಳು ಜಿಲ್ಲೆಯ ಮಂಡ್ಯ ತಾಲೂಕಿನಲ್ಲಿ ಹೆಚ್ಚಾಗಿದ್ದು (೧೭೨ ಘಟಕಗಳು) ಅದಕ್ಕೆ ಮೊದಲ ಸ್ಥಾನ ದೊರಕುವಂತೆ ಮಾಡಿವೆ. ಉಳಿದ ಸ್ಥಾನಗಳನ್ನು ಅನುಕ್ರಮವಾಗಿ ಪಾಂಡವಪುರ (೭೪), ಮದ್ದೂರು (೭೨), ಶ್ರೀರಂಗಪಟ್ಟಣ (೬೨), ಮಳವಳ್ಳಿ (೫೬) ಮತ್ತು ನಾಗಮಂಗಲ (೩೪), ತಾಲೂಕುಗಳು ಪಡೆದುಕೊಂಡಿವೆ. ಕೃಷ್ಣರಾಜಪೇಟೆ ತಾಲೂಕು ೨೯ ಘಟಕಗಳನ್ನು ಹೊಂದಿದ್ದು, ೧೧೯ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದು ಜಿಲ್ಲೆಯ ಕೊನೆಯ ಸ್ಥಾನದಲ್ಲಿದೆ.

### ೬. ಮುದ್ರಣ ಲೇಖನ ಸಾಮಗ್ರಿಗಳ ಕೈಗಾರಿಕೆ

ಜಿಲ್ಲೆಯ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ವ್ಯಾಪ್ತಿಗೆ ಕೈಚೀಲ, ಪೇಪರ್ ಕವರ್, ವ್ಯಾಕ್ಸ್ ಕೋಟೆಡ್ ಪೇಪರ್, ಕಾರ್ಡ್‌ಬೋರ್ಡ್, ಗಮ್, ಪೇಪರ್ ಟೇಪ್, ಕಂಪ್ಯೂಟರ್ ಸ್ಟೇಷನರಿ ಐಟಮ್ಸ್, ಮುದ್ರಣಾಲಯ ಮೊದಲಾದವುಗಳು ಸೇರಿರುತ್ತವೆ. ಜಿಲ್ಲೆಯಲ್ಲಿ ೨೦೦೦ದ ಮಾರ್ಚ್ ಅಂತ್ಯಕ್ಕೆ ನೋಂದಣಿಗೊಂಡಿದ್ದ ಸಣ್ಣ ಮತ್ತು ಅತೀ ಸಣ್ಣ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ತಯಾರಿಕಾ ಘಟಕಗಳ ಸಂಖ್ಯೆ ೨೭೩ ಆಗಿತ್ತು. ಇವು ೧೩೩೪ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು, ಹಾಗೂ ತೊಡಗಿಸಲ್ಪಟ್ಟಿದ್ದ ಬಂಡವಾಳ ೩೨೧.೮೦ ಲಕ್ಷ ರೂ.ಗಳಾಗಿತ್ತು. ಮಂಡ್ಯ ತಾಲೂಕು ೯೭ ಘಟಕಗಳನ್ನು ಹೊಂದಿದ್ದು, ೮೮೪ ಕಾರ್ಮಿಕರಿಗೆ ಉದ್ಯೋಗ ದೊರಕಿಸಿ, ಜಿಲ್ಲೆಯಲ್ಲಿ ಮೊದಲ ಸ್ಥಾನವನ್ನು ಹೊಂದಿದೆ. ಉಳಿದ ಸ್ಥಾನವನ್ನು ಅನುಕ್ರಮವಾಗಿ ಮದ್ದೂರು (೪೫), ಮಳವಳ್ಳಿ (೩೬), ಪಾಂಡವಪುರ (೨೬), ಕೃಷ್ಣರಾಜಪೇಟೆ (೨೩), ನಾಗಮಂಗಲ (೨೩), ಮತ್ತು ಶ್ರೀರಂಗಪಟ್ಟಣ (೨೩) ತಾಲೂಕುಗಳು ಪಡೆದಿದ್ದವು.

### ೭. ರಬ್ಬರ್ ಮತ್ತು ಪ್ಲಾಸ್ಟಿಕ್ ವಸ್ತುಗಳ ತಯಾರಿಕೆ

ಜಿಲ್ಲೆಯ ರಬ್ಬರ್ ಮತ್ತು ಪ್ಲಾಸ್ಟಿಕ್ ಕೈಗಾರಿಕೆಯ ವ್ಯಾಪ್ತಿಗೆ ಪಾಲಿಥಿನ್ ಚೀಲ, ಪ್ಲಾಸ್ಟಿಕ್ ವಸ್ತು, ನೈಲಾನ್ ಚೀಲ, ಟೈರ್ ರಿಟ್ರೇಡಿಂಗ್, ಪಿ.ವಿ.ಸಿ ಪೈಪ್ಸ್, ಹವಾಯ್ ಚಪ್ಪಲಿ, ಬಾಲ್‌ಪೆನ್, ಬಾಲ್‌ಪೆನ್ ರಿಫಿಲ್, ಪ್ಲಾಸ್ಟಿಕ್

ಗಾರ್‌ಮೆಂಟ್ಸ್, ಪ್ಲಾಸ್ಟಿಕ್ ಸೀಸೆ, ಫೈಬರ್ ಗ್ಲಾಸ್ ಮೊದಲಾದವು ಸೇರುತ್ತವೆ. ೨೦೦೦ದ ಮಾರ್ಚ್ ಅಂತ್ಯಕ್ಕೆ ಜಿಲ್ಲೆಯಲ್ಲಿ ನೋಂದಣಿಗೊಂಡಿದ್ದ ರಬ್ಬರ್ ಮತ್ತು ಪ್ಲಾಸ್ಟಿಕ್ ವಸ್ತುಗಳ ತಯಾರಿಕಾ ಘಟಕಗಳ ಸಂಖ್ಯೆ ೧೦೬ ಇವುಗಳಲ್ಲಿ ತೊಡಗಿಸಿದ್ದ ಬಂಡವಾಳ ೧೭೨.೧೭ ಲಕ್ಷ ರೂ.ಗಳಾಗಿದ್ದು, ಅವು ೫೭೬ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಈ ಘಟಕಗಳ ಸಂಖ್ಯೆಗಳಿಗನುಗುಣವಾಗಿ ಮಂಡ್ಯ ತಾಲೂಕು (೫೪ ಘಟಕಗಳು) ಮೊದಲ ಸ್ಥಾನದಲ್ಲಿದ್ದು, ಉಳಿದ ಸ್ಥಾನವನ್ನು ಅನುಕ್ರಮವಾಗಿ ಮಳವಳ್ಳಿ (೧೬), ಮದ್ದೂರು (೧೬), ನಾಗಮಂಗಲ (೧೦), ಶ್ರೀರಂಗಪಟ್ಟಣ (೦೬), ಮತ್ತು ಕೃಷ್ಣರಾಜಪೇಟೆ (೦೩), ತಾಲೂಕುಗಳು ಪಡೆದುಕೊಂಡಿದ್ದವು. ಪಾಂಡವಪುರ ತಾಲೂಕು ಕೇವಲ ಒಂದು ಘಟಕವನ್ನು ಹೊಂದಿತ್ತು.

**೮. ರಾಸಾಯನಿಕಗಳ ಮತ್ತು ರಾಸಾಯನಿಕ ವಸ್ತುಗಳ ತಯಾರಿಕೆ**

ಜಿಲ್ಲೆಯಲ್ಲಿ ತಯಾರಾಗುವ ರಾಸಾಯನಿಕ ವಸ್ತುಗಳ ವ್ಯಾಪ್ತಿಗೆ ಪೇಂಟ್ಸ್ ಮತ್ತು ವಾರ್ನಿಶ್, ಸಿಮೆಂಟ್, ಡಿಸ್‌ಟೆಂಪರ್, ಅಗರಬತ್ತಿ, ಮುದ್ರಣಇಂಕು, ಸೋಪಿನ ದ್ರವ ಮತ್ತು ಫಿನಾಯಿಲ್, ಲಾಂಡ್ರಿ ಸೋಪು, ಡಿಟರ್‌ಜೆಂಟ್ ಕೇಕ್ ಮತ್ತು ಪೌಡರ್, ಬರವಣಿಗೆಯ ಇಂಕು, ಬೆಂಕಿಕಡ್ಡಿ, ಸುಗಂಧದ ಪೌಡರ್, ಬ್ಲೀಚಿಂಗ್ ಪೌಡರ್ ಮೊದಲಾದವು ಸೇರುತ್ತವೆ. ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ೨೦೦೦ದ ಮಾರ್ಚ್ ಅಂತ್ಯಕ್ಕೆ ನೋಂದಣಿಗೊಂಡಿದ್ದ ರಾಸಾಯನಿಕ ವಸ್ತುಗಳಿಗೆ ಸಂಬಂಧಿಸಿದ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳ ಸಂಖ್ಯೆ ೨೬೭ ಆಗಿದ್ದು, ಇವುಗಳಲ್ಲಿ ತೊಡಗಿಸಲ್ಪಟ್ಟಿದ್ದ ಬಂಡವಾಳದ ಮೊತ್ತ ೩೪೨.೧೯ ಲಕ್ಷ ರೂ.ಗಳಾಗಿತ್ತು. ಈ ಘಟಕಗಳು ೧೩೫೬ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಜಿಲ್ಲೆಯ ರಾಸಾಯನಿಕ ವಸ್ತುಗಳ ಉತ್ಪಾದನೆಯಲ್ಲಿ ಮಂಡ್ಯ ತಾಲೂಕು ೧೦೬ ಘಟಕಗಳನ್ನು ಹೊಂದಿದ್ದು, ೫೧೦ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿ ಮೊದಲ ಸ್ಥಾನದಲ್ಲಿದ್ದರೆ, ಉಳಿದ ಸ್ಥಾನಗಳನ್ನು ಶ್ರೀರಂಗಪಟ್ಟಣ (೭೦), ಮದ್ದೂರು (೨೩), ಮಳವಳ್ಳಿ (೨೧), ನಾಗಮಂಗಲ (೧೭), ಮತ್ತು ಪಾಂಡವಪುರ (೧೬), ತಾಲೂಕುಗಳು ಹೊಂದಿದ್ದವು. ಕೃಷ್ಣರಾಜಪೇಟೆ ತಾಲೂಕು ೧೪ ಘಟಕಗಳನ್ನು ಹೊಂದಿದ್ದು, ೭೨ ಕಾರ್ಮಿಕರಿಗೆ ಉದ್ಯೋಗ ಕಲ್ಪಿಸಿ, ಕೊನೆಯ ಸ್ಥಾನ ಪಡೆದಿತ್ತು.

**೯. ಜನರಲ್ ಇಂಜಿನಿಯರಿಂಗ್**

ಜನರಲ್ ಇಂಜಿನಿಯರಿಂಗ್ ವ್ಯಾಪ್ತಿಗೆ ಕಬ್ಬಿನ ಗಾಣಗಳ ಬಿಡಿಭಾಗ, ಅಕ್ಕಿ ಗಿರಣಿಗಳ ಬಿಡಿ ಭಾಗ, ವ್ಯವಸಾಯೋಪಕರಣ, ರೋಲಿಂಗ್ ಷಟರ್ಸ್, ಗ್ರಿಲ್ಸ್ ಮತ್ತು ಗೇಟು, ಸ್ಟೀಲ್ ಫರ್ನಿಚರ್ಸ್, ಆಯಿಲ್ ಇಂಜಿನ್ಸ್, ಆಟೋಮೊಬೈಲ್ ಬಿಡಿಭಾಗ, ವೆಲ್ಡಿಂಗ್ ಮತ್ತು ಟರ್ನಿಂಗ್, ಬಿಲ್ಡರ್ಸ್ ಹಾರ್ಡ್‌ವೇರ್, ಬೋಲ್ಟ್ ಮತ್ತು ನಟ್ಸ್, ಅಲ್ಯುಮಿನಿಯಂ ಪಾತ್ರೆ, ತಾಮ್ರ ಮತ್ತು ಹಿತ್ತಾಳೆ ಪಾತ್ರೆಗಳೇ ಮೊದಲಾದ ತಯಾರಿಕಾ ಘಟಕಗಳು ಸೇರುತ್ತವೆ. ೨೦೦೦ದ ಮಾರ್ಚ್ ಅಂತ್ಯಕ್ಕೆ ಜಿಲ್ಲೆಯ ಕೈಗಾರಿಕಾ ಕೇಂದ್ರದಲ್ಲಿ ನೋಂದಣಿಗೊಂಡಿದ್ದ ಜನರಲ್ ಇಂಜಿನಿಯರಿಂಗ್ ಘಟಕಗಳ ಸಂಖ್ಯೆ ೨೩೩ ಆಗಿತ್ತು. ಇವುಗಳಲ್ಲಿ ತೊಡಗಿಸಿದ್ದ ಬಂಡವಾಳದ ಮೊತ್ತ ೪೯೦.೩೧ ಲಕ್ಷ ರೂ.ಗಳಾಗಿದ್ದು, ಇವು ಒಟ್ಟು ೧,೦೭೨ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಈ ಘಟಕಗಳು ಜಿಲ್ಲೆಯ ಮಂಡ್ಯ ತಾಲೂಕಿನಲ್ಲಿ ಅಧಿಕವಾಗಿದ್ದು (೮೧ ಘಟಕಗಳು) ಅದಕ್ಕೆ ಮೊದಲನೆ ಸ್ಥಾನ ದೊರಕಿಸಿಕೊಟ್ಟಿವೆ. ಉಳಿದ ಸ್ಥಾನಗಳನ್ನು ಮದ್ದೂರು (೩೦), ನಾಗಮಂಗಲ (೨೯), ಕೃಷ್ಣರಾಜಪೇಟೆ (೨೬), ಪಾಂಡವಪುರ (೨೪), ಮಳವಳ್ಳಿ (೨೩) ಹಾಗೂ ಶ್ರೀರಂಗಪಟ್ಟಣ (೨೦) ತಾಲೂಕುಗಳು ಪಡೆದಿದ್ದವು.

### ೧೦. ರಿಪೇರಿ ಮತ್ತು ಸೇವಾಕಾರ್ಯಗಳು

ರಿಪೇರಿ ಮತ್ತು ಸೇವಾ ಕಾರ್ಯಗಳ ವ್ಯಾಪ್ತಿಗೆ ಆಟೋ ರಿಪೇರಿ ಮತ್ತು ಸೇವೆ, ಫೋಟೋ ಸ್ಟುಡಿಯೋ, ಗಡಿಯಾರಗಳ ರಿಪೇರಿ, ಲಾಂಡ್ರಿ ಮತ್ತು ಡ್ರೈಕ್ಲೀನಿಂಗ್, ಸೈಕಲ್‌ಷಾಪ್, ಎಕ್ಸ್‌ರೇ ಕ್ಲಿನಿಕ್, ಎಸ್.ಟಿ.ಡಿ ಮತ್ತು ಐ.ಎಸ್.ಡಿ. ಬೂತ್ಸ್, ರೇಡಿಯೋ ಮತ್ತು ಟಿ.ವಿ. ರಿಪೇರಿ, ಜಾಬ್ ಟೈಪಿಂಗ್. ಕಂಪ್ಯೂಟರ್ ಗ್ರಾಫಿಕ್ಸ್, ಡೇಟಾ ಪ್ರೊಸೆಸಿಂಗ್, ಆಟೋ ಝೆರಾಕ್ಸ್, ಬ್ಯಾಟರಿ ಚಾರ್ಜಿಂಗ್, ಟೇಪ್ ರೆಕಾರ್ಡರುಗಳ ರಿಪೇರಿ, ಮೊದಲಾದವುಗಳು ಸೇರುತ್ತವೆ. ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ೨೦೦೦ದ ಮಾರ್ಚ್ ಅಂತ್ಯಕ್ಕೆ ನೋಂದಣಿಗೊಂಡಿದ್ದ ಸಣ್ಣ ಮತ್ತು ಅತೀ ಸಣ್ಣ ರಿಪೇರಿ ಮತ್ತು ಸೇವಾ ಘಟಕಗಳ ಸಂಖ್ಯೆ ೪೭೯ ಆಗಿದ್ದು ಅವುಗಳಲ್ಲಿ ತೊಡಗಿಸಲ್ಪಟ್ಟಿದ್ದ ಬಂಡವಾಳದ ಮೊತ್ತ ೫೦೧.೮೪ ಲಕ್ಷ ರೂ.ಗಳಾಗಿದ್ದು, ಇವು ೨೯೯ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಜಿಲ್ಲೆಯ ಮಂಡ್ಯ (೧೯೩), ಕೃಷ್ಣರಾಜಪೇಟೆ (೬೯), ಮಳವಳ್ಳಿ (೬೬), ಮದ್ದೂರು (೫೨), ನಾಗಮಂಗಲ (೪೬), ಶ್ರೀರಂಗಪಟ್ಟಣ (೪೦) ಹಾಗೂ ಪಾಂಡವಪುರ (೧೩) ತಾಲೂಕುಗಳು ಕಂಸದಲ್ಲಿ ನೀಡಿರುವಷ್ಟು ಸಂಖ್ಯೆಯ ಘಟಕಗಳನ್ನು ಹೊಂದಿದ್ದವು.

### ೧೧. ಇತರ ಉತ್ಪಾದನಾ ಕಾರ್ಯಗಳು

ಇತರ ಉತ್ಪಾದನಾ ಕಾರ್ಯಗಳ ವ್ಯಾಪ್ತಿಗೆ ಕೈಮಗ್ಗ, ವಿದ್ಯುತ್ ಚಾಲಿತ ಮಗ್ಗ, ಹಿತ್ತಾಳೆ ಮತ್ತು ಪಂಚಲೋಹದ ಸರಕು ಮತ್ತು ರೇಷ್ಮೆ ನೂಲು ತಯಾರಿಕೆ, ಬಿದರಿನ ಸ್ಟ್ಯಾಂಡ್ ತಯಾರಿಸುಕೆ, ಕಾಫಿ ಬೀಜ ಹುರಿದು ಪುಡಿ ಮಾಡುವುದು, ಬಟ್ಟೆಗಳ ಪ್ರಿಟಿಂಗ್ ಮತ್ತು ಬಣ್ಣ ಹಚ್ಚುವುದು, ಸ್ಕ್ರೀನ್ ಪ್ರಿಂಟಿಂಗ್, ಉಣ್ಣೆ ಹೆಣೆಯುವುದು, ಕೊಂಬಿನ ಅಲಂಕಾರಿಕ ವಸ್ತುಗಳು, ನಾರಿನ ಉತ್ಪನ್ನಗಳು, ಆಧುನಿಕ ಮಣ್ಣಿನ ಪಾತ್ರೆಗಳು ಮತ್ತು ಹಿತ್ತಾಳೆಯ ವಿಗ್ರಹಗಳ ತಯಾರಿಕೆ ಮೊದಲಾದವು ಸೇರುತ್ತವೆ. ಜಿಲ್ಲೆಯ ಕೈಗಾರಿಕಾ ಕೇಂದ್ರದಲ್ಲಿ ೨೦೦೦ದ ಮಾರ್ಚ್ ಅಂತ್ಯಕ್ಕೆ ನೋಂದಣಿಗೊಂಡಿದ್ದ ಸಣ್ಣ ಮತ್ತು ಅತೀ ಸಣ್ಣ ಇತರ ಉತ್ಪಾದನಾ ಘಟಕಗಳ ಸಂಖ್ಯೆ ೧,೪೫೩ ಆಗಿತ್ತು ಇವುಗಳಲ್ಲಿ ತೊಡಗಿಸಿದ್ದ ಬಂಡವಾಳದ ಮೊತ್ತ ೨೦೮೦.೩೭ ಲಕ್ಷ ರೂ.ಗಳಾಗಿತ್ತು. ಇವು ಒಟ್ಟು ೬,೩೫೦ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸಿದ್ದು, ಮಂಡ್ಯ ತಾಲೂಕು ೮೨೩ ಘಟಕಗಳನ್ನು ಹೊಂದಿದ್ದು, ೩,೭೦೯ ಕಾರ್ಮಿಕರಿಗೆ ಉದ್ಯೋಗ ಒದಗಿಸುವುದರ ಮೂಲಕ ಮೊದಲನೆಯ ಸ್ಥಾನ ಹೊಂದಿತ್ತು. ಉಳಿದ ಸ್ಥಾನಗಳನ್ನು ಅನುಕ್ರಮವಾಗಿ ಮದ್ದೂರು (೩೦೭), ಮಳವಳ್ಳಿ (೧೯೬), ನಾಗಮಂಗಲ (೧೮೧), ಕೃಷ್ಣರಾಜಪೇಟೆ (೧೫೭) ಮತ್ತು ಶ್ರೀರಂಗಪಟ್ಟಣ (೧೩೭) ತಾಲೂಕುಗಳು ಪಡೆದುಕೊಂಡಿದ್ದವು. ಪಾಂಡವಪುರ ತಾಲೂಕು ೧೩೧ ಘಟಕಗಳನ್ನು ಹೊಂದಿದ್ದು, ಕೊನೆಯ ಸ್ಥಾನದಲ್ಲಿತ್ತು.

### ಬೆಲ್ಲ ತಯಾರಿಕೆ

ಮಂಡ್ಯ ಜಿಲ್ಲೆಯು ೧೮ನೆಯ ಶತಮಾನದ ಕೊನೆಯ ಭಾಗದಿಂದಲೂ ಬೆಲ್ಲ ತಯಾರಿಕೆಗೆ ಪ್ರಸಿದ್ಧಿಯಾಗಿತ್ತು. ಆಗಿನ ಕಾಲದಲ್ಲಿ ಕಬ್ಬಿನಿಂದ ಬೆಲ್ಲ ತಯಾರಿಸುವ ವಿಧಾನ ಅವೈಜ್ಞಾನಿಕವಾಗಿತ್ತು. ಇದರಿಂದ ಕೇವಲ ಶೇ.೫೦ ರಿಂದ ೬೦ ರಷ್ಟು ಕಬ್ಬಿನ ರಸವನ್ನು ಮಾತ್ರ ಹಿಂಡಿ ತೆಗೆಯಲು ಸಾಧ್ಯವಾಗುತ್ತಿತ್ತು. ಉಳಿದ ರಸ ಕಬ್ಬಿನ ಸಿಪ್ಪೆಯಲ್ಲೇ ಉಳಿದುಹೋಗುತ್ತಿತ್ತು. ಕಬ್ಬಿನಿಂದ ಪಡೆದ ರಸವನ್ನು ಮಣ್ಣಿನ ದೊಡ್ಡ ಮಡಕೆಗಳಲ್ಲಿ ಶೇಖರಿಸಿಕೊಂಡು ಕಬ್ಬಿಣದ ಅಥವಾ ತಾಮ್ರದ ಪಾನ್‌ಗಳಲ್ಲಿ ಹಾಕಿ, ಸುಣ್ಣ ಸೇರಿಸಿ, ಕಾಯಿಸಿ, ಮರದಿಂದ ತಯಾರಿಸಿದ ಅಚ್ಚುಗಳಿಗೆ ಸುರಿಯುತ್ತಿದ್ದರು. ಅದು ತಣ್ಣಗಾದ ಮೇಲೆ ಬೆಲ್ಲದ ಅಚ್ಚುಗಳನ್ನು ಅಥವಾ ಬೆಲ್ಲದ ಉಂಡೆಗಳನ್ನು

ತಯಾರಿಸುತ್ತಿದ್ದರು. ಕಾಲಾನಂತರ ಇದರಲ್ಲಿ ಸುಧಾರಣೆಯಾಗಿ, ಮರದ ಗಾಣಕ್ಕೆ ಬದಲಾಗಿ ಕಬ್ಬಿಣದ ಗಾಣವನ್ನು ಉಪಯೋಗಿಸಿ ಕಬ್ಬಿನ ರಸವನ್ನು ಪಡೆಯಲಾರಂಭಿಸಿದರು. ಇತ್ತೀಚಿಗೆ ವಿದ್ಯುತ್ ಸಹಾಯದಿಂದ ತಿರುಗುವ ಕ್ರಷರ್‌ಗಳನ್ನು ಉಪಯೋಗಿಸಿ ಕಬ್ಬಿನ ರಸವನ್ನು ಪಡೆದುಕೊಳ್ಳಲಾಗುತ್ತಿದೆ. ಜಿಲ್ಲೆಯಲ್ಲಿ ೨೦೦೦ದ ಮಾರ್ಚ್ ಅಂತ್ಯಕ್ಕೆ ೧೭೨೮ ಕಬ್ಬಿನ ಗಾಣಗಳಿದ್ದವು. ಇವುಗಳ ಪೈಕಿ ಮಂಡ್ಯ ತಾಲೂಕಿನಲ್ಲಿ ೧೨೧೭ ಗಾಣಗಳಿದ್ದು, ಅದು ಮೊದಲನೆಯ ಸ್ಥಾನದಲ್ಲಿದೆ. ಉಳಿದ ಸ್ಥಾನಗಳನ್ನು ಮದ್ದೂರು (೩೦೨), ಶ್ರೀರಂಗಪಟ್ಟಣ (೮೧), ಪಾಂಡವಪುರ (೬೪), ಮಳವಳ್ಳಿ (೪೦), ಕೃಷ್ಣರಾಜಪೇಟೆ (೧೬), ಮತ್ತು ನಾಗಮಂಗಲ (೦೮) ತಾಲೂಕುಗಳು ಪಡೆದುಕೊಂಡಿದ್ದವು. ಇದೇ ಕಾಲಾವಧಿಯಲ್ಲಿ ಜಿಲ್ಲೆಯಲ್ಲಿರುವ ಅರು ಖಂಡಸಾರಿ ಸಕ್ಕರೆ ಕಾರ್ಖಾನೆಗಳು ಕ್ರಮವಾಗಿ ಇವು ಮಂಡ್ಯ (೦೨), ಶ್ರೀರಂಗಪಟ್ಟಣ (೦೨) ಮತ್ತು ಕೃಷ್ಣರಾಜಪೇಟೆ (೦೨) ತಾಲೂಕಿಗಳಲ್ಲಿದ್ದು ಖಂಡಸಾರಿ ಸಕ್ಕರೆಯನ್ನು ಉತ್ಪಾದಿಸುತ್ತಿದ್ದವು.

**ಅಕ್ಕಿಗಿರಣಿಗಳು**

ಮಂಡ್ಯ ಜಿಲ್ಲೆಯಲ್ಲಿ ೨೦೦೦ದ ಮಾರ್ಚ್ ಅಂತ್ಯಕ್ಕೆ ೬೬೪ ಹಲ್ಲರ್, ೨೭೪ ಷಲ್ಲರ್ ಮತ್ತು ೨೩೫ ಆಧುನಿಕ ಅಕ್ಕಿಗಿರಣಿಗಳಿದ್ದವು. ಇವುಗಳ ತಾಲೂಕುವಾರು ವಿವರವನ್ನು ಕೋಷ್ಟಕ ೫.೧೨ ರಲ್ಲಿ ಒದಗಿಸಲಾಗಿದೆ.

**ಕೋಷ್ಟಕ ೫.೧೨**

| ತಾಲೂಕು | ಅಕ್ಕಿಗಿರಣಿಗಳ ಸಂಖ್ಯೆ | | |
|---|---|---|---|
| | ಹಲ್ಲರ್ | ಷಲ್ಲರ್ | ಆಧುನಿಕ ಗಿರಣಿಗಳು |
| ೧. ಮಂಡ್ಯ | ೧೫೦ | ೯೪ | ೯೪ |
| ೨. ಮದ್ದೂರು | ೭೦ | ೪೮ | ೪೮ |
| ೩. ಮಳವಳ್ಳಿ | ೭೫ | ೩೫ | ೨೭ |
| ೪. ಪಾಂಡವಪುರ | ೮೫ | ೨೮ | ೦೨ |
| ೫. ಶ್ರೀರಂಗಪಟ್ಟಣ | ೩೭ | ೨೬ | ೨೬ |
| ೬. ಕೃಷ್ಣರಾಜಪೇಟೆ | ೧೫೬ | ೩೬ | ೩೨ |
| ೭. ನಾಗಮಂಗಲ | ೯೧ | ೦೭ | ೦೬ |
| ಒಟ್ಟು | ೬೬೪ | ೨೭೪ | ೨೩೫ |

ಆಧಾರ : ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಮಂಡ್ಯ

## ಖಾದಿ ಮತ್ತು ಗ್ರಾಮೋದ್ಯೋಗ

ಗ್ರಾಮೀಣ ಪ್ರದೇಶದ ಕಸಬುದಾರರು ತಮ್ಮ ಅನುವಂಶಿಕ ಉದ್ದಿಮೆಯನ್ನು ತೊರೆದು ಪಟ್ಟಣಗಳಿಗೆ ವಲಸೆ ಹೋಗುವುದನ್ನು ತಪ್ಪಿಸುವ ಸಲುವಾಗಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಗ್ರಾಮೀಣ ಕುಶಲಕರ್ಮಿಗಳಿಗೆ, ಕಸುಬುದಾರರಿಗೆ, ವಿದ್ಯಾವಂತ ನಿರುದ್ಯೋಗಿಗಳಿಗೆ ಮತ್ತು ಮಹಿಳೆಯರಿಗೆ ಅವರಿರುವ ಸ್ಥಳಗಳಲ್ಲೇ ಉದ್ಯೋಗ ದೊರಕುವಂತೆ ಮಾಡಿ, ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಿರುವುದರ ಜೊತೆಗೆ ಸ್ವಾವಲಂಬನಾ ಮನೋಭಾವವನ್ನು

ಮೂಡಿಸಿರುವುದು ಖಾದಿ ಗ್ರಾಮೋದ್ಯೋಗ ಸಂಸ್ಥೆಯ ಗರಿಮೆಯಾಗಿದೆ. ಈ ಮೂಲ ಉದ್ದೇಶವನ್ನಿಟ್ಟುಕೊಂಡೇ ಮಹಾತ್ಮ ಗಾಂಧೀಜಿಯವರು ಖಾದಿ ಮತ್ತು ಗ್ರಾಮೋದ್ಯೋಗಗಳ ಪುನರುತ್ಥಾನಕ್ಕೆ ರಾಷ್ಟ್ರೀಯ ಆಂದೋಲವನ್ನಾರಂಭಿಸಿದರು. ಸ್ವಾತಂತ್ರ್ಯ ಚಳವಳಿ, ಸ್ವದೇಶಿ ಚಳವಳಿ ಮೊದಲಾದವು ಖಾದಿ ನೂಲು ಮತ್ತು ನೇಯ್ಗೆಗೆ ಪ್ರಾಮುಖ್ಯತೆ ನೀಡಿದ್ದವು. ಗಾಂಧೀಜಿಯವರ ರಾಟೆಯಿಂದ ಖಾದಿ ನೂಲುವ ಧ್ಯೇಯ ಕೇವಲ ಜನರ ಆರ್ಥಿಕಾಭಿವೃದ್ಧಿಯಾಗಿರದೆ, ಅದಕ್ಕಿಂತಲೂ ಶ್ರೇಷ್ಠ ಆದರ್ಶವಾದ ಸರ್ವೋದಯ ಸಮಾಜ ನಿರ್ಮಾಣದ ಘನೋದ್ದೇಶವನ್ನು ಹೊಂದಿತ್ತು. ಇಂಥ ಸಮಾಜ ರಚನೆಯಾಗಬೇಕಾದರೆ ಸಮಾಜದಲ್ಲಿ ಸತ್ಯ, ಅಹಿಂಸೆ, ಆತ್ಮೀಯತೆ, ಮೊದಲಾದ ಸಾತ್ವಿಕ ಗುಣಗಳು ಜನರಲ್ಲಿ ಮೂಡಬೇಕಾದ ಅವಶ್ಯಕತೆ ಇದೆ. ಸ್ವಾತಂತ್ರ್ಯ ಪೂರ್ವದಲ್ಲಿ ಖಾದಿ ಚಳವಳಿ ಸ್ವಾತಂತ್ರ್ಯ ಹೋರಾಟದ ಒಂದು ಭಾಗವಾಗಿತ್ತು. ಖಾದಿ ಬಟ್ಟೆ ಸ್ವಾತಂತ್ರ್ಯ ಹೋರಾಟಗಾರರ ಸಮವಸ್ತ್ರವಾಗಿತ್ತು. ಸರ್ಕಾರದ ಪರವಾಗಿ ಖಾದಿ ಚಳವಳಿಯನ್ನು ಮೊಟ್ಟ ಮೊದಲು ಪ್ರಾರಂಭಿಸಿದ ಕೀರ್ತಿ ಅಂದಿನ ಮೈಸೂರು ಮಹಾರಾಜರ ಸರ್ಕಾರಕ್ಕೆ ಸಲ್ಲುತ್ತದೆ. ಸರ್ ಮಿರ್ಜಾ ಇಸ್ಮಾಯಿಲ್‌ರವರು ಗಾಂಧೀಜಿಯವರ ಭೇಟಿಯ ಸವಿನೆನಪಿಗಾಗಿ ೧೯೨೭ರಲ್ಲಿ ಮೈಸೂರು ಜಿಲ್ಲೆಯ ಬದನವಾಳು ಮತ್ತು ಚಿತ್ರದುರ್ಗ ಜಿಲ್ಲೆಯ ಐಮಂಗಲಗಳಲ್ಲಿ ಸರ್ಕಾರದ ಪರವಾಗಿ ಖಾದಿ ಚಳವಳಿ ಪ್ರಾರಂಭಿಸಿದರು. ಸ್ವಾತಂತ್ರ್ಯಾನಂತರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಕಾರ್ಯಕ್ಕೆ ನೆರವನ್ನೊದಗಿಸುತ್ತಿವೆ. ನೂಲುವ ಕಾರ್ಯ ಎಲೆರಾಟೆಯಿಂದ ಪ್ರಾರಂಭಗೊಂಡು ಕಾಲಾನಂತರ ಕಿಸಾನ್ ಚರಖಾಕ್ಕೆ ಪರಿವರ್ತಿಸಲ್ಪಟ್ಟಿತು. ಇದೇ ಕಾಲಾವಧಿಯಲ್ಲಿ ಅಖಿಲ ಭಾರತ ನೂಲುವವರ ಸಂಘ, ಚರಖಾ ಸಂಘ, ಸರ್ವಸೇವಾ ಸಂಘ, ಮೊದಲಾದವು ಸಂಘಟಿತಗೊಂಡವು. ಆನಂತರ ಅಖಿಲ ಭಾರತ ಖಾದಿ ಗ್ರಾಮೋದ್ಯೋಗ ಮಂಡಳಿಯೂ ರಚನೆಯಾಯಿತು. ತಾಂತ್ರಿಕ ಕ್ಷೇತ್ರದಲ್ಲಿಯೂ ಅನೇಕ ಸಂಶೋಧನೆಗಳು ನಡೆದು ಆರುಕದಿರುಗಳ ಲೋಹದ ಚರಕದ ಆವಿಷ್ಕಾರವಾಯಿತು. ಅದೇ ರೀತಿ, ಸುಧಾರಿತ ಸೇವಾ ಗ್ರಾಮ ಮಾದರಿಯ ಮಗ್ಗಗಳನ್ನು ಉತ್ಪಾದಿಸಲಾಯಿತು. ಉತ್ಪಾದನೆಯ ಪ್ರಮಾಣ ಹೆಚ್ಚಿದಂತೆ ಮಾರಾಟದಲ್ಲಿಯೂ ವಿಸ್ತರಣೆಯಾಯಿತು. ಬಟ್ಟೆಯ ಉತ್ಪಾದನೆಯಲ್ಲೂ ತೀವ್ರ ಬದಲಾವಣೆಯಾಯಿತು. ಖಾದಿ ವ್ಯಾಖ್ಯೆಯಲ್ಲಿ ಅರಳೆ ಖಾದಿಯಲ್ಲದೇ ರೇಷ್ಮೆ ಹಾಗೂ ಉಣ್ಣೆ ವಸ್ತ್ರಗಳ ಉತ್ಪಾದನೆಯೂ ಸೇರಿವೆ.

ಖಾದಿ ಮತ್ತು ಗ್ರಾಮೋದ್ಯೋಗಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವ ಉದ್ದೇಶದಿಂದ ೧೯೫೬ರ ಖಾದಿ ಮತ್ತು ಗ್ರಾಮೋದ್ಯೋಗ ಕಾಯ್ದೆಯ ಮೇರೆಗೆ ೧೯೫೭ರ ಎಪ್ರಿಲ್ ತಿಂಗಳಲ್ಲಿ ಅಖಿಲ ಭಾರತ ಖಾದಿ ಮಂಡಳಿಯು ಹೆಚ್ಚು ಅಧಿಕಾರ ಪಡೆದ ಅಖಿಲ ಭಾರತ ಖಾದಿ ಆಯೋಗವಾಗಿ ಪರಿವರ್ತಿಸಲ್ಪಟ್ಟಿತು. ಇದರ ಅಧಿಕೃತ ಕಾರ್ಯಗಳು ಕಚ್ಚಾಮಾಲು ಸಂಗ್ರಹಣೆ ಮತ್ತು ಪೂರೈಕೆ, ಸಿದ್ಧ ವಸ್ತುಗಳ ವಿಲೇವಾರಿ, ಕಸಬುದಾರರ ತರಬೇತಿ ಕಾರ್ಯದ ಮೇಲ್ವಿಚಾರಣೆ, ಮತ್ತು ತಾಂತ್ರಿಕ ತಜ್ಞರಿಂದ ನೆರವನ್ನೊದಗಿಸುವುದು, ಸುಧಾರಿಸಿದ ಸಾಧನಗಳ ಪೂರೈಕೆ, ತಾಂತ್ರಿಕ ಸಂಶೋಧನೆ ಮತ್ತು ಗ್ರಾಮೋದ್ಯೋಗ ಕಾರ್ಯಗಳಿಗೆ ಸಹಾಯ ಧನ ಮತ್ತು ಸಾಲಸೌಲಭ್ಯವನ್ನು ಒದಗಿಸುವುದು ಹಾಗೂ ದೊಡ್ಡ ಪಟ್ಟಣಗಳಲ್ಲಿ ಖಾದಿ ಭವನಗಳನ್ನು ಸ್ಥಾಪಿಸಿ ಗ್ರಾಮೋದ್ಯೋಗಗಳ ಉತ್ಪಾದನೆಯನ್ನು ದೊಡ್ಡ ಪ್ರಮಾಣದಲ್ಲಿ ಮಾರಾಟ ಮಾಡುವ ಸೌಕರ್ಯವನ್ನು ಒದಗಿಸುವುದು ಮುಂತಾದವುಗಳಾಗಿವೆ. ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ತಮ್ಮ ತಮ್ಮ ರಾಜ್ಯಗಳಲ್ಲಿ ಖಾದಿ ಮಂಡಳಿಗಳನ್ನು ನೇಮಿಸಲು ಸೂಚನೆ ನೀಡಿದುದರಿಂದ ೧೯೫೭ ರಲ್ಲಿ ಮೈಸೂರು ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಸ್ತಿತ್ವಕ್ಕೆ ಬಂದಿತು. ಅದಕ್ಕೂ ಪೂರ್ವದಲ್ಲಿ ಸರ್ಕಾರದ ವತಿಯಿಂದ ನಡೆಯುತ್ತಿದ್ದ ಬದನವಾಳು ಖಾದಿ ಕೇಂದ್ರ, ಐಮಂಗಲ ಖಾದಿ ಕೇಂದ್ರ ಮತ್ತು ಬೆಂಗಳೂರಿನ ಖಾದಿ ಗ್ರಾಮೋದ್ಯೋಗ ಭಂಡಾರಗಳನ್ನು ಮಂಡಳಿಯ ಸ್ವಾಧೀನಕ್ಕೆ ಒಪ್ಪಿಸಲಾಯಿತು. ರಾಜ್ಯದ ಇತರ ಭಾಗಗಳಲ್ಲಿದ್ದ ಖಾದಿ ಕೇಂದ್ರಗಳೂ ಸಹ ಮಂಡಳಿಯ ಅಧೀನಕ್ಕೆ ಸೇರ್ಪಡೆಗೊಂಡವು. ಅಖಿಲ

ಭಾರತ ಖಾದಿ ಆಯೋಗ ಮತ್ತು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧೀನದಲ್ಲಿ ಕಾರ್ಯನಿರ್ವಹಿಸುವ ಖಾದಿ ಉದ್ದಿಮೆಯ ವ್ಯಾಪ್ತಿಗೆ ಅರಳೆ ಖಾದಿ, ಉಣ್ಣೆಖಾದಿ, ರೇಷ್ಮೆ ಖಾದಿ, ಮಸ್ಲಿನ್ ಖಾದಿ ಮತ್ತು ಪಾಲಿವಸ್ತ್ರಗಳೂ ಸೇರುತ್ತವೆ. ಗ್ರಾಮೋದ್ಯೋಗ ವ್ಯಾಪ್ತಿಗೆ ಖನಿಜ ಆಧಾರಿತ ಉದ್ದಿಮೆಗಳು, ಅರಣ್ಯ ಆಧಾರಿತ ಕೈಗಾರಿಕೆ, ಕೃಷಿ ಆಧಾರಿತ ಹಾಗೂ ಆಹಾರ ಉದ್ದಿಮೆಗಳು, ಪಾಲಿಮರ್ ಮತ್ತು ರಾಸಾಯನಿಕ ಆಧಾರಿತ ಉದ್ದಿಮೆಗಳು, ಇಂಜಿನಿಯರಿಂಗ್ ಹಾಗೂ ಅಸಂಪ್ರದಾಯಕ ಶಕ್ತಿ ಆಧಾರಿತ ಉದ್ದಿಮೆಗಳು, ವಸ್ತ್ರೋದ್ಯಮ (ಖಾದಿಯನ್ನು ಹೊರತುಪಡಿಸಿ) ಮತ್ತು ಸೇವಾ ಉದ್ದಿಮೆಗಳು ಮುಂತಾಗಿ ಪ್ರಧಾನವಾಗಿ ವಿಂಗಡಿಸಲ್ಪಟ್ಟ ೧೧೬ ಕೈಗಾರಿಕಾ ಚಟುವಟಿಕೆಗಳು ಇದರ ಕಕ್ಷೆಯಲ್ಲಿ ಸೇರಿವೆ.

ಮಂಡ್ಯ ಜಿಲ್ಲೆಯಲ್ಲಿ ೧೯೯೯–೨೦೦೦ನೇ ಸಾಲಿನಲ್ಲಿದ್ದ ಖಾದಿ ಮತ್ತು ಗ್ರಾಮೋದ್ಯೋಗ ಘಟಕಗಳ ಒಟ್ಟು ಸಂಖ್ಯೆ ೯೭೭ ಆಗಿತ್ತು. ಇವುಗಳಲ್ಲಿ ಕಾರ್ಯನಿರತ ಘಟಕಗಳ ಸಂಖ್ಯೆ ೩೨೫ ಆಗಿತ್ತು. ಜಿಲ್ಲೆಯಲ್ಲಿ ೨೦೦೦ದ ಮಾರ್ಚಿ ಅಂತ್ಯಕ್ಕೆ ಕಾರ್ಯನಿರತ ಉದ್ದಿಮೆಗಳು ಉತ್ಪಾದಿಸಿದ ಸರಕಿನ ಮೌಲ್ಯ (ರೂ.೨೧೦ಲಕ್ಷ) ಮಾರಾಟವಾದ ಸರಕಿನ ಮೌಲ್ಯ (೨೭೭.೯೦) ಲಕ್ಷ ರೂ. ಆಗಿದ್ದು ಅವುಗಳಲ್ಲಿ ೧೭೩೮ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದರು. ಮಾರ್ಚ್ ೨೦೦೨ದ ಅಂತ್ಯಕ್ಕೆ ಕಾರ್‍ಯನಿರತ ಘಟಕಗಳ ಸಂಖ್ಯೆ, ಉತ್ಪಾದಿಸಿದ ಸರಕಿನ ಮೌಲ್ಯ, ಮಾರಾಟವಾದ ಸರಕಿನ ಮೌಲ್ಯ ಹಾಗೂ ಅವುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರ ಸಂಖ್ಯೆಯನ್ನು ಮುಂದಿನ ಕೋಷ್ಟಕ ೫.೧೩ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧೩**

| ಉದ್ದಿಮೆಗಳು | ಘಟಕಗಳ ಸಂಖ್ಯೆ | ಉತ್ಪಾದಿತ ಸರಕಿನ ಮೌಲ್ಯ (ಲಕ್ಷ ರೂ.ಗಳಲ್ಲಿ) | ಮಾರಾಟವಾದ ಸರಕಿನ ಮೌಲ್ಯ (ಲಕ್ಷ ರೂ.ಗಳಲ್ಲಿ) | ಉದ್ಯೋಗಿಗಳ ಸಂಖ್ಯೆ | | |
|---|---|---|---|---|---|---|
| | | | | ಅರೆ ಕಾಲಿಕ | ಪೂರ್ಣಕಾಲಿಕ | ಒಟ್ಟು |
| ೧. ಉಣ್ಣೆಖಾದಿ | ೧ | ೩.೫೦ | ೨.೩೦ | ೬ | ೬ | ೧೨ |
| ೨. ರೇಷ್ಮೆಖಾದಿ | ೨ | ೩೩.೦೦ | ೧೬.೦೦ | ೨೫ | ೩೫ | ೬೦ |
| ೩. ಸುಣ್ಣ | ೩ | ೪.೦೦ | ೫.೦೦ | ೫ | ೩ | ೮ |
| ೪. ಕುಂಬಾರಿಕೆ | ೪೯ | ೧೫.೦೦ | ೧೪.೦೦ | ೧೨೫ | ೧೧೦ | ೨೩೫ |
| ೫. ವಸ್ತ್ರೋದ್ಯಮ | ೮ | ೧.೭೫ | ೨.೧೫ | ೮ | ೮ | ೧೬ |
| ೬. ಬೆಂಕಿಕಡ್ಡಿ ಮತ್ತು ಅಗರಬತ್ತಿ | ೮೦ | ೨೦.೦೦ | ೨೪.೦೦ | ೨೦೦ | ೧೫೦ | ೩೫೦ |
| ೭. ಅಖಾದ್ಯ ಎಣ್ಣೆ | ೧ | ೨.೦೦ | ೨.೫೦ | ೧ | ೧ | ೨ |
| ೮. ಗ್ರಾಮೀಣ ತಾಂತ್ರಿಕತೆ | ೬೫ | ೧೧.೫೦ | ೧೪.೦೦ | ೧೦೦ | ೧೫೦ | ೨೫೦ |
| ೯. ಬೆತ್ತ ಮತ್ತು ಬಿದಿರು | ೩೭ | ೩.೭೫ | ೪.೭೫ | ೨೫ | ೪೦ | ೬೫ |
| ೧೦. ದ್ವಿದಳ ಧಾನ್ಯ ಪರಿಷ್ಕರಣೆ | ೩೫ | ೨೫.೦೦ | ೩೦.೦೦ | ೧೫೦ | ೩೫ | ೧೮೫ |
| ೧೧. ಚರ್ಮೋದ್ಯೋಗ | ೧೦ | ೩.೫೦ | ೪.೦೦ | ೧೫ | ೫೦ | ೬೫ |
| ೧೨. ಕೈಕಾಗದ | ೩ | ೩.೦೦ | ೪.೫೦ | ೨೦ | ೧೦ | ೩೦ |
| ೧೩. ಸೇವಾ ಕ್ಷೇತ್ರ | ೩೩ | – | – | ೮೦ | ೩೩ | ೧೧೩ |
| ೧೪. ಇತರೆ | ೭೦ | ೪೦.೦೦ | ೬೦.೦೦ | ೫೦೦ | ೧೪೦ | ೬೪೦ |
| ಒಟ್ಟು | ೩೯೭ | ೧೬೬.೦೦ | ೧೮೩.೨೦ | ೧೨೬೦ | ೭೭೧ | ೨೦೩೧ |

ಆಧಾರ : ಜಿಲ್ಲಾ ಖಾದಿ ಗ್ರಾಮೋದ್ಯೋಗ ಮಂಡಳಿ, ಮಂಡ್ಯ

ಮಂಡ್ಯ ಜಿಲ್ಲೆಯಲ್ಲಿ ೨೦೦೨ರ ಮಾರ್ಚ್ ಅಂತ್ಯದಲ್ಲಿದ್ದಂತೆ ತಾಲೂಕುವಾರು ಮತ್ತು ಜನಾಂಗವಾರು ಖಾದಿ ಮತ್ತು ಗ್ರಾಮೋದ್ಯೋಗ ಘಟಕಗಳ ವಿವರವನ್ನು ಕೋಷ್ಟಕ ೫.೧೪ ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧೪**

| ತಾಲೂಕು | ಜನಾಂಗವಾರು ಖಾದಿ ಮತ್ತು ಗ್ರಾಮೋದ್ಯೋಗ ಘಟಕಗಳು | | | | |
|---|---|---|---|---|---|
| | ಪ.ಜಾತಿ | ಪ.ಪಂಗಡ | ಅಲ್ಪಸಂಖ್ಯಾತರು | ಇತರರು | ಒಟ್ಟು |
| ೧. ಕೃಷ್ಣರಾಜಪೇಟೆ | ೧೦ | ೫ | ೨೦ | ೯೧ | ೧೨೬ |
| ೨. ನಾಗಮಂಗಲ | ೧೦ | ೫ | ೧೦ | ೮೬ | ೧೧೧ |
| ೩. ಪಾಂಡವಪುರ | ೫ | ೨ | ೫ | ೫೧ | ೬೩ |
| ೪. ಮಂಡ್ಯ | ೫೫ | ೫ | ೪೦ | ೧೫೦ | ೨೫೦ |
| ೫. ಮದ್ದೂರು | ೨೦ | ೫ | ೨೫ | ೧೦೬ | ೧೫೬ |
| ೬. ಮಳವಳ್ಳಿ | ೪೦ | ೧೦ | ೧೦ | ೭೧ | ೧೩೧ |
| ೭. ಶ್ರೀರಂಗಪಟ್ಟಣ | ೨೦ | ೫ | ೧೦ | ೧೧೭ | ೧೫೧ |
| ಒಟ್ಟು | ೧೬೦ | ೩೭ | ೧೨೦ | ೬೭೨ | ೯೮೮ |

ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ೨೦೦೦ದ ಮಾರ್ಚ್ ಅಂತ್ಯಕ್ಕೆ, ಜಿಲ್ಲೆಯ ಖಾದಿ ಮತ್ತು ಗ್ರಾಮೋದ್ಯೋಗಳಿಗೆ ಸಂಬಂಧಿಸಿದ ೭೫ ಸಹಕಾರ ಸಂಘಗಳಿಗೆ ಸುಮಾರು ೭ ಲಕ್ಷ ರೂ.ಗಳು, ನೋಂದಾಯಿತ ೯೫ ಸಂಸ್ಥೆಗಳಿಗೆ ೩೧೦ ಲಕ್ಷ ರೂ.ಗಳು ಮತ್ತು ೧೦೮೯ ವೈಯಕ್ತಿಕ ಫಲಾನುಭವಿಗಳಿಗೆ ೭೨೮ ಲಕ್ಷ ರೂ.ಗಳು ಹೀಗೆ ಒಟ್ಟು ೧೦೪೫ ಲಕ್ಷ ರೂ.ಗಳನ್ನು ಸಾಲವಾಗಿ ಒದಗಿಸಿದೆ. ಜಿಲ್ಲೆಯ ೭೫ ಸಹಕಾರ ಸಂಘಗಳ ಪೈಕಿ ನಿಡಘಟ್ಟದ ಶ್ರೀ ವಿನಾಯಕ ಸಿಲ್ಕ್ ಇಂಡಸ್ಟ್ರೀಸ್ ಅಸೋಸಿಯೇಷನ್, ಸೋಮನಹಳ್ಳಿಯ ವಿಜಯ ಖಾದಿ ಗ್ರಾಮೋದ್ಯೋಗ ಸಂಘ, ಮತ್ತು ಹೆಚ್.ಕೋಡಿಹಳ್ಳಿಯ ವಿಶ್ವೇಶ್ವರಯ್ಯ ಖಾದಿ ಗ್ರಾಮೋದ್ಯೋಗ ಸಂಘಗಳು, ಜಿಲ್ಲೆಯ ಪ್ರಮುಖ ಕಾರ್ಯನಿರತ ಸಂಘಗಳಾಗಿವೆ.

### ಶ್ರೀ ವಿನಾಯಕ ಸಿಲ್ಕ್ ಇಂಡಸ್ಟ್ರೀಸ್ ಅಸೋಸಿಯೇಷನ್, ನಿಡಘಟ್ಟ

ರೇಷ್ಮೆ ಖಾದಿ ಹಾಗೂ ರೇಷ್ಮೆ ನೂಲು ಉತ್ಪಾದಿಸುವ ಉದ್ದೇಶದಿಂದ ಶ್ರೀ ವಿನಾಯಕ ಸಿಲ್ಕ್ ಇಂಡಸ್ಟ್ರೀಸ್ ಅಸೋಸಿಯೇಷನ್ ೧೯೮೨ರಲ್ಲಿ ಮದ್ದೂರು ತಾಲೂಕಿನ ನಿಡಘಟ್ಟದಲ್ಲಿ ಪ್ರಾರಂಭಗೊಂಡಿತು. ಇದರಲ್ಲಿ ತೊಡಗಿಸಲ್ಪಟ್ಟಿರುವ ಒಟ್ಟು ಬಂಡವಾಳ ೨೯.೫೫ ಲಕ್ಷ ರೂ.ಗಳು. ಈ ಸಂಸ್ಥೆಯು ದೇಣಿಗೆಯ ರೂಪದಲ್ಲಿ ೮.೭೯ ಲಕ್ಷ ರೂ.ಗಳನ್ನು ಸಂಗ್ರಹಿಸಿದ್ದು, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ೯.೧೦ ಲಕ್ಷ ರೂ.ಗಳನ್ನೂ ಮತ್ತು ಇತರ ಮೂಲಗಳಿಂದ ೧೧.೬೬ ಲಕ್ಷ ರೂ.ಗಳನ್ನೂ ಸಾಲವಾಗಿ ಪಡೆದಿದೆ. ೧೯೯೯–೨೦೦೦ರ ಸಾಲಿನಲ್ಲಿ ರೂ.೨೪.೫೮ ಲಕ್ಷ ಮೌಲ್ಯದ ರೇಷ್ಮೆ ಖಾದಿ ಮತ್ತು ರೂ.೨೮.೨೧ ಲಕ್ಷ ಮೌಲ್ಯದ ರೇಷ್ಮೆ ನೂಲನ್ನು ಉತ್ಪಾದಿಸಿದ್ದು, ೨೩.೫ ಲಕ್ಷ ರೂ. ಮೌಲ್ಯದ ರೇಷ್ಮೆ ಖಾದಿ ಮತ್ತು ೮.೨೩ ಲಕ್ಷ ರೂ. ಮೌಲ್ಯದ ರೇಷ್ಮೆ ನೂಲನ್ನು ಮಾರಾಟ ಮಾಡಿದೆ.

**ವಿಜಯ ಖಾದಿ ಗ್ರಾಮೋದ್ಯೋಗ ಸಂಘ, ಸೋಮನಹಳ್ಳಿ**

ವಿಜಯ ಖಾದಿ ಗ್ರಾಮೋದ್ಯೋಗ ಸಂಘವು ರೇಷ್ಮೆ ಸೀರೆ, ಮತ್ತು ಪ್ಲೈನ್ ಬಟ್ಟೆಗಳನ್ನು ತಯಾರಿಸುವ ಗುರಿಯೊಂದಿಗೆ ೧೯೮೭ರಲ್ಲಿ ಮದ್ದೂರು ತಾಲೂಕಿನ ಸೋಮನಹಳ್ಳಿಯಲ್ಲಿ ಪ್ರಾರಂಭಗೊಂಡಿತು. ಇದರ ಒಟ್ಟು ಬಂಡವಾಳ ನಾಲ್ಕು ಲಕ್ಷ ರೂ.ಗಳು. ಈ ಸಂಘವು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ೭,೮೭,೫೦೦ ರೂ. ಸಾಲ ಪಡೆದಿದೆ. ೧೯೯೯–೨೦೦೦ದ ಸಾಲಿನಲ್ಲಿ ಈ ಸಂಘವು ಆರು ಲಕ್ಷ ರೂ. ಮೌಲ್ಯದ ಸರಕನ್ನು ಉತ್ಪಾದಿಸಿ ಮೂರು ಲಕ್ಷ ರೂ. ಮೌಲ್ಯದ ಸರಕನ್ನು ಮಾರಾಟ ಮಾಡಿದೆ.

**ಶ್ರೀ ವಿಶ್ವೇಶ್ವರಯ್ಯ ಖಾದಿ ಗ್ರಾಮೋದ್ಯೋಗ ಸಂಘ, ಹೆಚ್.ಕೋಡಿಹಳ್ಳಿ**

ಗ್ರಾಮಾಂತರ ಪ್ರದೇಶದಲ್ಲಿ ಕೈಗಾರಿಕೆಯನ್ನು ಸ್ಥಾಪಿಸಿ ಗ್ರಾಮಾಂತರ ನಿರುದ್ಯೋಗಿ ಯುವ ಜನತೆಗೆ ಉದ್ಯೋಗ ನೀಡುವ ಉದ್ದೇಶದಿಂದ ಶ್ರೀ ವಿಶ್ವೇಶ್ವರಯ್ಯ ಖಾದಿ ಗ್ರಾಮೋದ್ಯೋಗ ಸಂಘವು ಮಂಡ್ಯ ತಾಲೂಕಿನ ಹೆಚ್.ಕೋಡಿಹಳ್ಳಿಯಲ್ಲಿ ೧೯೮೩ರಲ್ಲಿ ಸ್ಥಾಪನೆಗೊಂಡಿತು. ಇದು ಪ್ರಾರಂಭದಲ್ಲಿ ಫೈಲ್ ರ್‍ಯಾಪರ್ಸ್, ಫೈಲ್ ಬೋರ್ಡ್ಸ್ ಮತ್ತು ರ್‍ಯಾಗ್ ಪಲ್ಪ್‌ಗಳನ್ನು ಉತ್ಪಾದಿಸುತ್ತಿತ್ತು. ಈ ಸಂಸ್ಥೆ ತಯಾರಿಸಿದ ರ್‍ಯಾಗ್ ಪಲ್ಪ್ ಅನ್ನು ನ್ಯಾಷನಲ್ ಪೇಪರ್ ಮಿಲ್ಸ್‌ಗೆ ಸರಬರಾಜು ಮಾಡುತ್ತಿತ್ತು. ಪ್ರಸ್ತುತ ಮೈಸೂರು ನ್ಯಾಷನಲ್ ಪೇಪರ್ ಮಿಲ್ಸ್ ಮುಚ್ಚಲ್ಪಟ್ಟಿರುವುದರಿಂದ ಈ ಸಂಘದ ಪಲ್ಪ್ ಉತ್ಪಾದನೆ ಈಗ ಸ್ಥಗಿತಗೊಂಡಿದೆ. ಸಂಘದ ಸದಸ್ಯರಿಂದ ವಂತಿಗೆ ರೂಪದಲ್ಲಿ ಸಂದಾಯವಾದ ೨.೫೦ ಲಕ್ಷ ರೂ.ಗಳನ್ನು ಆರಂಭ ಬಂಡವಾಳವನ್ನಾಗಿ ಉಪಯೋಗಿಸಿಕೊಳ್ಳಲಾಗಿದೆ. ೧೯೯೯–೨೦೦೦ದ ಸಾಲಿನಲ್ಲಿ ಸಂಘವು ೩.೮೦ ಲಕ್ಷ ಮೌಲ್ಯದ ಸರಕನ್ನು ಉತ್ಪಾದಿಸಿ ೫.೮೫ ಲಕ್ಷ ರೂ.ಗಳಿಗೆ ಮಾರಾಟ ಮಾಡಿದೆ. ಇಲ್ಲಿ ಉತ್ಪಾದನೆಯಾಗುವ ಸರಕಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಕಚೇರಿಗಳು ಮತ್ತು ಅರೆ ಸರ್ಕಾರಿ ಕಚೇರಿಗಳಿಂದ ಬೇಡಿಕೆ ಇದೆ.

**ಜೇನು ಸಾಕಣೆ**

ಜೇನು ಸಾಕಣೆಯು ಗ್ರಾಮೀಣ ನಿರುದ್ಯೋಗಿ ಯುವಕರಿಗೆ ಮತ್ತು ಸಣ್ಣ ಹಿಡುವಳಿದಾರ ರೈತರಿಗೆ ಪೂರ್ಣ ಪ್ರಮಾಣದ ಉದ್ಯೋಗವನ್ನು ಒದಗಿಸುವುದರ ಜೊತೆಗೆ ಅವರ ಆದಾಯ ಸುಧಾರಣೆಗೊಳ್ಳುವಂತೆ ಮಾಡುತ್ತದೆ. ಆ ಕಾರಣಕ್ಕಾಗಿ ರಾಜ್ಯದ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯು ಕಲಿಕೆದಾರರಿಗೆ ೧೫ ದಿನಗಳ ತರಬೇತಿ ಕಾರ್ಯಕ್ರಮ ಮತ್ತು ಪ್ರತೀ ತಾಲೂಕಿಗೊಬ್ಬ ಆಸಕ್ತ ವ್ಯಕ್ತಿಗೆ ಮೂರು ತಿಂಗಳ ಫೀಲ್ಡ್ ಮ್ಯಾನ್ ಕೋರ್ಸ್ ಸೌಲಭ್ಯ ಒದಗಿಸುತ್ತಿದೆ. ಅಲ್ಲದೆ, ಜಿಲ್ಲೆಯೊಂದಕ್ಕೆ ಒಬ್ಬರಂತೆ ೨೫ ಜನರಿಗೆ ಪುಣೆಯಲ್ಲಿರುವ ಸಿ.ಬಿ.ಆರ್.ಟಿ.ಐ.ನಲ್ಲಿ ಒಂಬತ್ತು ತಿಂಗಳ ಜೇನು ಸಾಕಣೆ ತಂತ್ರ ಕೋರ್ಸ್ ಪಡೆಯುವ ಸೌಲಭ್ಯವನ್ನೂ ಕಲ್ಪಿಸಲಾಗಿದೆ. ಜೇನು ಸಾಕಣೆದಾರರಿಗೆ ಉತ್ತೇಜನ ಮತ್ತು ಅರಿವು ಮೂಡಿಸುವ ಸಲುವಾಗಿ ಶೈಕ್ಷಣಿಕ ಪ್ರವಾಸ ಸೌಲಭ್ಯವನ್ನು ಏರ್ಪಡಿಸಲಾಗುತ್ತದೆ. ಜೇನು ಪೆಟ್ಟಿಗೆಗಳ ಮೇಲೆ ಶೇ.೫೦ ರಷ್ಟು ರಿಯಾಯಿತಿ ಸೌಲಭ್ಯ ನೀಡುವುದು, ಜೇನುತುಪ್ಪ ತೆಗೆಯುವ ಯಂತ್ರವನ್ನು ಒದಗಿಸುವುದು, ಜೇನುಸಾಕಣೆ ಮತ್ತು ದುಂಬಿಗಳ ಬಗ್ಗೆ ಜನಪ್ರಿಯ ಉಪನ್ಯಾಸ ನೀಡುವುದು, ಜೇನು ಸಾಕಣೆ ಸಹಕಾರ ಸಂಘಗಳನ್ನು ಪ್ರೋತ್ಸಾಹಿಸುವುದೇ ಮೊದಲಾದ ಕಾರ್ಯಗಳನ್ನು ಈ ಇಲಾಖೆಯು ನಿರ್ವಹಿಸುತ್ತಿದೆ. ೧೯೮೭–೮೮ರಲ್ಲಿ ಮಂಡ್ಯ ಜಿಲ್ಲೆಯ ೧೬೨ ಗ್ರಾಮಗಳಲ್ಲಿ ೪೧೯ ಕೃಷಿಕರು ಜೇನು ಸಾಕಣೆ ಕಾರ್ಯದಲ್ಲಿ ತೊಡಗಿದ್ದರು. ಇವರಲ್ಲಿದ್ದ ಜೇನುಕುಟುಂಬಗಳ ಸಂಖ್ಯೆ ೨೩೭. ಇವರು ೯೬೫ ಜೇನು ಪೆಟ್ಟಿಗೆಗಳನ್ನು ಹೊಂದಿದ್ದು, ೯೫೦ ಕೆ.ಜಿ. ಜೇನು ತುಪ್ಪ ಮತ್ತು ೧೦ ಕೆ.ಜಿ ಜೇನು ಮೇಣವನ್ನು ಉತ್ಪಾದಿಸಿದ್ದರು. ಇದೇ ಅವಧಿಯಲ್ಲಿ ಜಿಲ್ಲೆಯಲ್ಲಿ ಜೇನುಕೃಷಿಯಲ್ಲಿ ತೊಡಗಿದ್ದ ಜೇನುಕೃಷಿ ತರಬೇತಿ ಪಡೆದವರ ಸಂಖ್ಯೆ ೨೨೨ ಆಗಿತ್ತು. ಜಿಲ್ಲೆಯ ಸರ್ಕಾರಿ ಮಧುವನದಲ್ಲಿ ೧೬ ಜೇನು ಕುಟುಂಬಗಳಿದ್ದವು.

## ಕೈಮಗ್ಗ ಮತ್ತು ವಿದ್ಯುತ್ ಚಾಲಿತ ಮಗ್ಗಗಳು

ಕೈಮಗ್ಗ ಉದ್ಯಮವು ಜಿಲ್ಲೆಯ ಪ್ರಮುಖ ಗೃಹ ಉದ್ಯಮವಾಗಿದ್ದು, ಬಹಳ ಹಿಂದಿನಿಂದಲೂ ತನ್ನದೇ ಆದ ವಿನ್ಯಾಸ ಮತ್ತು ಬಣ್ಣಗಳ ಮೂಲಕ ಮಾರುಕಟ್ಟೆಯ ಮೇಲೆ ಹತೋಟಿಯನ್ನು ಹೊಂದಿದೆ. ಆದರೆ ಇವು ಇತ್ತೀಚಿನ ವರ್ಷಗಳಲ್ಲಿ ಬೃಹತ್ ಮಿಲ್ಲುಗಳ ಜೊತೆ ಪೈಪೋಟಿ ನಡೆಸಲಾರದೆ ನಷ್ಟವನ್ನು ಅನುಭವಿಸುತ್ತಿದ್ದರೂ, ಸದಭಿರುಚಿಯ ಗ್ರಾಹಕರು ಮತ್ತು ಸರ್ಕಾರದ ನೆರವಿನಿಂದ ಮುಂದುವರಿಯುತ್ತಿವೆ. ಮೇಲುಕೋಟೆಯು ಧೋತಿ ತಯಾರಿಕೆಗೆ, ಮಳವಳ್ಳಿ ತಾಲೂಕಿನ ತಳಗವಾಡಿ, ಶ್ರೀರಂಗಪಟ್ಟಣ ತಾಲೂಕಿನ ಕೊಡಿಯಾಲ ಮತ್ತು ಕೃಷ್ಣರಾಜಪೇಟೆ ತಾಲೂಕಿನ ಹೊಸಹೊಳಲುಗಳು ಉತ್ತಮ ಗುಣಮಟ್ಟದ ಸೀರೆ ಮತ್ತು ಷರಟಿನ ಬಟ್ಟೆ ತಯಾರಿಕೆಗೆ ಹೆಸರುವಾಸಿಯಾಗಿವೆ. ಕೃಷ್ಣರಾಜಪೇಟೆ ತಾಲೂಕಿನ ಕಿಕ್ಕೇರಿಯು ರೇಷ್ಮೆ ಬಟ್ಟೆ ತಯಾರಿಕೆಗೆ ಪ್ರಸಿದ್ಧಿ ಪಡೆದಿದೆ. ಮೂರನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಸುಮಾರು ೫೫೦೦ ಕೈಮಗ್ಗಗಳು ಹತ್ತಿ, ಉಣ್ಣೆ ಮತ್ತು ರೇಷ್ಮೆ ನೇಯ್ಗೆ ಕಾರ್ಯದಲ್ಲಿ ತೊಡಗಿದ್ದವು. ಇವುಗಳ ಪೈಕಿ ೪೮೦೦ಕ್ಕೂ ಹೆಚ್ಚು ಕೈಮಗ್ಗಗಳು ಸಹಕಾರ ಸಂಘಗಳ ಅಧೀನದಲ್ಲಿದ್ದವು. ಇದೇ ಕಾಲಾವಧಿಯಲ್ಲಿ ೧೯ ಹತ್ತಿ, ನಾಲ್ಕು ಉಣ್ಣೆ ಮತ್ತು ಎರಡು ರೇಷ್ಮೆ ಬಟ್ಟೆ ನೇಯ್ಗೆಯವರ ಸಹಕಾರ ಸಂಘಗಳಿದ್ದು, ತಮ್ಮ ಸದಸ್ಯರಿಗೆ ತಾಂತ್ರಿಕ ಸಲಹೆಗಳನ್ನು ಕೊಡುವುದರ ಜೊತೆಗೆ ಯೋಜನೆಗಳನ್ನು ತಯಾರಿಸುವುದು ಮತ್ತು ಭಾರತದ ರಿಸರ್ವ್ ಬ್ಯಾಂಕಿನಿಂದ ಪಡೆದ ಫಂಡಿನಿಂದ ಸಾಲದ ರೂಪದಲ್ಲಿ ತನ್ನ ಸದಸ್ಯರಿಗೆ ಕಾರ್ಯ ಬಂಡವಾಳವನ್ನೊದಗಿಸುತ್ತಿದ್ದವು. ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಇತ್ತೀಚಿನ ಸಮೀಕ್ಷೆಯ ಪ್ರಕಾರ ಜಿಲ್ಲೆಯಲ್ಲಿ ೩,೩೨೯ ಕೈಮಗ್ಗಗಳಿದ್ದವು. ಇವುಗಳ ಪೈಕಿ ರೇಷ್ಮೆ ಬಟ್ಟೆ ತಯಾರಿಸುವ ಕೈಮಗ್ಗಗಳು ೨೪೮, ಹತ್ತಿ ಬಟ್ಟೆ ತಯಾರಿಸುವ ಕೈಮಗ್ಗಗಳು ೨,೫೧೧ ಮತ್ತು ಉಣ್ಣೆ ಕಂಬಳಿಗಳನ್ನು ತಯಾರಿಸುವ ಕೈಮಗ್ಗಗಳು ೫೭೦ ಆಗಿದ್ದವು. ಇವುಗಳಲ್ಲಿ ೧,೧೮೬ ಕೈಮಗ್ಗಗಳು ಕಾರ್ಯನಿರ್ವಹಿಸುತ್ತಿದ್ದು, ಉಳಿದವು ಸ್ಥಗಿತಗೊಂಡಿವೆ. ಇವುಗಳ ವಾರ್ಷಿಕ ಉತ್ಪಾದನೆಯಲ್ಲಿ ರೇಷ್ಮೆ ಬಟ್ಟೆ ೧.೧೫ ಲಕ್ಷ ಮೀಟರ್, ಹತ್ತಿಬಟ್ಟೆ ೪.೧೦ ಲಕ್ಷ ಮೀಟರ್ ಮತ್ತು ಉಣ್ಣೆ ಕಂಬಳಿ ೩.೧೭ ಲಕ್ಷ ಮೀಟರ್‌ಗಳಷ್ಟಿತ್ತು. ೧೯೫೨ರಲ್ಲಿ ಕೇಂದ್ರಸರ್ಕಾರದಿಂದ ಸ್ಥಾಪಿಸಲ್ಪಟ್ಟ ಅಖಿಲಭಾರತ ಕೈಮಗ್ಗ ಮಂಡಳಿಯು ಕೈಮಗ್ಗವನ್ನು ಅವಲಂಬಿಸಿಕೊಂಡಿರುವವರಿಗೆ ಸಹಾಯಧನವನ್ನು ನೀಡುವುದರ ಜೊತೆಗೆ ಕೈಮಗ್ಗದ ಬಟ್ಟೆಗಳಿಗೆ ವಿಶೇಷ ರಿಯಾಯಿತಿ ಸೌಲಭ್ಯವನ್ನೊದಗಿಸಿ, ಇವುಗಳ ಪುನಶ್ಚೇತನಕ್ಕೆ ನೆರವನ್ನೊದಗಿಸುತ್ತಿದ್ದವು. ಕೈಮಗ್ಗಗಳು ವಿದ್ಯುತ್ ಸೌಲಭ್ಯವನ್ನು ಪಡೆದು ವಿದ್ಯುತ್ ಮಗ್ಗಗಳಾಗಿ ಪರಿವರ್ತಿತಗೊಳ್ಳಲು ಈ ಮಂಡಳಿಯು ಸಹಕಾರ ಸಂಘಗಳ ಮೂಲಕ ಆರ್ಥಿಕ ನೆರವನ್ನೊದಗಿಸುತ್ತಿವೆ. ಮಂಡ್ಯ ಜಿಲ್ಲೆಯಲ್ಲಿ ೨೦೦೦ದ ಮಾರ್ಚ್ ಅಂತ್ಯಕ್ಕೆ ೨೫ ನೇಕಾರರ ಸಹಕಾರ ಸಂಘಗಳು ನೋಂದಣಿಗೊಂಡಿದ್ದು, ಒಂಭತ್ತು ಸಂಘಗಳು ಕಾರ್ಯನಿರತವಾಗಿದ್ದವು. ಉಳಿದ ೧೬ ಸಂಘಗಳು ಸ್ಥಗಿತಗೊಂಡಿದ್ದವು. ೧೯೯೫-೯೬ನೇ ಸಾಲಿನ ಕೈಮಗ್ಗಗಳ ಗಣತಿಪ್ರಕಾರ ಜಿಲ್ಲೆಯಲ್ಲಿ ಕೈಮಗ್ಗಗಳವನ್ನಲಂಬಿಸಿಕೊಂಡಿದ್ದ ಕುಟುಂಬಗಳ ಸಂಖ್ಯೆ ೩೧೦ ಆಗಿದ್ದು ವಿದ್ಯುತ್‌ಚಾಲಿತ ಮಗ್ಗಗಳವನ್ನಲಂಬಿಸಿಕೊಂಡಿದ್ದ ಕುಟುಂಬಗಳ ಸಂಖ್ಯೆ ೧೭ ಇತ್ತು. ಜಿಲ್ಲೆಯಲ್ಲಿ ಇದ್ದ ಒಟ್ಟು ೨೩೮ ಕೈಮಗ್ಗಗಳು, ೪೭೫ ಕುಶಲಕರ್ಮಿಗಳಿಗೆ ಉದ್ಯೋಗವನ್ನೊದಗಿಸಿದ್ದವು. ಇವರ ಪೈಕಿ ಪುರುಷರು ೨೮೬, ಮಹಿಳೆಯರು ೧೩೩ ಮತ್ತು ಬಾಲಕಾರ್ಮಿಕರ ಸಂಖ್ಯೆ ೫೬ ಆಗಿತ್ತು. ಜಿಲ್ಲೆಯಲ್ಲಿ ವಿದ್ಯುತ್ ಮಗ್ಗಗಳ ಸಂಖ್ಯೆ ೩೨ ಇದ್ದು ಅವುಗಳ ಪೈಕಿ ಎರಡು ವಿದ್ಯುತ್ ಮಗ್ಗಗಳು ಸ್ಥಗಿತಗೊಂಡಿದ್ದವು. ಚಾಲನೆಯಲ್ಲಿರುವ ೩೦ ವಿದ್ಯುತ್ ಮಗ್ಗಗಳಲ್ಲಿ ೨೮ ಪುರುಷರು ಮತ್ತು ೧೨ ಮಹಿಳೆಯರು ಸೇರಿದಂತೆ ಒಟ್ಟು ೪೦ ಕಾರ್ಮಿಕರಿದ್ದರು. ಮಂಡ್ಯ ಜಿಲ್ಲಾ ಪರಿಷತ್ತು ಪರಿಶಿಷ್ಟ ಜಾತಿಯ ಅನುವಂಶಿಕ ನೇಯ್ಗೆಯವರಿಗೆ ತರಬೇತಿ ಹಾಗೂ ಉತ್ಪಾದನಾ ಸೌಲಭ್ಯವನ್ನು ಕಲ್ಪಿಸಿಕೊಡುವ ಉದ್ದೇಶದಿಂದ ಚನ್ನಪ್ಪನದೊಡ್ಡಿಯಲ್ಲಿ ಮಾರಾಟ ಮತ್ತು ಸೇವಾ ಕೇಂದ್ರವನ್ನು ಸ್ಥಾಪಿಸಿದೆ. ಈ ಕೇಂದ್ರದಲ್ಲಿ ಟರ್ಕಿ ಟವಲ್, ನ್ಯಾಪ್ಕಿನ್ಸ್, ಡಿಸೈನ್ ಬೆಡ್‌ಷೀಟ್ಸ್ ಮೊದಲಾದವುಗಳ ತಯಾರಿಕೆಗೆ ಸಂಬಂಧಿಸಿದಂತೆ ತರಬೇತಿ

ನೀಡಲಾಗುತ್ತಿದೆ. ಇಲ್ಲಿ ಎಲ್ಲಾ ವಿಧವಾದ ಬಟ್ಟೆಗಳನ್ನು ತಯಾರಿಸಲು ಬೇಕಾಗುವ ಆಧುನಿಕ ಸಲಕರಣೆಗಳ ಸೌಲಭ್ಯಗಳಿವೆ.

ಜಿಲ್ಲೆಯಲ್ಲಿ ೨೦೦೧-೨೦೦೨ನೇ ಸಾಲಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೇಕಾರರ ಸಹಕಾರ ಸಂಘಗಳ ವಿವರಗಳನ್ನು ಮುಂದಿನ ಕೋಷ್ಟಕ ೫.೧೫ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧೫**

| ಕ್ರ.ಸಂ. | ನೇಕಾರರ ಸಹಕಾರ ಸಂಘಗಳ ವಿಳಾಸ | ನೋಂದಣಿ ಸಂಖ್ಯೆ ಮತ್ತು ದಿನಾಂಕ | ಉತ್ಪಾದನೆ ಮತ್ತು ಮಾರಾಟದ ಸರಕು | ಸದಸ್ಯರ ಸಂಖ್ಯೆ |
|---|---|---|---|---|
| ೧ | ಶ್ರೀ ನಂಜುಂಡೇಶ್ವರ ವಿದ್ಯುತ್ ಮಗ್ಗಗಳ ನೇಕಾರರ ಸಂಘ (ನಿ.) ತೂಬಿನಕೆರೆ ಮಂಡ್ಯ ತಾ. | ೨೪೭೩೫ ೧೪-೧೦-೯೯ | ಲಭ್ಯವಿರುವುದಿಲ್ಲ | ಲಭ್ಯವಿರುವುದಿಲ್ಲ |
| ೨ | ಪರಿಶಿಷ್ಟ ಜಾತಿ ಕೈಮಗ್ಗ ನೇಕಾರರ ಸಹಕಾರ ಸಂಘ (ನಿ.) ಗುಂಡಾಪುರ ಮಳವಳ್ಳಿ ತಾ. | ೨೨೬೮೨ ೧೩-೮-೯೭ | ಹತ್ತಿಬಟ್ಟೆ | ೧೨೫ |
| ೩ | ಹತ್ತಿ ಕೈಮಗ್ಗ ನೇಕಾರರ ಸಹಕಾರ ಸಂಘ (ನಿ.) ತಳಗವಾಡಿ, ಮಳವಳ್ಳಿ ತಾ. | ೨೯೮೦ ೧೭-೧-೭೯ | ಹತ್ತಿ ಮತ್ತು ಕಂಚಿ ಕಾಟನ್ ಬಟ್ಟೆಗಳು | ೩೨೦ |
| ೪ | ನೇಕಾರರ ಉತ್ಪಾದನಾ ಸಹಕಾರ ಸಂಘ (ನಿ.) ಮೇಲುಕೋಟೆ, ಪಾಂಡವಪುರ ತಾ. | ೭೧ ೧೩-೧೧-೬೫ | ಹತ್ತಿ ಮತ್ತು ರೇಷ್ಮೆ ಬಟ್ಟೆಗಳು | ೩೨೩ |
| ೫ | ಪದ್ಮಶಾಲಾ ಹತ್ತಿ ಕೈಮಗ್ಗದ ನೇಯ್ಗೆ ಸಹಕಾರ ಸಂಘ (ನಿ.) ಕೊಡಿಯಾಲ ಶ್ರೀರಂಗಪಟ್ಟಣ ತಾ. | ೪೬೭ ೨೪-೪-೩೮ | ಹತ್ತಿಬಟ್ಟೆ | ೩೨೧ |
| ೬ | ಪರಿಶಿಷ್ಟ ಜಾತಿ ಕೈಮಗ್ಗ ನೇಕಾರರ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ (ನಿ.) ಗಾಮನಹಳ್ಳಿ, ಶ್ರೀರಂಗಪಟ್ಟಣ ತಾಲ್ಲೂಕು | ೨೦೬೭೧ ೨೫-೮-೯೯ | ಹತ್ತಿಬಟ್ಟೆ | ೧೨೧ |
| ೭ | ವಿದ್ಯುತ್ ಮಗ್ಗಗಳ ನೇಕಾರರ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ (ನಿ.) ಕೊಡಿಯಾಲ, ಶ್ರೀರಂಗಪಟ್ಟಣ ತಾ. | ೨೫೬೬೭ ೨೦-೭-೯೯ | ಪಾಲಿಸ್ಟರ್ ಬಟ್ಟೆ | ೧೦೦ |
| ೮ | ಶ್ರೀ ಲಕ್ಷ್ಮಿನಾರಾಯಣ ಹತ್ತಿ ಮತ್ತು ರೇಷ್ಮೆ ನೇಕಾರರ ಸಹಕಾರ ಸಂಘ ನಿ.ಹೊಸಹೊಳಲು ಕೃಷ್ಣರಾಜಪೇಟೆ ತಾ. | ೧೬೫ ೧೫-೧೧-೧೯೧೪ | ರೇಷ್ಮೆ ಬಟ್ಟೆ | ೨೮೫ |
| ೯ | ರೇಷ್ಮೆ ಕೈಮಗ್ಗದ ನೇಕಾರರ ಉತ್ಪನ್ನ ಮತ್ತು ಮಾರಾಟ ಸಹಕಾರ ಸಂಘ (ನಿ.) ಕಿಕ್ಕೇರಿ ಕೃಷ್ಣರಾಜಪೇಟೆ ತಾ. | ೭೮೮ ೭-೧೧-೬೧ | ರೇಷ್ಮೆ ಬಟ್ಟೆ | ಲಭ್ಯವಿರುವುದಿಲ್ಲ |

ಆಧಾರ : ಸಹಕಾರ ಸಂಘಗಳ ಉಪನಿಬಂಧಕರು, ಮಂಡ್ಯ ಜಿಲ್ಲೆ ಮಂಡ್ಯ.

**ಕರಕುಶಲ ಕೈಗಾರಿಕೆ**

ಜಿಲ್ಲೆಯಲ್ಲಿ ಕೆಲವು ಸಾಂಪ್ರಾದಾಯಿಕ ಹಾಗೂ ಕರಕುಶಲ ಕೈಗಾರಿಕೆಗಳು ಬಹಳ ಹಿಂದಿನಿಂದಲೂ ಬೆಳೆದು ಬಂದಿವೆ. ಬಹಳಷ್ಟು ಕುಶಲಕರ್ಮಿಗಳು ಗ್ರಾಮಾಂತರ ಪ್ರದೇಶದಲ್ಲಿ ವಾಸವಾಗಿದ್ದು, ವ್ಯವಸಾಯದ ಜೊತೆಗೆ ಅನುವಂಶಿಕವಾಗಿ ಬಂದಿದ್ದ ಕುಲ ಕಸುಬನ್ನು ಮುಂದವರಿಸಿಕೊಂಡು ಬಂದಿದ್ದಾರೆ. ಕಮ್ಮಾರ, ಚಮ್ಮಾರ, ಬಡಗಿ, ಅಕ್ಕಸಾಲಿಗ ಮತ್ತು ಕಂಚುಗಾರರು ಜಿಲ್ಲೆಯಲ್ಲಿ ಕಂಡುಬರುವ ಪ್ರಮುಖ ಕರಕುಶಲಕರ್ಮಿಗಳಾಗಿದ್ದು, ಇವರು ತಮ್ಮತನವನ್ನು ಮೆರೆದಿರುವರು. ಜಿಲ್ಲೆಯ ಹಲಗೂರು, ಕಬ್ಬಿಣ ತಯಾರಿಕಾ ಕೇಂದ್ರವಾಗಿತ್ತು. ಅಕ್ಕಸಾಲಿಗರು ಒಡವೆಗಳನ್ನು ತಯಾರಿಸುತ್ತಿದ್ದುದೇ ಅಲ್ಲದೇ ಠಂಕಸಾಲೆಗಳನ್ನು ಇಟ್ಟುಕೊಂಡಿದ್ದರು. ಕಂಚುಗಾರರು ಪಾತ್ರೆ, ಘಂಟೆ, ಕಹಳೆ, ದೇವರ ವಿಗ್ರಹಗಳು, ವಿವಿಧ ಬಗೆಯ ದೀಪ, ಕನ್ನಡಿ ಚೌಕಟ್ಟು, ಪಲ್ಲಕ್ಕಿ ಮೊದಲಾದವುಗಳನ್ನು ತಯಾರಿಸುತ್ತಿದ್ದರು. ಬಡಗಿಗಳು ವ್ಯವಸಾಯೋಪಕರಣ, ಗೃಹೋಪಕರಣ, ಪೀಠೋಪಕರಣ, ಎತ್ತಿನಗಾಡಿ, ದೇವರ ರಥ ಮೊದಲಾದವುಗಳನ್ನು ತಯಾರು ಮಾಡುತ್ತಿದ್ದರು. ಇವರು ಕುಸರಿ ಕೆತ್ತನೆಯ ಬಾಗಿಲು, ಕಂಬ, ಮೇಲ್ಛಾವಣಿಗಳನ್ನೂ ಸಹ ತಯಾರಿಸುತ್ತಿದ್ದರು. ಮೋಚಿಗಳು ಚರ್ಮವನ್ನು ಹದಮಾಡುವುದು ಮತ್ತು ಚರ್ಮದಿಂದ ಪಾದರಕ್ಷೆ, ಡೋಲು, ತಮ್ಮಟೆ, ಮೊದಲಾದವುಗಳನ್ನು ತಯಾರಿಸುತ್ತಿದ್ದರು. ಕುಂಬಾರರು ಮಡಕೆ, ಹೆಂಚುಗಳನ್ನು ತಯಾರಿಸುತ್ತಿದ್ದರು.

ಮಳವಳ್ಳಿಯು ಚರ್ಮೋದ್ಯೋಗದ ಪ್ರಮುಖ ಕೇಂದ್ರವಾಗಿದ್ದು, ಸುಮಾರು ಒಂದು ಸಾವಿರ ಚಮ್ಮಾರರು ಚರ್ಮದಿಂದ ಚಪ್ಪಲಿ ತಯಾರಿಕೆಯಲ್ಲಿ ತೊಡಗಿರುವರು. ಮದ್ದೂರು, ಶೀಳನೆರೆ, ಹುಲ್ಲೇಗಾಲ ಮತ್ತು ಬೆಳ್ಳಿಗೆರೆಗಳಲ್ಲಿ ಕುಂಬಾರರ ಸಂಖ್ಯೆ ಹೆಚ್ಚಾಗಿದ್ದು, ಕುಂಬಾರಿಕೆ ಕಾರ್ಯನಡೆಯುತ್ತಿದೆ. ಚಾಪೆ ಹೆಣೆಯುವುದನ್ನು ಪ್ರಮುಖವಾಗಿ ನಾಗಮಂಗಲ ಮತ್ತು ಸಿಂದಘಟ್ಟಗಳಲ್ಲಿ ಕಾಣಬಹುದು. ಸಾಂಪ್ರದಾಯಿಕ ಪರಿಣತ ಕುಶಲಕರ್ಮಿಗಳು ಕಂಚಿನ ಪ್ರತಿಮೆ ಮತ್ತು ಕುಶಲಕಲೆಗಳಿರುವ ಉಪಯುಕ್ತ ವಸ್ತುಗಳನ್ನು ತಯಾರಿಸುತ್ತಿರುವರು. ಜಿಲ್ಲೆಯಲ್ಲಿ ೧೯೬೫ರಲ್ಲಿ ಆರು ಕೈಗಾರಿಕಾ ಸಹಕಾರ ಸಂಘಗಳಿದ್ದು, ತಮ್ಮ ಸದಸ್ಯರಿಗೆ ಆರ್ಥಿಕ ಮತ್ತು ತಾಂತ್ರಿಕ ನೆರವನ್ನೊದಗಿಸುತ್ತಿದ್ದವು. ಇವುಗಳಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಗಂಜಾಂನ ಮರಗೆಲಸ ಮತ್ತು ಕುಲುಮೆ ಕೆಲಸಗಾರರ ಸಹಕಾರಸಂಘ, ಮಂಡ್ಯದ ವಿಶ್ವಕರ್ಮ ಉದ್ದಿಮೆ ಸಹಕಾರ ಸಂಘ, ಮಳವಳ್ಳಿ ತಾಲೂಕಿನ ಶ್ರೀನಿವಾಸ ಮೇದಾರ ಕೆಲಸಗಾರರ ಸಹಕಾರ ಸಂಘ ಮತ್ತು ನಾಗಮಂಗಲದ ವಿಶ್ವಕರ್ಮ ಉದ್ದಿಮೆ ಸಹಕಾರ ಸಂಘ, ಪ್ರಸಿದ್ಧವಾದುವು. ಗಂಜಾಂನಲ್ಲಿ ಎತ್ತಿನಗಾಡಿ, ಪೀಠೋಪಕರಣ ಮತ್ತು ವ್ಯವಸಾಯೋಪಕರಣಗಳನ್ನು ತಯಾರಿಸುತ್ತಿದ್ದರು. ಗೋಲ್ಡ್‌ಸ್ಮಿತ್ ಸಹಕಾರ ಯೋಜನೆಯಡಿ ನಾಗಮಂಗಲ ತಾಲೂಕಿನ ಬೆಳ್ಳೂರಿನಲ್ಲಿ ಗೋಲ್ಡ್‌ಸ್ಮಿತ್ ಕೈಗಾರಿಕಾ ಸಹಕಾರ ಸಂಘ ಮತ್ತು ಮಂಡ್ಯದಲ್ಲಿ ಅಕ್ಕಸಾಲಿಗರ ಕುಶಲ ಕೈಗಾರಿಕಾ ಸಂಘ ಸ್ಥಾಪನೆಗೊಂಡಿದ್ದವು.

ಜಿಲ್ಲೆಯಲ್ಲಿ ೨೦೦೧–೨೦೦೨ನೇ ಸಾಲಿನಲ್ಲಿದ್ದ ಉದ್ದಿಮೆವಾರು ಮತ್ತು ತಾಲೂಕುವಾರು ಕುಶಲಕರ್ಮಿಗಳ ವಿವರವನ್ನು ಮುಂದಿನ ಕೋಷ್ಟಕ ೫.೧೬ರಲ್ಲಿ ನೀಡಿದೆ.

**ಕೋಷ್ಟಕ ೫.೧೬**

| ಕ್ರ. ಸಂ. | ಉದ್ದಿಮೆವಾರು/ ಕುಶಲಕರ್ಮಿಗಳು | ತಾಲೂಕುವಾರು ಕುಶಲಕರ್ಮಿಗಳ (ಸಂಖ್ಯೆ) | | | | | | | |
|---|---|---|---|---|---|---|---|---|---|
| | | ಮಂಡ್ಯ | ಮಳವಳ್ಳಿ | ಮದ್ದೂರು | ನಾಗಮಂಗಲ | ಕೆ.ಆರ್.ಪೇಟೆ | ಶ್ರೀರಂಗಪಟ್ಟಣ | ಪಾಂಡವಪುರ | ಒಟ್ಟು |
| ೧ | ಬಡಗಿಗಳು | ೪೩೪ | ೩೨೩ | ೪೨೪ | ೧೯೦ | ೩೨೨ | ೩೦೦ | ೨೧೦ | ೨,೨೦೩ |
| ೨ | ಕಮ್ಮಾರರು | ೩೪೪ | ೧೬೧ | ೩೦೬ | ೧೭೯ | ೧೮೩ | ೧೩೧ | ೨೦೧ | ೧,೫೦೫ |
| ೩ | ಕುಂಬಾರರು | ೨೪೨ | ೨೧೩ | ೨೧೨ | ೧೬೨ | ೩೫೬ | ೧೩೮ | ೧೭೬ | ೧,೪೯೯ |
| ೪ | ಮೋಚಿಗಳು | ೬೨ | ೩೯೨ | ೯೭ | ೪೭ | ೪೨ | ೨೬ | ೪೮ | ೭೧೪ |
| ೫ | ಬುಟ್ಟಿ ಹೆಣೆಯುವವರು | ೧೦೦ | ೨೫೦ | ೭೨ | ೮೩ | ೬೯ | ೧೦೨ | ೩೫ | ೭೧೧ |
| ೬ | ಉಣ್ಣೆ ನೇಯ್ಗೆಯವರು | ೧೨೫ | ೨೦೪೧ | ೪೦೫ | ೯೫೩ | ೨೧೭ | – | ೮೪ | ೩,೮೨೫ |
| ೭ | ಹತ್ತಿ ನೇಯ್ಗೆಯವರು | ೪೩೦ | ೯೧ | ೭೦೨ | ೧೬ | ೨೪೯ | ೧೦೫ | ೧೪೩ | ೧,೭೩೬ |
| ೮ | ಎಣ್ಣೆ ತೆಗೆಯುವವರು (ಗಾಣಿಗರು) | ೯೭ | ೯೪ | ೧೮೩ | ೧೨೦ | ೧೩೬ | ೯೫ | ೮೭ | ೮೧೨ |
| ೯ | ಆಹಾರ ತಯಾರಕರು ಮತ್ತು ಇತರರು | ೧,೨೯೯ | ೧,೭೮೦ | ೧,೨೯೮ | ೧,೦೯೯ | ೧,೯೦೭ | ೧,೧೭೫ | ೨,೮೬೨ | ೧೧,೪೨೦ |
| | ಒಟ್ಟು | ೩,೧೩೩ | ೫,೩೪೫ | ೩,೬೯೯ | ೨,೮೪೯ | ೩,೪೮೧ | ೨,೦೭೨ | ೩,೮೪೬ | ೨೪,೪೨೫ |

ಆಧಾರ : ಜಿಲ್ಲಾ ಕೈಗಾರಿಕಾ ಕೇಂದ್ರ ಮಂಡ್ಯ

(ಮಂಡ್ಯ ಜಿಲ್ಲೆಯ ಕೈಗಾರಿಕಾ ಸಾಮರ್ಥ್ಯದ ಸರ್ವೇಕ್ಷಣ ವರದಿ ೧೯೯೬–೯೭ ಸಣ್ಣ ಕೈಗಾರಿಕೆಗಳ ಸೇವಾ ಸಂಸ್ಥೆ, ಬೆಂಗಳೂರು)

ಮಂಡ್ಯ ಜಿಲ್ಲೆಯು ೧೯೯೨–೯೩ರಿಂದೀಚೆಗೆ ಕರಕುಶಲ ವಸ್ತುಗಳ ಉತ್ಪಾದನೆಯಲ್ಲಿ ತ್ವರಿತವಾಗಿ ಪ್ರಗತಿಯನ್ನು ಸಾಧಿಸುತ್ತಿದೆ. ನಾಗಮಂಗಲ ತಾಲೂಕಿನ ಕುಶಲಕರ್ಮಿಗಳು ಹಿತ್ತಾಳೆಯಲ್ಲಿ ವಿಗ್ರಹ ಮತ್ತು ಕುಶಲಕೆತ್ತನೆಯ ದಿನಬಳಕೆಯ ವಸ್ತುಗಳನ್ನು ತಯಾರಿಸಿ ಅಂತರರಾಷ್ಟ್ರೀಯ ಮಾರುಕಟ್ಟೆ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಇವರು ತಯಾರಿಸುವ ಕುಶಲಕಲೆಯಿಂದ ಕೂಡಿದ ಉಪಯುಕ್ತ ವಸ್ತುಗಳು ಅಮೆರಿಕಾ ಸಂಯುಕ್ತ ಸಂಸ್ಥಾನ, ಬ್ರಿಟನ್, ಕೆನಡಾ, ಜರ್ಮನಿ, ಆಸ್ಟ್ರೇಲಿಯಾ, ಮಧ್ಯಪೂರ್ವ ಮತ್ತು ಆಗ್ನೇಯ ಏಷ್ಯನ್ ರಾಷ್ಟ್ರಗಳಲ್ಲಿ ಮಾರಾಟಗೊಳ್ಳುತ್ತಿವೆ. ಇಲ್ಲಿ ತಯಾರಾಗುವ ಸರಕಿಗೆ ಅಂತರರಾಷ್ಟ್ರೀಯ ಮಾರುಕಟ್ಟೆ ಸೌಲಭ್ಯವನ್ನು ಹ್ಯಾಂಡಿಕ್ರಾಫ್ಟ್ ಎಕ್ಸ್‌ಪೋರ್ಟ್ ಪ್ರಮೋಷನ್ ಕೌನ್ಸಿಲ್ ದೊರಕಿಸಿಕೊಟ್ಟಿದೆ. ೧೯೯೨–೯೩ರಲ್ಲಿ ೧೫.೫೫ ಲಕ್ಷ ರೂ, ಮೌಲ್ಯದ ಸರಕು ಜಿಲ್ಲೆಯಿಂದ ನಿರ್ಯಾತಗೊಂಡಿದೆ. ೧೯೯೩–೯೪ರಲ್ಲಿ ೧೬.೮೦ ಲಕ್ಷ ರೂ, ೧೯೯೪–೯೫ರಲ್ಲಿ ೧೭.೯೫ ಲಕ್ಷ ರೂ, ಮತ್ತು ೧೯೯೫–೯೬ರಲ್ಲಿ ೧೮.೮೫ ಲಕ್ಷ ರೂ. ಮೌಲ್ಯದ ಸರಕು ಜಿಲ್ಲೆಯಿಂದ ನಿರ್ಯಾತಗೊಂಡು ವಿದೇಶಿ ವಿನಿಮಯವನ್ನು ಗಳಿಸಿದೆ. ಜಿಲ್ಲೆಯಲ್ಲಿ ೨೦೦೦ದ ಮಾರ್ಚ್ ಅಂತ್ಯಕ್ಕೆ ಕುಶಲಕರ್ಮಿಗಳ ವಿವರಗಳನ್ನು ಮುಂದಿನ ಕೋಷ್ಟಕ ೫.೧೭ರಲ್ಲಿ ನೀಡಿದೆ.

**ಕೋಷ್ಟಕ ೫.೧೭**

| ಕ್ರ. ಸಂ. | ಉದ್ದಿಮೆಯ ಹೆಸರು | ಗೃಹ ಕುಶಲಕರ್ಮಿಗಳ ಸಂಖ್ಯೆ | ಕಾರ್ಮಿಕ ಕುಶಲಕರ್ಮಿಗಳ ಸಂಖ್ಯೆ | ಬಾಡಿಗೆ ಕುಶಲಕರ್ಮಿಗಳ ಸಂಖ್ಯೆ |
|---|---|---|---|---|
| ೧ | ಮರಗೆಲಸ | ೨೦೪ | ೩೧೭ | ೧೬೨ |
| ೨ | ನಾರು ಉದ್ದಿಮೆ | ೧೨೫ | ೩೦೨ | ೨೦ |
| ೩ | ಚಿನ್ನ-ಬೆಳ್ಳಿ ಉದ್ದಿಮೆ | ೫೩ | ೭೨ | ೧೩ |
| ೪ | ಕುಂಬಾರಿಕೆ | ೮೭೨ | ೩,೬೬೩ | ೨,೦೫೯ |
| ೫ | ದರ್ಜಿ ಕೆಲಸ | ೨,೫೮೬ | ೪,೯೩೪ | ೬೧೦ |
| ೬ | ಬೆತ್ತದ ಕೆಲಸ | ೪೨೦ | ೧,೦೫೭ | ೦೫ |
| ೭ | ಚರ್ಮೋದ್ಯಮ | ೪೧ | ೭೮ | ೦೫ |
| ೮ | ಉಣ್ಣೆ ತಯಾರಿಕೆ | ೪೮ | ೧೨೫ | – |
| ೯ | ಕಮ್ಮಾರಿಕೆ | ೩೫೪ | ೭೭೮ | ೧೦೨ |
| ೧೦ | ಹತ್ತಿ ನೇಯ್ಗೆ | ೨೦೩ | ೫೪೫ | ೭೭ |
| ೧೧ | ಚಾಪೆ ಹೆಣೆಯುವುದು | ೧೩೭ | ೩೯೧ | ೨೨ |
| ೧೨ | ಉಣ್ಣೆ ನೇಯ್ಗೆ | ೫೨೧ | ೧,೭೯೫ | ೧೬೩ |
| ೧೩ | ಬೆತ್ತ ಮತ್ತು ಬಿದುರು | ೨೧ | ೫೫ | – |
| ೧೪ | ರೇಷ್ಮೆನೂಲು ಮತ್ತು ನೇಯ್ಗೆ | ೬೫ | ೭೦೯ | ೪೬೨ |
| ೧೫ | ಕಲ್ಲುಕೆತ್ತನೆ ಕೆಲಸ | ೧೪ | ೨೩ | ೪ |
| ೧೬ | ಬೊಂಬೆ ತಯಾರಿಕೆ ಮತ್ತು ಗುಡಿಗಾರಿಕೆ | ೪೯ | ೭೭ | – |
| ೧೭ | ಲೋಹ ಉಪಕರಣಗಳ ತಯಾರಿಕೆ | ೧ | ೧ | – |
| ೧೮ | ಅಗರಬತ್ತಿ ತಯಾರಿಕೆ | ೧೮೫ | ೫೬೭ | ೧೨೧ |
| ೧೯ | ಸುಣ್ಣ ತಯಾರಿಕೆ | ೪೫ | ೧೪೪ | ೪ |
| ೨೦ | ಗಾಡಿ ತಯಾರಿಕೆ | ೨೦ | ೨೨೪ | ೧೪೪ |
| ೨೧ | ಹೆಣಿಕೆ ಕೆಲಸ | ೪೪ | ೬೦ | ೩ |
| ೨೨ | ಮೊರಕೆ ಕೆಲಸ | ೩೫೧ | ೧,೨೪೬ | ೩೬ |
| ೨೩ | ಲಾಂಡ್ರಿ ಕೆಲಸ | ೩೫೪ | ೭೪೨ | ೪೧ |

ಆಧಾರ : ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಡ್ಯ

## ರೇಷ್ಮೆ ಕೈಗಾರಿಕೆ

ರೇಷ್ಮೆಯು ರಾಜ್ಯದ ಗೃಹ ಕೈಗಾರಿಕೆಗಳಲ್ಲಿ ಒಂದಾಗಿರುವುದಲ್ಲದೆ, ವ್ಯವಸಾಯಕ್ಕೆ ಪೂರಕವಾಗಿದೆ. ಟಿಪ್ಪುಸುಲ್ತಾನ್ ತನ್ನ ರಾಜ್ಯದ ದಕ್ಷಿಣ ಭಾಗದಲ್ಲಿ ರೇಷ್ಮೆಹುಳುಗಳ ಸಾಕಾಣಿಕೆ ಘಟಕವನ್ನು ಸ್ಥಾಪಿಸಿ, ಚೀನಾದಿಂದ ಮೊಟ್ಟೆಗಳನ್ನು ತರಿಸಿ, ಮೈಸೂರು ಸಂಸ್ಥಾನದಲ್ಲಿ ಈ ಕೈಗಾರಿಕೆಯನ್ನು ಬೆಳೆಸಿದ್ದು, ಒಂದು ಐತಿಹಾಸಿಕ ಸಂಗತಿಯಾಗಿದೆ. ಮೈಸೂರು ರಾಜ್ಯವನ್ನು ಪ್ರಪಂಚದ ರೇಷ್ಮೆ ಉತ್ಪಾದಿಸುವ ರಾಜ್ಯಗಳಲ್ಲಿ ಒಂದನ್ನಾಗಿ ಮಾಡುವುದು ಟಿಪ್ಪುವಿನ ಮಹದಾಕಾಂಕ್ಷೆಯಾಗಿತ್ತು. ೧೯೧೪ರಲ್ಲಿ ಹನ್ನೆರಡು ಜಾತಿಯ ರೇಷ್ಮೆ ಹುಳುಗಳ ತಳಿಗಳನ್ನು ಇಟಲಿಯಿಂದ ತರಿಸಿ ಅಭಿವೃದ್ಧಿಪಡಿಸಲಾಯಿತು. ೧೯೧೫ರಲ್ಲಿ ಮೈಸೂರು ತಳಿ ಮತ್ತು ಇಟಲಿಯ ತಳಿಯನ್ನು ಸೇರಿಸಿ ಅಧಿಕ ಇಳುವರಿಯ ಮಿಶ್ರತಳಿಯನ್ನು ಪಡೆಯಲಾಯಿತು. ಇದೇ ಕಾಲಾವಧಿಯಲ್ಲಿ ಅನೇಕ ರೇಷ್ಮೆ ಕೃಷಿ ಮತ್ತು ಹುಳು ಸಾಕಣೆ ಕೇಂದ್ರಗಳು ಪ್ರಾರಂಭಗೊಂಡವು. ಮಂಡ್ಯ ಜಿಲ್ಲೆಯ ಮದ್ದೂರು ಮತ್ತು ಮಳವಳ್ಳಿ ತಾಲೂಕುಗಳ ಕೃಷಿಕರು ಸ್ವಾತಂತ್ರ್ಯಪೂರ್ವದಿಂದಲೂ, ಹಿಪ್ಪುನೇರಳೆಯನ್ನು ಬೆಳೆಯುವುದರ ಜೊತೆಗೆ ರೇಷ್ಮೆಹುಳುಗಳನ್ನು ಸಾಕಿ, ರೇಷ್ಮೆಗೂಡನ್ನು ಚನ್ನಪಟ್ಟಣದ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದ್ದರು.

ರೇಷ್ಮೆ ಕೈಗಾರಿಕೆಯು ಪ್ರಧಾನವಾಗಿ ಹಿಪ್ಪುನೇರಳೆಯನ್ನು ಬೆಳೆಯುವುದು, ರೇಷ್ಮೆ ಹುಳುಗಳನ್ನು ಸಾಕುವುದು ಮತ್ತು ನೂಲು ತಯಾರಿಸುವ ಕಾರ್ಯಗಳನ್ನೊಳಗೊಂಡಿದೆ. ಮೊದಲೆರಡು ಕಾರ್ಯಗಳು ಕೃಷಿಯ ವ್ಯಾಪ್ತಿಗೊಳಪಟ್ಟಿದ್ದರೆ, ಮೂರನೆಯದು ಸಂಪೂರ್ಣವಾಗಿ ಕೈಗಾರಿಕಾ ವ್ಯಾಪ್ತಿಗೊಳಪಟ್ಟಿದೆ. ಜಿಲ್ಲೆಯಲ್ಲಿ ರೇಷ್ಮೆಬೆಳೆಗೆ ಅನುಕೂಲವಾದ ಹವಾಗುಣ ಮತ್ತು ನೀರಾವರಿ ಸೌಲಭ್ಯವಿರುವುದರಿಂದ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿಯೂ ಹಿಪ್ಪುನೇರಳೆಯನ್ನು ಬೆಳೆಯಲಾಗುತ್ತಿದೆ, ಅದರಲ್ಲೂ ಮದ್ದೂರು ಮತ್ತು ಮಳವಳ್ಳಿ ತಾಲೂಕುಗಳು ಹಿಪ್ಪುನೇರಳೆ ಬೆಳೆಗೆ ಹೆಚ್ಚು ಪ್ರಾಮುಖ್ಯತೆ ಪಡೆದಿವೆ. ಜಿಲ್ಲೆಯಲ್ಲಿ ಅಧಿಕ ಇಳುವರಿಯ ಹಿಪ್ಪುನೇರಳೆ ತಳಿಗಳಾದ ಎಸ್-೩೬ ಮತ್ತು ವಿ-೧ ಹಾಗೂ ರೇಷ್ಮೆಹುಳು ತಳಿಗಳಾದ ಸಿ.ಎಸ್.ಆರ್. ೨೦೪, ಸಿ.ಎಸ್.ಆರ್. ೪೦೨ ಮತ್ತು ಸಿ.ಎಸ್.ಆರ್.ಹೈಬ್ರಿಡ್ ತಳಿಗಳು ಪ್ರಚಲಿತದಲ್ಲಿವೆ. ೨೦೦೧-೨೦೦೨ರ ಮಾರ್ಚ್ ಅಂತ್ಯಕ್ಕೆ ಜಿಲ್ಲೆಯ ೧,೧೦೭ ಹಳ್ಳಿಗಳಲ್ಲಿ ೩೨,೦೭೪ ಕುಟುಂಬಗಳು ೯೧೧೦.೫೫ ಹೆಕ್ಟೇರುಗಳಲ್ಲಿ ಹಿಪ್ಪುನೇರಳೆಯನ್ನು ಬೆಳೆಯುತ್ತಿದ್ದವು. ಹಿಪ್ಪುನೇರಳೆ ಬೆಳೆಯುವ ಒಟ್ಟು ಹಳ್ಳಿಗಳ ಪೈಕಿ ಮಳವಳ್ಳಿ ತಾಲೂಕು ೩೩೦ ಹಳ್ಳಿಗಳನ್ನು ಹೊಂದಿದ್ದು, ಜಿಲ್ಲೆಯಲ್ಲಿ ಮೊದಲ ಸ್ಥಾನವನ್ನು ಪಡೆದಿದ್ದರೆ, ಉಳಿದ ಸ್ಥಾನಗಳನ್ನು ಮದ್ದೂರು, ಕೃಷ್ಣರಾಜಪೇಟೆ, ಪಾಂಡವಪುರ, ನಾಗಮಂಗಲ, ಶ್ರೀರಂಗಪಟ್ಟಣ ಮತ್ತು ಮಂಡ್ಯ ತಾಲೂಕುಗಳು ಹೊಂದಿದ್ದವು. ಹಿಪ್ಪುನೇರಳೆ ಬೆಳೆಯಲಾಗಿದ್ದ ತಾಲೂಕುಗಳಲ್ಲಿ ಮಳವಳ್ಳಿ ತಾಲೂಕು ೪,೭೪೫.೨೬ ಹೆಕ್ಟೇರ್ ಪ್ರದೇಶವನ್ನು ಹೊಂದಿದ್ದು, ಮೊದಲಸ್ಥಾನದಲ್ಲಿದ್ದರೆ ಉಳಿದ ಸ್ಥಾನಗಳನ್ನು ಮದ್ದೂರು, ಮಂಡ್ಯ, ಕೃಷ್ಣರಾಜಪೇಟೆ, ಪಾಂಡವಪುರ, ಶ್ರೀರಂಗಪಟ್ಟಣ ಮತ್ತು ನಾಗಮಂಗಲ ತಾಲೂಕುಗಳು ಹೊಂದಿದ್ದವು. ಹಿಪ್ಪುನೇರಳೆ ಬೆಳೆಯುವ ಒಟ್ಟು ಕುಟುಂಬಗಳ ಪೈಕಿ ಮದ್ದೂರು ತಾಲೂಕು ೧೬,೬೫೯ ಕುಟುಂಬಗಳನ್ನು ಹೊಂದಿದ್ದು, ಜಿಲ್ಲೆಯ ಅಗ್ರಸ್ಥಾನದಲ್ಲಿದ್ದರೆ, ಉಳಿದ ಸ್ಥಾನಗಳನ್ನು ಅನುಕ್ರಮವಾಗಿ ಮಳವಳ್ಳಿ, ಮಂಡ್ಯ, ಕೃಷ್ಣರಾಜಪೇಟೆ, ಪಾಂಡವಪುರ, ಶ್ರೀರಂಗಪಟ್ಟಣ ಮತ್ತು ನಾಗಮಂಗಲ ತಾಲೂಕುಗಳು ಪಡೆದಿದ್ದವು.

ಜಿಲ್ಲೆಯಲ್ಲಿ ೨೦೦೦ದ ಮಾರ್ಚ್ ಅಂತ್ಯದಲ್ಲಿದ್ದಂತೆ, ಮೂರು ಚಾಕಿ ಸಾಕಾಣಿಕಾ ಕೇಂದ್ರಗಳಾದ, ಮಾದರಿ ಸಾಕಾಣಿಕಾ ಕೇಂದ್ರ ಬಸರಾಳು, ಮಂಡ್ಯ ತಾಲೂಕು, ಸಮುದಾಯ ಅಭಿವೃದ್ಧಿ ಕೇಂದ್ರ ವಿಶೇಷ ಘಟಕ ಯೋಜನೆ, ಪೂರಿಗಾಲಿ, ಮಳವಳ್ಳಿ ತಾಲೂಕು ಮತ್ತು ಚೌಕಿ ಸಾಕಾಣಿಕಾ ಕೇಂದ್ರ ಎಸ್.ಐ. ಹೊನ್ನಲಗೆರೆ, ಮದ್ದೂರು ತಾಲೂಕು,

ಇವುಗಳು ಅಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಜಿಲ್ಲೆಯಲ್ಲಿ ಎರಡು ಸೀಡ್ ಫಾರಂಗಳು ಮಂಡ್ಯ ತಾಲೂಕಿನ ಮಲ್ಲಿಗೆರೆ ಮತ್ತು ಕೃಷ್ಣರಾಜಪೇಟೆ ತಾಲೂಕಿನ ಚಿಕ್ಕೋನಹಳ್ಳಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಜಿಲ್ಲೆಯಲ್ಲಿ ೨೨ ತಾಂತ್ರಿಕ ಸೇವಾ ಕೇಂದ್ರಗಳಿದ್ದವು. ಇವುಗಳಲ್ಲಿ ನಾಲ್ಕು ಮಂಡ್ಯ, ಮೂರು ಮದ್ದೂರು, ಆರು ಮಳವಳ್ಳಿ, ನಾಲ್ಕು ಕೃಷ್ಣರಾಜಪೇಟೆ, ಎರಡು ಪಾಂಡವಪುರ, ಒಂದು ಶ್ರೀರಂಗಪಟ್ಟಣ ಮತ್ತು ಎರಡು ನಾಗಮಂಗಲ ತಾಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಜಿಲ್ಲೆಯಲ್ಲಿ ರೇಷ್ಮೆಗೂಡಿನ ಇಳುವರಿಯು, ೧೦೦ ಮೊಟ್ಟೆಗೆ ಮಿಶ್ರತಳಿ ೪೨.೬ ಕೆ.ಜಿ., ದ್ವಿತಳಿ ೪೭.೨ ಕೆ.ಜಿ ಮತ್ತು ಸಿ.ಎಸ್.ಆರ್. ೫೫.೨ ಕೆ.ಜಿಯಷ್ಟಿತ್ತು. ಜಿಲ್ಲೆಯ ರೇಷ್ಮೆಗೂಡಿನ ಒಟ್ಟು ಉತ್ಪಾದನೆ ೨,೫೨೩.೫೧೮ ಮೆಟ್ರಿಕ್ ಟನ್ ಇದ್ದು, ಇದರಲ್ಲಿ ಮಿಶ್ರತಳಿಯ ಉತ್ಪಾದನೆ ೨೫೦.೫೫೧ ಮೆ.ಟನ್, ದ್ವಿತಳಿಯ ಉತ್ಪಾದನೆ ೧೩.೮೬೭ ಮೆ.ಟನ್ ಗಳಾಗಿತ್ತು. ಉಳಿದ ೨,೨೫೯.೧೦೦ ಮೆ.ಟನ್. ರೇಷ್ಮೆಗೂಡನ್ನು ಸಿ.ಎಸ್.ಆರ್.ನಿಂದ ಪಡೆಯಲಾಗಿತ್ತು.

ಜಿಲ್ಲೆಯಲ್ಲಿ ೨೦೦೦ದ ಮಾರ್ಚ್ ಅಂತ್ಯದಲ್ಲಿದ್ದ ಏಳು ಸರ್ಕಾರಿ ಬಿತ್ತನೆ ಕೋಠಿಗಳಲ್ಲಿ, ಮೂರು ಮಾದರಿ ಬಿತ್ತನೆ ಕೋಠಿಗಳು ಮಂಡ್ಯ, ಮದ್ದೂರು ಮತ್ತು ಹಲಗೂರುಗಳಲ್ಲೂ, ಮೂರು ಸರ್ಕಾರಿ ಬಿತ್ತನೆ ಕೋಠಿಗಳು ಮಳವಳ್ಳಿ, ಪೂರಿಗಾಲಿ ಮತ್ತು ಬೆಳಕವಾಡಿಗಳಲ್ಲೂ, ಒಂದು ಪಿ–೧ ಬಿತ್ತನೆಕೋಠಿ ಕೃಷ್ಣರಾಜಪೇಟೆಯಲ್ಲೂ ಕಾರ್ಯನಿರ್ವಹಿಸುತ್ತಿದ್ದವು. ಇವುಗಳೇ ಅಲ್ಲದೇ ೧೦೦ ಖಾಸಗಿ ಬಿತ್ತನೆ ಕೋಠಿಗಳು ಮದ್ದೂರು, ಮಳವಳ್ಳಿ ಮತ್ತು ಮಂಡ್ಯಗಳಲ್ಲಿದ್ದು, ರೋಗರಹಿತ ಮೊಟ್ಟೆಗಳನ್ನು ಉತ್ಪಾದಿಸಿ ಕೃಷಿಕರಿಗೆ ಒದಗಿಸುತ್ತಿದ್ದವು. ೧೯೯೯–೨೦೦೦ನೇ ಸಾಲಿನಲ್ಲಿ ಒಟ್ಟು ೧,೫೯,೫೮,೩೭೨ ರೋಗರಹಿತ ಮೊಟ್ಟೆಯನ್ನು ೩೮,೮೬೫ ಫಲಾನುಭವಿಗಳಿಗೆ ವಿತರಿಸಲಾಯಿತು. ಇವುಗಳಲ್ಲಿ ಸಿಬಿ ೧,೫೫,೧೦,೪೦೧ ಮತ್ತು ಬಿವಿ ೪,೪೭,೯೭೧ ರೋಗರಹಿತ ಮೊಟ್ಟೆಗಳೂ ಸೇರಿದ್ದವು. ಜಿಲ್ಲೆಯ ಮದ್ದೂರಿನಲ್ಲಿ ಒಂದು ಹಿಪ್ಪುನೇರಳೆ ಗ್ರಾಫ್ಟ್ ನರ್ಸರಿ ಇದೆ. ಜಿಲ್ಲೆಯ ಹೆಚ್.ಮಲ್ಲಿಗೆರೆ ಮತ್ತು ಚಿಕ್ಕೋನಹಳ್ಳಿಗಳಲ್ಲಿ ಎರಡು ರೇಷ್ಮೆ ಫಾರಂಗಳಿದ್ದು, ಉತ್ತಮ ತಳಿಯ ರೇಷ್ಮೆ ಹುಳುಗಳನ್ನು ಸಾಕುವ ಮತ್ತು ಉತ್ತಮ ಇಳುವರಿಯ ಹಿಪ್ಪುನೇರಳೆಯನ್ನು ಬೆಳೆಯುವ ಕಾರ್ಯವನ್ನು ನಿರ್ವಹಿಸುತ್ತಿದ್ದವು. ಇವು ಹಿಪ್ಪುನೇರಳೆ ಬಗ್ಗೆ ಸಂಶೋಧನಾ ಕಾರ್ಯವನ್ನು ನಿರ್ವಹಿಸುತ್ತಿರುವುದರ ಜೊತೆಗೆ ಉತ್ತಮ ತಳಿಯ ಹಿಪ್ಪುನೇರಳೆ ಕಡ್ಡಿಗಳನ್ನು ರೈತರಿಗೆ ಒದಗಿಸುತ್ತಿವೆ.

ಜಿಲ್ಲೆಯಲ್ಲಿ ಮೂರು ರೇಷ್ಮೆಗೂಡಿನ ಮಾರುಕಟ್ಟೆಗಳು ಮಳವಳ್ಳಿ, ಕೃಷ್ಣರಾಜಪೇಟೆ ಮತ್ತು ಮಂಡ್ಯಗಳಲ್ಲಿ ಇದ್ದು, ಮಂಡ್ಯದ ಮಾರುಕಟ್ಟೆ ಸ್ಥಗಿತಗೊಂಡಿದೆ. ರೇಷ್ಮೆ ತರಬೇತಿ ಶಾಲೆಗಳು ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ ಚಿಕ್ಕೋನಹಳ್ಳಿ ಮತ್ತು ಹೆಚ್.ಮಲ್ಲಿಗೆರೆ ಮಂಡ್ಯ ತಾಲೂಕುಗಳಲ್ಲಿದ್ದು, ರೇಷ್ಮೆ ಕೃಷಿಕರಿಗೆ ತರಬೇತಿ ಸೌಲಭ್ಯವನ್ನೊದಗಿಸುತ್ತಿವೆ. ಜಿಲ್ಲೆಯಲ್ಲಿ ಒಂದು ರೇಷ್ಮೆ ಕೈಗಾರಿಕಾ ಘಟಕವು ತೊರೆಕಾಡನಹಳ್ಳಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

ಜಿಲ್ಲೆಯಲ್ಲಿ ೧೯೯೯–೨೦೦೦ ಹಾಗೂ ೨೦೦೧–೨೦೦೨ನೇ ಮಾರ್ಚ್ ಅಂತ್ಯದಲ್ಲಿದ್ದ ನೂಲು ತೆಗೆಯುವ ಚರಕಗಳು, ಕಾಟೇಜ್ ಬೇಸಿಸ್, ಫಿಲೇಚರ್ಸ್ ಮತ್ತು ಮಲ್ಟಿ ಎಂಡ್‌ಗಳ ವಿವರಗಳನ್ನು ಮುಂದಿನ ಕೋಷ್ಟಕ ೫.೧೮ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧೮**

| ನೂಲು ತೆಗೆಯುವ ಉಪಕರಣಗಳು | ಘಟಕಗಳು | | ಯಂತ್ರಗಳು | |
|---|---|---|---|---|
| | ೧೯೯೯–೦೦ | ೨೦೦೧–೦೨ | ೧೯೯೯–೦೦ | ೨೦೦೧–೦೨ |
| ೧. ಚರಕ | ೬೮ | ೭೧ | ೨೩೯ | ೧೯೬ |
| ೨. ಕಾಟೇಜ್ ಬೇಸಿಸ್ | ೨ | – | ೪ | – |
| ೩. ಫಿಲೇಚರ್ಸ್ | ೬ | – | ೬೪ | – |
| ೪. ಮಲ್ಟಿ ಎಂಡ್ ಉಪಕರಣಗಳು | ೨ | ೨ | ೧೬ | ೨ |

ಆಧಾರ : ರೇಷ್ಮೆ ಕೃಷಿ ಉಪನಿರ್ದೇಶಕರು, ಮಂಡ್ಯ ಜಿಲ್ಲೆ, ಮಂಡ್ಯ

ಜಿಲ್ಲೆಯಲ್ಲಿ ೧೯೯೯–೨೦೦೦ ಹಾಗೂ ೨೦೦೨ನೇ ಮಾರ್ಚ್ ಅಂತ್ಯದಲ್ಲಿ ಇದ್ದ ತಾಲೂಕುವಾರು ರೇಷ್ಮೆ ಬೆಳೆಯುವ ಪ್ರಧಾನಹಳ್ಳಿಗಳ ಸಂಖ್ಯೆ ಮತ್ತು ಹಿಪ್ಪುನೇರಳೆ ಕ್ಷೇತ್ರಗಳ ವಿವರವನ್ನು ಮುಂದಿನ ಕೋಷ್ಟಕ ೫.೧೯ರಲ್ಲಿ ನೀಡಿದೆ.

**ಕೋಷ್ಟಕ ೫.೧೯**

| ಕ್ರ. ಸಂ. | ತಾಲೂಕು | ಹಳ್ಳಿಗಳ ಸಂಖ್ಯೆ | | ಹಿಪ್ಪುನೇರಳೆ ಕ್ಷೇತ್ರ (ಹೆಕ್ಟೇರುಗಳಲ್ಲಿ) | |
|---|---|---|---|---|---|
| | | ೧೯೯೯–೦೦ | ೨೦೦೧–೦೨ | ೧೯೯೯–೦೦ | ೨೦೦೧–೦೨ |
| ೧. | ಮಂಡ್ಯ | ೬೪ | ೨೧೭ | ೭೬೬.೯೫ | ೭೫೫.೭೨ |
| ೨. | ಮದ್ದೂರು | ೨೬೭ | ೨೩೯ | ೩೫೨೦.೩೩ | ೩೦೦೭.೫೬ |
| ೩. | ಮಳವಳ್ಳಿ | ೩೩೦ | ೨೫೬ | ೪೭೪೫.೨೬ | ೪೪೨೭.೬೫ |
| ೪. | ಶ್ರೀರಂಗಪಟ್ಟಣ | ೭೨ | ೫೩ | ೨೩೩.೬೦ | ೨೫೯.೯೦ |
| ೫. | ಪಾಂಡವಪುರ | ೧೩೭ | ೧೧೨ | ೨೩೩.೬೦ | ೨೬೩.೪೦ |
| ೬. | ನಾಗಮಂಗಲ | ೯೬ | ೬೨ | ೪೩.೩೪ | ೫೮.೦೩ |
| ೭. | ಕೃಷ್ಣರಾಜಪೇಟೆ | ೧೯೫ | ೧೬೮ | ೫೨೨.೨೬ | ೩೩೮.೨೯ |
| | ಒಟ್ಟು | ೧೧೬೧ | ೧೧೦೭ | ೧೦೦೬೫.೩೪ | ೯೧೧೦.೫೫ |

ಆಧಾರ : ರೇಷ್ಮೆ ಕೃಷಿ ಉಪನಿರ್ದೇಶಕರ ಕಚೇರಿ, ಮಂಡ್ಯ

ಜಿಲ್ಲೆಯಲ್ಲಿ ೨೦೦೨ದ ಮಾರ್ಚ್ ಅಂತ್ಯಕ್ಕೆ ತಾಲೂಕುವಾರು ರೇಷ್ಮೆ ಉದ್ಯಮದಲ್ಲಿ ನಿರತರಾಗಿದ್ದ ಕುಟುಂಬಗಳ ವಿವರಗಳನ್ನು ಮುಂದಿನ ಕೋಷ್ಟಕ ೫.೨೦ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೨೦**

| ತಾಲೂಕು | ಪರಿಶಿಷ್ಟಜಾತಿ | ಪರಿಶಿಷ್ಟಪಂಗಡ | ಅಲ್ಪಸಂಖ್ಯಾತರು | ಇತರೆ | ಒಟ್ಟು |
|---|---|---|---|---|---|
| ೧. ಮಂಡ್ಯ | ೭೮ | ೧೩ | – | ೨೪೪೧ | ೨೫೩೨ |
| ೨. ಮದ್ದೂರು | ೬೯೪ | ೫೨ | – | ೧೧೨೮೬ | ೧೨೦೩೨ |
| ೩. ಮಳವಳ್ಳಿ | ೨೦೧೩ | ೬೪ | ೭೫ | ೧೨೦೨೭ | ೧೪೧೭೯ |
| ೪. ಶ್ರೀರಂಗಪಟ್ಟಣ | ೧೩ | ೧ | ೫ | ೬೫೧ | ೬೭೦ |
| ೫. ಪಾಂಡವಪುರ | ೩೪ | – | ೧೬ | ೧೦೫೬ | ೧೧೦೬ |
| ೬. ನಾಗಮಂಗಲ | ೨೦ | – | – | ೧೭೧ | ೧೯೧ |
| ೭. ಕೃಷ್ಣರಾಜಪೇಟೆ | ೪೬ | ೧೭ | ೪ | ೧೨೯೭ | ೧೩೬೪ |
| ಒಟ್ಟು | ೨೮೯೮ | ೧೪೭ | ೧೦೦ | ೨೮೯೨೯ | ೩೨೦೭೪ |

ಆಧಾರ : ರೇಷ್ಮೆ ಕೃಷಿ ಉಪ ನಿರ್ದೇಶಕರ ಕಚೇರಿ, ಮಂಡ್ಯ

ಮಂಡ್ಯ ಜಿಲ್ಲೆಯಲ್ಲಿ ೨೦೦೨ರ ಮಾರ್ಚ್ ಅಂತ್ಯದಲ್ಲಿದ್ದಂತೆ ರೇಷ್ಮೆಗೂಡಿನ ಪ್ರಮಾಣ ಮತ್ತು ಇಳುವರಿ ಪ್ರಮಾಣದ ವಿವರಗಳನ್ನು ಮುಂದಿನ ಕೋಷ್ಟಕ ೫.೨೧ರಲ್ಲಿ ನೋಡಿ.

**ಕೋಷ್ಟಕ ೫.೨೧**

| ರೇಷ್ಮೆಗೂಡಿನ ಪ್ರಮಾಣ (ಮೆಟ್ರಿಕ್ ಟನ್ ಗಳಲ್ಲಿ) | | ಇಳುವರಿಯ ಪ್ರಮಾಣ ೧೦೦ ಮೊಟ್ಟೆಗೆ (ಕೆ.ಜಿ.ಗಳಲ್ಲಿ) | |
|---|---|---|---|
| ೧. ಮಿಶ್ರತಳಿ | ೬೭೧೦.೯೮೮ | ೧. ಮಿಶ್ರತಳಿ | ೪೬.೯ |
| ೨. ದ್ವಿತಳಿ | ೭೨೧.೩೦೦ | ೨. ದ್ವಿತಳಿ | ೫೦.೦ |
| ಒಟ್ಟು | ೭೪೩೨.೨೮೮ | ೩. ಸಿ ಎಸ್.ಆರ್. | ೫೦.೨ |

ಆಧಾರ : ರೇಷ್ಮೆ ಕೃಷಿ ಉಪನಿರ್ದೇಶಕರ ಕಚೇರಿ, ಮಂಡ್ಯ

ಜಿಲ್ಲೆಯ ವಿವಿಧ ಯೋಜನೆಗಳಡಿಯಲ್ಲಿ ೨೦೦೨ರ ಮಾರ್ಚ್ ಅಂತ್ಯದವರೆಗೆ ಸಾಧಿಸಿದ ಪ್ರಗತಿ ಚಿತ್ರವನ್ನು ಕೋಷ್ಟಕ ೫.೨೨ರಲ್ಲಿ ಕೊಟ್ಟಿದೆ.

**ಕೋಷ್ಟಕ ೫.೨೨**

| ಯೋಜನೆ | ಗುರಿ (ಲಕ್ಷ ರೂ.ಗಳಲ್ಲಿ) | ಸಾಧನೆ (ಲಕ್ಷ ರೂ.ಗಳಲ್ಲಿ) | ಪ್ರತಿಶತ ಸಾಧನೆ |
|---|---|---|---|
| ವಾರ್ಷಿಕ ಯೋಜನೆ | ೨೭.೬೦ | ೨೩.೩೪೮ | ೮೪.೫ |
| ವಿಶೇಷ ಘಟಕ ಯೋಜನೆ | ೭.೦೬ | ೬.೭೯ | ೯೬.೩ |
| ಇಲಾಖಾ ವ್ಯಾಪ್ತಿಯು ವಿಶೇಷ ಘಟಕ ಯೋಜನೆ | ೧.೦೮ | ೧.೨೦ | ೧೧೧ |

ಆಧಾರ : ರೇಷ್ಮೆ ಕೃಷಿ ಉಪ ನಿರ್ದೇಶಕರ ಕಚೇರಿ, ಮಂಡ್ಯ

**ಆಂತರಿಕ ಸಾಧನ ಸೌಲಭ್ಯಗಳು**

ಕೈಗಾರಿಕಾ ಬೆಳವಣಿಗೆಯು ಅಲ್ಲಿ ದೊರಕುವ ಸಂಪನ್ಮೂಲಗಳ ಜೊತೆಗೆ ಆಂತರಿಕ ಸಾಧನ ಸೌಲಭ್ಯಗಳಾದ ಸಾರಿಗೆ, ಸಂಪರ್ಕ, ತಾಂತ್ರಿಕ ತರಬೇತಿ, ಹಣಕಾಸಿನ ನೆರವು, ಕೈಗಾರಿಕಾ ವಸಾಹತು, ಕೈಗಾರಿಕಾ ಕ್ಷೇತ್ರ (ಏರಿಯಾ), ಮಾರುಕಟ್ಟೆ, ವಿದ್ಯುಚ್ಛಕ್ತಿ, ಮೊದಲಾದವುಗಳ ಸೌಕರ್ಯಗಳನ್ನು ಅವಲಂಬಿಸಿವೆ. ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೪೮ ಜಿಲ್ಲೆಯ ನಾಗಮಂಗಲ ತಾಲೂಕಿನಲ್ಲಿ ೨೯ ಕಿ.ಮೀ. ಹಾದುಹೋಗುತ್ತದೆ. ಬೆಂಗಳೂರು–ಮೈಸೂರು ರಾಜ್ಯ ಹೆದ್ದಾರಿ (೧೭) ಯು ಜಿಲ್ಲೆಯ ಮದ್ದೂರು, ಮಂಡ್ಯ ಮತ್ತು ಶ್ರೀರಂಗಪಟ್ಟಣ ತಾಲೂಕುಗಳ ಮೂಲಕ ಹಾದುಹೋಗಿದ್ದರೆ, ರಾಷ್ಟ್ರೀಯ ಹೆದ್ದಾರಿ ೨೦೯ರಲ್ಲಿ ಮಳವಳ್ಳಿ ತಾಲೂಕಿನಲ್ಲಿ ೪೪ ಕಿ. ಮೀ. ಹಾದುಹೋಗಿದೆ. ಜಿಲ್ಲಾ ರಸ್ತೆಗಳು ಜಿಲ್ಲೆಯ ಎಲ್ಲಾ ತಾಲೂಕು ಹಾಗೂ ಮುಖ್ಯ ಪಟ್ಟಣಗಳನ್ನು ಮತ್ತು ಊರುಗಳನ್ನು ಸಂಪರ್ಕಿಸುವ ವ್ಯವಸ್ಥೆ ಒದಗಿಸಿವೆ. ಇವುಗಳ ಜೊತೆಗೆ ಗ್ರಾಮೀಣ ರಸ್ತೆಗಳು ಗ್ರಾಮಾಂತರ ಪ್ರದೇಶಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿವೆ. ಇವೆಲ್ಲವೂ ಒಟ್ಟಿಗೆ ಸೇರಿ ಜಿಲ್ಲೆಗೆ ೮,೩೨೯ ಕಿ.ಮೀ ರಸ್ತೆ ಸೌಲಭ್ಯವನ್ನೊದಗಿಸಿವೆ. ಇವುಗಳಲ್ಲಿ ೫,೭೫೩ ಕಿ.ಮೀ. ಉದ್ದದ ರಸ್ತೆಗಳು ಉತ್ತಮ ಗುಣಮಟ್ಟದ್ದಾಗಿದ್ದು, ಉಳಿದ ೨,೫೫೬ ಕಿ.ಮೀ. ಉದ್ದದ ರಸ್ತೆಗಳು ಕಚ್ಚಾ ರಸ್ತೆಯಾಗಿವೆ. ಬೀದರ್–ಶ್ರೀರಂಗಪಟ್ಟಣದ ರಾಜ್ಯ ಹೆದ್ದಾರಿ ಸಂಖ್ಯೆ ೧೯ ಜಿಲ್ಲೆಗೆ ಮತ್ತೊಂದು ಕಡೆಯಿಂದ ರಸ್ತೆ ಸಾರಿಗೆ ಸೌಲಭ್ಯವನ್ನು ಒದಗಿಸಿದೆ. ಜಿಲ್ಲೆಯು ಬೆಂಗಳೂರು–ಮೈಸೂರು ಮತ್ತು ಮೈಸೂರು–ಹಾಸನ ಬ್ರಾಡ್‌ಗೇಜ್ ರೈಲು ಸಾರಿಗೆ ಸೌಲಭ್ಯವನ್ನೂ ಹೊಂದಿದೆ. ಬೆಂಗಳೂರು–ಮೈಸೂರು ರೈಲು ಸಾರಿಗೆ ಜಿಲ್ಲೆಯ ಮದ್ದೂರು, ಮಂಡ್ಯ, ಪಾಂಡವಪುರ ಮತ್ತು ಶ್ರೀರಂಗಪಟ್ಟಣ ತಾಲೂಕುಗಳ ಮೂಲಕವೂ, ಮೈಸೂರು–ಹಾಸನ ರೈಲುದಾರಿಯು ಶ್ರೀರಂಗಪಟ್ಟಣ ಹಾಗೂ ಕೃಷ್ಣರಾಜಪೇಟೆ ತಾಲೂಕು ಮೂಲಕವೂ ಹಾದುಹೋಗುತ್ತಿದೆ. ಜಿಲ್ಲೆಯಲ್ಲಿ ರೈಲುಸಾರಿಗೆಯ ಉದ್ದ ೮೩ ಕಿ.ಮೀ. ಇದ್ದು, ಆ ಪೈಕಿ ಮಂಡ್ಯ ತಾಲೂಕು ೨೫ ಕಿ.ಮೀ. ರೈಲ್ವೆಮಾರ್ಗವನ್ನು ಹೊಂದಿದೆ. ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ಹಾಗೂ ವಿಮಾನ ಸಾರಿಗೆ ಸೌಲಭ್ಯವಿಲ್ಲದಿದ್ದರೂ, ಸಮೀಪದಲ್ಲೇ ಇರುವ ಬೆಂಗಳೂರಿನ ವಿಮಾನನಿಲ್ದಾಣದ ಸೌಲಭ್ಯವನ್ನು ಪಡೆದುಕೊಳ್ಳಬಹುದಾಗಿದೆ. ಮೈಸೂರಿನ ವಿಮಾನನಿಲ್ದಾಣವು ಬೆಂಗಳೂರಿನ ವಿಮಾನ ನಿಲ್ದಾಣಕ್ಕಿಂತ ಸಮೀಪವಿದ್ದರೂ, ಅದು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸದೇ ಇರುವುದರಿಂದ ಅದರ ಉಪಯೊಗ ಸದ್ಯಕ್ಕೆ ಲಭ್ಯವಿರುವುದಿಲ್ಲ. ಜಿಲ್ಲೆಯಲ್ಲಿ ೨೦೦೨ರ ಮಾರ್ಚ್ ಅಂತ್ಯಕ್ಕೆ ೩೬೫ ಅಂಚೆ ಕಚೇರಿಗಳು, ೧೩೭ ಟೆಲಿಗ್ರಾಫಿಕ್ ಕಚೇರಿಗಳು, ೬೫ ದೂರವಾಣಿ ವಿನಿಮಯ ಕೇಂದ್ರಗಳು ಹಾಗೂ ೪೧,೫೦೦ ದೂರವಾಣಿ ಸಂಪರ್ಕ ಸೌಲಭ್ಯವನ್ನೊದಗಿಸಿವೆ.

ಜಿಲ್ಲೆಯ ಸಣ್ಣ ಕೈಗಾರಿಕೆಗಳಿಗೆ ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳು, ಕೈಗಾರಿಕಾ ಸಹಕಾರಿ ಬ್ಯಾಂಕುಗಳು, ಕರ್ನಾಟಕ ರಾಜ್ಯ ಹಣಕಾಸು ನಿಗಮ, ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಮತ್ತು ನಬಾರ್ಡ್ ಸಂಸ್ಥೆಗಳು, ವಿವಿಧ ಅವಧಿಯ ಸಾಲಗಳ ಅಗತ್ಯವನ್ನು ಪೂರೈಸುತ್ತಿವೆ. ೧೯೯೦ರಲ್ಲಿ ಸ್ಥಾಪಿತವಾದ ಭಾರತದ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕು, ಮರುಹಣಕಾಸು ಸೌಲಭ್ಯವನ್ನೊದಗಿಸುತ್ತಿದೆ. ರಾಜ್ಯ ಹಣಕಾಸು ನಿಗಮವು ಏಕಗವಾಕ್ಷಿ ಪರಿಯೋಜನೆ ಮತ್ತು ರಾಷ್ಟ್ರೀಯ ಈಕ್ವಿಟಿ ನಿಧಿಯ ಮೂಲಕ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ದೀರ್ಘಾವಧಿ ಸಾಲಸೌಲಭ್ಯವನ್ನೊದಗಿಸುತ್ತಿದೆ. ಭಾರತದ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕು ಕೈಗಾರಿಕೆಗಳ ಆಧುನೀಕರಣ, ಉದ್ಯಮಶೀಲತೆಯ ಆಭಿವೃದ್ಧಿ, ಮಹಿಳೆಯರಿಗೆ ಮೀಸಲಿರುವ ಯೋಜನೆ ಮೊದಲಾದವುಗಳಿಗೆ ಹಣಕಾಸು ಸೌಲಭ್ಯವನ್ನು ನೀಡುತ್ತಿದೆ. ಜಿಲ್ಲೆಯಲ್ಲಿರುವ ಇಂಜಿನಿಯರಿಂಗ್ ಕಾಲೇಜು, ಪಾಲಿಟೆಕ್ನಿಕ್ ಕಾಲೇಜು, ಒಂದು ಕರಕುಶಲ ತರಬೇತಿ ಸಂಸ್ಥೆ ಮತ್ತು ೧೪ ಕೈಗಾರಿಕಾ ತರಬೇತಿ ಸಂಸ್ಥೆಗಳು ಯುವ ಪೀಳಿಗೆಗೆ ತಾಂತ್ರಿಕ ತರಬೇತಿ ಕಾರ್ಯವನ್ನು ನಿರ್ವಹಿಸುತ್ತಿರುವುದರ ಜೊತೆಗೆ

ಉತ್ಪಾದನಾ ಕಾರ್ಯದಲ್ಲಿ ತೊಡಗುವಂತೆ ಪ್ರೇರೇಪಿಸಿವೆ. ಈ ಅಂಶಗಳನ್ನು ಮನಗಂಡ ಸರ್ಕಾರವು ಜಿಲ್ಲೆಯಲ್ಲಿ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸುವುದರ ಜೊತೆಗೆ ಖಾಸಗಿಯಾಗಿಯೂ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲು ಅನುಮತಿ ನೀಡಿದೆ. ಕೈಗಾರಿಕಾ ಬೆಳವಣಿಗೆಯ ದಾರಿದೀಪದಂತಿರುವ ಜಿಲ್ಲಾ ಕೈಗಾರಿಕಾ ಕೇಂದ್ರ, ಸಣ್ಣ ಕೈಗಾರಿಕೆಗಳ ಸೇವಾ ಸಂಸ್ಥೆ, ರಾಷ್ಟ್ರೀಯ ಕೈಗಾರಿಕಾ ಅಭಿವೃದ್ಧಿ ನಿಗಮ ಮತ್ತು ಟೆಕ್ನಿಕಲ್ ಕನ್ಸಲ್ಟೆನ್ಸ್ ಸರ್ವಿಸ್ ಆರ್ಗನೈಸೇಷನ್ ಆಫ್ ಕರ್ನಾಟಕ, ಇವು ಜಿಲ್ಲೆಯ ಆರ್ಥಿಕ ಮತ್ತು ತಾಂತ್ರಿಕ ಸಮೀಕ್ಷೆ ನಡೆಸಿ ಪ್ರಗತಿಶೀಲ ಕೈಗಾರಿಕೋದ್ಯಮಿಗಳಿಗೆ ಮಾರ್ಗದರ್ಶನ ನೀಡುತ್ತಿವೆ.

ಮಾರುಕಟ್ಟೆ ಸೌಲಭ್ಯಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಪ್ರಾರಂಭಗೊಂಡಿರುವ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಯಂತ್ರ ಮತ್ತು ಯಂತ್ರೋಪಕರಣಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಿಂದ ಪಡೆದವುಗಳಾಗಿವೆ. ಇವುಗಳಲ್ಲಿ ಉತ್ಪಾದಿಸಲ್ಪಡುವ ಸರಕುಗಳು ಸಾಮಾನ್ಯವಾಗಿ ರಾಷ್ಟ್ರೀಯ ಮಾರುಕಟ್ಟೆಯ ವ್ಯಾಪ್ತಿಯನ್ನು ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯ ಸೌಲಭ್ಯವನ್ನೂ ಪಡೆದುಕೊಂಡಿವೆ. ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳು ಹಾಗೂ ಗೃಹ ಕೈಗಾರಿಕೆಗಳಿಗೆ ಸ್ಥಳೀಯ ಮಾರುಕಟ್ಟೆ ಪ್ರಮುಖವಾದುದು. ಅವು, ರಾಷ್ಟ್ರೀಯ ಮಾರುಕಟ್ಟೆಯ ಸೌಲಭ್ಯವನ್ನು ಪಡೆದುಕೊಳ್ಳಬೇಕಾದರೆ ಜಿಲ್ಲೆಯಲ್ಲಿ ಸ್ಥಾಪಿತವಾಗಿರುವ ಅನೇಕ ಮಾರುಕಟ್ಟೆ ಸಂಸ್ಥೆಗಳ ಸಂಪರ್ಕವನ್ನು ಪಡೆದುಕೊಳ್ಳಬೇಕಾದುದು ಅತ್ಯಂತ ಅವಶ್ಯಕ. ಅದರಂತೆ ಜಿಲ್ಲಾ ಪೂರೈಕೆ ಮತ್ತು ಮಾರುಕಟ್ಟೆ ಸಂಘ, ಖಾದಿ ಭಂಡಾರ, ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮ, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮೊದಲಾದವುಗಳು ತಮ್ಮ ವ್ಯಾಪ್ತಿಗೊಳಪಡುವ ಸಣ್ಣ ಮತ್ತು ಗೃಹ ಕೈಗಾರಿಕೆಗಳಿಗೆ ಬೇಕಾಗುವ ಕಚ್ಚಾ ವಸ್ತುಗಳನ್ನು ಪೂರೈಸಲು ಮತ್ತು ಸಿದ್ಧ ವಸ್ತುಗಳನ್ನು ಮಾರಾಟ ಮಾಡಲು ನೆರವನ್ನೊದಗಿಸುತ್ತಿವೆ. ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿ. ಮತ್ತು ಕೇಂದ್ರ ಗೃಹಕೈಗಾರಿಕೆಗಳ ಮಳಿಗೆ ಮೊದಲಾದವು ಅಂತರರಾಷ್ಟ್ರೀಯ ಮಾರುಕಟ್ಟೆ ಸೌಲಭ್ಯವನ್ನು ಕಲ್ಪಿಸಿಕೊಡುತ್ತವೆ. ಇವುಗಳ ಜೊತೆಗೆ ಅನೇಕ ಗ್ರಾಹಕರ ಸಹಕಾರ ಸಂಘಗಳು ಹಾಗೂ ವಾರದ ಸಂತೆಗಳು, ಜಿಲ್ಲೆಯ ಕೈಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯವನ್ನು ಕಲ್ಪಿಸಿಕೊಟ್ಟಿವೆ.

## ಕೈಗಾರಿಕಾ ವಸಾಹತು ಮತ್ತು ಕೈಗಾರಿಕಾ ಕ್ಷೇತ್ರ

ಕೈಗಾರಿಕಾ ಬೆಳವಣಿಗೆಗೆ ಪೂರಕ ಸಾಧನಗಳಾದ ನಿವೇಶನಗಳ ಲಭ್ಯತೆ, ವಿದ್ಯುಚ್ಛಕ್ತಿ, ನೀರು, ಸಂಪರ್ಕ ಸಾಧನ, ಮೊದಲಾದ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮವು ಕಳೆದ ೨೦ ವರ್ಷಗಳಿಂದೀಚೆಗೆ ಜಿಲ್ಲೆಯ ಕೆಲವು ಆಯ್ದ ಪ್ರದೇಶಗಳಲ್ಲಿ ಕೈಗಾರಿಕಾ ವಸಾಹತುಗಳ (ಇಂಡಸ್ಟ್ರಿಯಲ್ ಎಸ್ಟೇಟ್) ನಿರ್ಮಾಣ ಮತ್ತು ವಿತರಣಾ ಕಾರ್ಯವನ್ನು ನಿರ್ವಹಿಸುತ್ತಿದೆ. ಜಿಲ್ಲಾಕೇಂದ್ರವಾದ ಮಂಡ್ಯದ ಹಂತ ೧ ರಲ್ಲಿ ೪೪ ಷೆಡ್ಡುಗಳು, ಹಂತ ೨ರಲ್ಲಿ ೩೮ ಷೆಡ್ಡುಗಳನ್ನು ಸುಮಾರು ೨೦ ವರ್ಷಗಳ ಹಿಂದೆಯೇ ನಿರ್ಮಿಸಿ ವಿತರಣೆ ಮಾಡಿದೆ. ಮದ್ದೂರು ತಾಲೂಕಿನ ಸೋಮನಹಳ್ಳಿಯಲ್ಲಿ ಎಂಟು ಷೆಡ್ಡುಗಳನ್ನು ಮತ್ತು ಪಾಂಡವಪುರ ತಾಲೂಕಿನ ಹಾರೋಹಳ್ಳಿಯಲ್ಲಿ ಎಂಟು ಷೆಡ್ಡುಗಳನ್ನು ೧೯೯೨ರಲ್ಲಿ ನಿರ್ಮಿಸಿ ವಿತರಿಸಲಾಗಿದೆ. ನಾಗಮಂಗಲದಲ್ಲಿ ಎಂಟು ಷೆಡ್ಡುಗಳನ್ನು ೧೯೯೬ರಲ್ಲಿ ನಿರ್ಮಿಸಿ ವಿತರಣೆ ಮಾಡಲಾಗಿದೆ. ಈ ಕೈಗಾರಿಕಾ ವಸಾಹತುಗಳಲ್ಲಿ ಸಾಮಾನ್ಯ ಸೌಲಭ್ಯ ಕೇಂದ್ರ (ಕಾರ್ಯಾಗಾರ)ವಿರುವುದರಿಂದ ಸಣ್ಣ ಪ್ರಮಾಣದ ಕೈಗಾರಿಕೆಗಳು ಕನಿಷ್ಟ ವೆಚ್ಚದಲ್ಲಿ ತಮ್ಮ ಯಂತ್ರಗಳನ್ನು ದುರಸ್ತಿ ಮಾಡಿಸಿಕೊಳ್ಳಬಹುದಾಗಿದೆ.

ಕರ್ನಾಟಕ ಕೈಗಾರಿಕಾ ಕ್ಷೇತ್ರಾಭಿವೃದ್ಧಿ ಮಂಡಳಿಯು ಮಂಡ್ಯ ಜಿಲ್ಲೆಯ ಎರಡು ಕೈಗಾರಿಕಾ ಕ್ಷೇತ್ರಗಳಲ್ಲಿ ನಿವೇಶನಗಳನ್ನು ನಿರ್ಮಿಸಿ ವಿತರಣೆ ಮಾಡಿದೆ. ಮದ್ದೂರು ತಾಲೂಕಿನ ಸೋಮನಹಳ್ಳಿಯಲ್ಲಿ ೧೯೭೪ರಲ್ಲಿ ೧೪೦ ಎಕರೆ ಭೂಮಿಯನ್ನು ವಶಕ್ಕೆ ತೆಗೆದುಕೊಂಡು ೯೩ ಫ್ಲಾಟುಗಳನ್ನು ನಿರ್ಮಿಸಿ ವಿತರಣೆ ಮಾಡಿದೆ. ಮಂಡ್ಯ ತಾಲೂಕಿನ ತೂಬಿನಕೆರೆ ಗ್ರಾಮದಲ್ಲಿ ೧೯೪೮ರಲ್ಲಿ ೧೩೫ ಎಕರೆ ಜಮೀನನ್ನು ವಶಪಡಿಸಿಕೊಂಡು ೧೩೦ ಫ್ಲಾಟುಗಳನ್ನು ನಿರ್ಮಿಸಿ ವಿತರಿಸಿದೆ.

ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮವು ಮಂಡ್ಯ ಜಿಲ್ಲೆಯಲ್ಲಿ ೨೦೦೦ದ ಮಾರ್ಚ್ ಅಂತ್ಯದವರೆಗೆ ನಿರ್ಮಿಸಿ ವಿತರಿಸಿರುವ ಕೈಗಾರಿಕಾ ವಸಾಹತುಗಳ ವಿವರಗಳನ್ನು ಮುಂದಿನ ಕೋಷ್ಟಕ ೫.೨೩ರಲ್ಲಿ ನೀಡಿದೆ.

**ಕೋಷ್ಟಕ ೫.೨೩**

| ತಾಲೂಕು | ಸ್ಥಳ | ಷೆಡ್ಡುಗಳ ಸಂಖ್ಯೆ | ನಮೂನೆ (ಮಾದರಿ) | ಮೀಟರ್.ಗಳಲ್ಲಿ | ನಿರ್ಮಾಣದ ವರ್ಷ |
|---|---|---|---|---|---|
| ಮಂಡ್ಯ | ಹಂತ ೧ | ೪೪ | ಬಿ–೪ | ೫೦ X ೫೦ | ೨೦ ವರ್ಷಗಳ ಹಿಂದೆ |
| | | | ಸಿ–೨೦ | ೩೦ X ೫೦ | |
| | | | ಡಿ–೧೨ | ೨೫ X೩೦ | |
| | | | ಎಸ್.ಎಂ.–೮ | ೨೪ X೨೦ | |
| | ಹಂತ ೨ | ೩೮ | ಬಿ–೬ | ೫೦ X ೫೦ | ೧೨ ವರ್ಷಗಳ ಹಿಂದೆ |
| | | | ಸಿ–೧೪ | ೩೦ X ೫೦ | |
| | | | ಡಿ–೪ | ೨೫ X೩೦ | |
| | | | ಎಸ್.ಎಂ.–೪ | ೨೪ X೨೦ | |
| ಶ್ರೀರಂಗಪಟ್ಟಣ | ಗಂಜಾಂ | ೩೮ | ಸಿ–೨೦ | ೩೦ X ೫೦ | ೧೦ ವರ್ಷಗಳ ಹಿಂದೆ |
| | | | ಡಿ–೬ | ೨೫ X೩೦ | |
| | | | ಎಸ್.ಎಂ.–೮ | ೨೪ X೨೦ | |
| | | | ಎಂ–೪ | ೧೨ X೨೦ | |
| ಮದ್ದೂರು | ಸೋಮನಹಳ್ಳಿ | ೮ | ಸಿ–೨ | ೩೦ X ೫೦ | ೧೯೯೨ |
| | | | ಎಸ್.ಎಂ.–೬ | ೨೪ X೨೦ | |
| ಪಾಂಡವಪುರ | ಹಾರೋಹಳ್ಳಿ | ೮ | ಸಿ–೨ | ೩೦ X೫೦ | ೧೯೯೨ |
| | | | ಎಸ್.ಎಂ.–೬ | ೨೪ X೨೦ | |
| ನಾಗಮಂಗಲ | ನಾಗಮಂಗಲ | ೮ | ಸಿ–೪ | ೩೦ X ೫೦ | ೧೯೯೬ |

ಆಧಾರ : ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಡ್ಯ

ಮಂಡ್ಯ ಜಿಲ್ಲೆಯಲ್ಲಿ ೨೦೦೦ದ ಮಾರ್ಚ್ ಅಂತ್ಯದವರೆಗೆ ನಿರ್ಮಾಣಗೊಂಡಿರುವ ಕೈಗಾರಿಕಾ ಕ್ಷೇತ್ರಗಳ (ಇಂಡಸ್ಟ್ರಿಯಲ್ ಏರಿಯಾಗಳ) ವಿವರವನ್ನು ಮುಂದಿನ ಕೋಷ್ಟಕ ೫.೨೪ ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೨೪**

| ಕ್ಷೇತ್ರದ ಹೆಸರು ಮತ್ತು ತಾಲೂಕು | ನಿರ್ಮಾಣಗೊಂಡ ವರ್ಷ | ವಶಪಡಿಸಿಕೊಂಡ ಭೂಮಿಯ ವಿಸ್ತೀರ್ಣ (ಎಕರೆಗಳಲ್ಲಿ) | ಹಂಚಿಕೆಯೋಗ್ಯ ಕ್ಷೇತ್ರ (ಎಕರೆಗಳಲ್ಲಿ) | ಹಂಚಿಕೆಯಾಗಿರುವ ಕ್ಷೇತ್ರ (ಎಕರೆಗಳಲ್ಲಿ) | ಹಿಂದಿನ ಬಾಕಿ |
|---|---|---|---|---|---|
| ತೂಬಿನಕೆರೆ ಮಂಡ್ಯ ತಾ. | ೧೯೮೪ | ೧೩೫ | ೧೧೬ | ೧೧೬ | ಇರುವುದಿಲ್ಲ |
| ಸೋಮನ ಹಳ್ಳಿ ಮದ್ದೂರು ತಾ. | ೧೯೭೪ | ೧೪೦ | ೧೨೯ | ೧೨೯ | ಇರುವುದಿಲ್ಲ |

ಜಿಲ್ಲೆಯಲ್ಲಿ ೨೦೦೦ದ ಮಾರ್ಚ್‌ವರೆಗೆ ತೆರೆಯಲಾದ ಕೈಗಾರಿಕಾ ಘಟಕಗಳ ಸಂಖ್ಯೆ, ಕಾರ್ಯಗತವಾಗಿರುವ ಘಟಕಗಳ ಸಂಖ್ಯೆಗಳ ವಿವರವನ್ನು ಮುಂದಿನ ಕೋಷ್ಟಕ ೫.೨೫ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೨೫**

| ಕ್ಷೇತ್ರದ ಹೆಸರು ಮತ್ತು ತಾಲೂಕು | ನಿರ್ಮಾಣಗೊಂಡ ಫ್ಲ್ಯಾಟುಗಳ ಸಂಖ್ಯೆ | ಹಂಚಿಕೆಯಾದ ಫ್ಲ್ಯಾಟುಗಳ ಸಂಖ್ಯೆ | ಬಾಕಿ ಉಳಿದಿರುವ ಫ್ಲ್ಯಾಟುಗಳ ಸಂಖ್ಯೆ |
|---|---|---|---|
| ತೂಬಿನಕೆರೆ, ಮಂಡ್ಯ ತಾ. | ೧೩೦ | ೧೩೦ | ಇರುವುದಿಲ್ಲ |
| ಸೋಮನಹಳ್ಳಿ ಮದ್ದೂರು ತಾ. | ೯೩ | ೯೩ | ಇರುವುದಿಲ್ಲ |

| ಕ್ಷೇತ್ರದ ಹೆಸರು ಮತ್ತು ತಾಲೂಕು | ಕೈಗಾರಿಕಾ ಕ್ಷೇತ್ರವು ಪಡೆದಿರುವ ಕೈಗಾರಿಕಾ ಘಟಕಗಳ ಸಂಖ್ಯೆ | ಕಾರ್ಯರೂಪ ಗೊಂಡಿರುವ ಕೈಗಾರಿಕಾ ಘಟಕಗಳ ಸಂಖ್ಯೆ | ಉತ್ಪಾದನಾ ಕಾರ್ಯದಲ್ಲಿ ತೊಡಗಿರುವ ಕೈಗಾರಿಕಾ ಘಟಕಗಳ ಸಂಖ್ಯೆ | ರೋಗಗ್ರಸ್ಥ ಘಟಕಗಳ ಸಂಖ್ಯೆ | ಸ್ಥಾಪನಾ ಕಾರ್ಯದಲ್ಲಿರುವ ಘಟಕಗಳ ಸಂಖ್ಯೆ | ಕಾರ್ಯಾರಂಭ ಗೊಳ್ಳದಿರುವ ಘಟಕಗಳ ಸಂಖ್ಯೆ |
|---|---|---|---|---|---|---|
| ತೂಬಿನಕೆರೆ, ಮಂಡ್ಯ ತಾ. | ೯೨ | ೩೨ | ೨೮ | ೪ | ೧೪ | ೪೬ |
| ಸೋಮನಹಳ್ಳಿ ಮದ್ದೂರು ತಾ. | ೮೦ | ೪೪ | ೩೨ | ೧೨ | ೯ | ೨೭ |

ಆಧಾರ : ಜಿಲ್ಲಾ ಕೈಗಾರಿಕಾ ಕೇಂದ್ರ ಮಂಡ್ಯ.

## ವಿಶ್ವ ಕಾರ್ಯಕ್ರಮದಡಿ ನಿರ್ಮಿಸಲಾದ ಷೆಡ್ಡುಗಳು

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ಜಿಲ್ಲೆಯಲ್ಲಿ ವಿಶ್ವ ಕಾರ್ಯಕ್ರಮದಡಿ ೫೦ ಷೆಡ್ಡುಗಳನ್ನು ನಿರ್ಮಿಸಿ ವಿತರಿಸಿದೆ. ಅವುಗಳ ತಾಲೂಕುವಾರು ಹಂಚಿಕೆ ಈ ರೀತಿ ಇದೆ. ಆವರಣದಲ್ಲಿರುವುದು ಷೆಡ್ಡುಗಳ ಸಂಖ್ಯೆ ಕೃಷ್ಣರಾಜಪೇಟೆ (೧೧), ಮದ್ದೂರು (೭), ಮಳವಳ್ಳಿ (೫), ಮಂಡ್ಯ (೫), ನಾಗಮಂಗಲ (೯), ಪಾಂಡವಪುರ (೬) ಮತ್ತು ಶ್ರೀರಂಗಪಟ್ಟಣ (೭).

**ತರಬೇತಿ ಸಂಸ್ಥೆಗಳು**

ಕೈಗಾರಿಕೀಕರಣವು ಪ್ರಧಾನವಾಗಿ ಶಿಕ್ಷಣ ಮತ್ತು ತಾಂತ್ರಿಕ ತರಬೇತಿ ಪಡೆದವರನ್ನು ಅವಲಂಬಿಸಿದೆ. ತರಬೇತಿ ಸಂಸ್ಥೆಗಳು ಸ್ಥಳೀಯ ವಿದ್ಯಾವಂತ ಯುವಕ, ಯುವತಿಯರಿಗೆ ತಾಂತ್ರಿಕ ತರಬೇತಿಯನ್ನು ಒದಗಿಸುವುದರ ಜೊತೆಗೆ ಫಲಪ್ರದ ಉತ್ಪಾದನಾ ಕಾರ್ಯದಲ್ಲಿ ತೊಡಗುವಂತೆ ಮಾಡುತ್ತವೆ. ಇದನ್ನು ಮನಗಂಡ ಸರ್ಕಾರವು ತರಬೇತಿ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡುತ್ತಿದೆ. ತರಬೇತಿ ಸಂಸ್ಥೆಗಳು ಕುಶಲಕರ್ಮಿಗಳಿಗೆ ಮತ್ತು ತಾಂತ್ರಿಕಾಸಕ್ತ ವಿದ್ಯಾರ್ಥಿಗಳಿಗೆ ತಮ್ಮ ನೈಪುಣ್ಯತೆಯನ್ನು ಹೆಚ್ಚಿಸಿಕೊಳ್ಳಲು ಮತ್ತು ಆಧುನಿಕ ಸಾಧನ ಸಲಕರಣೆಗಳನ್ನು ಉಪಯೋಗಿಸಲು ತರಬೇತಿಯನ್ನು ನೀಡುತ್ತವೆ. ಇದರಿಂದಾಗಿ ಯುವಕರು ಸ್ವಯಂ ಉದ್ಯೋಗ ಕೈಗೊಳ್ಳಲು ಹಾಗೂ ಕೈಗಾರಿಕೆ ಅಥವಾ ಇತರೆ ಉದ್ದಿಮೆಗಳಲ್ಲಿ ಉದ್ಯೋಗ ಪಡೆಯಲು ಸಹಾಯಕವಾಗುವುದು. ಮಂಡ್ಯ ಜಿಲ್ಲೆಯಲ್ಲಿ ೨೦೦೦ದ ಮಾರ್ಚ್ ಅಂತ್ಯದಲ್ಲಿ ಒಂದು ಕುಶಲಕರ್ಮಿ ತರಬೇತಿ ಸಂಸ್ಥೆ ಮತ್ತು ೧೪ ಕೈಗಾರಿಕಾ ತರಬೇತಿ ಸಂಸ್ಥೆಗಳು ಸ್ಥಳೀಯ ಆಸಕ್ತ ಯುವ ಪೀಳಿಗೆಗೆ ತಾಂತ್ರಿಕ ತರಬೇತಿಯನ್ನು ನೀಡುವುದರಲ್ಲಿ ನಿರತವಾಗಿದ್ದವು.

**ಕುಶಲಕರ್ಮಿ ತರಬೇತಿ ಸಂಸ್ಥೆ, ನಾಗಮಂಗಲ**

ಈ ಸಂಸ್ಥೆಯು ೧೯೫೬ರ ಸೆಪ್ಟೆಂಬರ್ ೨೯ರಂದು ಆರಂಭಗೊಂಡಿತು. ಇದಕ್ಕೆ ಜಿಲ್ಲೆಯ ಎಲ್ಲಾ ಕ್ಷೇತ್ರಾಭಿವೃದ್ಧಿ ಕಚೇರಿಗಳಿಂದ ಅಭ್ಯರ್ಥಿಗಳು ನಿಯೋಜಿಸಲ್ಪಡುತ್ತಿದ್ದರು. ಈ ಸಂಸ್ಥೆಯು ಕುಲುಮೆ, ಮರಗೆಲಸ, ಹತ್ತಿ ಮತ್ತು ಉಣ್ಣೆ ಬಟ್ಟೆ ನೇಯ್ಗೆ, ಪ್ರತಿಮೆಗಳ ತಯಾರಿಕೆ, ಹಿತ್ತಾಳೆ ಸಾಮಾನುಗಳ ತಯಾರಿಕೆ ಮತ್ತು ಹೊಲಿಗೆ, ಇವುಗಳಿಗೆ ಸಂಬಂಧಿಸಿದ ತರಬೇತಿ ನೀಡುತ್ತಿತ್ತು. ಇಲ್ಲಿ ಪ್ರವೇಶ ಪಡೆಯುವ ಅಭ್ಯರ್ಥಿಗಳ ವಯೋಮಿತಿ ೧೪ ರಿಂದ ೩೦ ವರ್ಷದೊಳಗಿದ್ದು, ಕನಿಷ್ಟ ಪ್ರಾಥಮಿಕ ನಾಲ್ಕನೇ ತರಗತಿಯಲ್ಲಿ ತೇರ್ಗಡೆ ಹೊಂದಿದವರಾಗಿರಬೇಕಾಗಿತ್ತು. ತರಬೇತಿಯ ಕಾಲಾವಧಿ ೧೮ ತಿಂಗಳು ಆಗಿದ್ದಿತು. ಆನಂತರ ಆರು ತಿಂಗಳ ಕಾಲ ಆಂತರಿಕ ಸೇವಾ ತರಬೇತಿಯನ್ನು ಯಾವುದಾದರೂ ಮಾದರಿ ಕಾರ್ಯಾಗಾರ, ಫ್ಯಾಕ್ಟರಿ, ಅಥವಾ ಖಾಸಗಿ ಸಂಸ್ಥೆಯಲ್ಲಿ ಪಡೆಯಬೇಕಾಗಿತ್ತು. ತರಬೇತಿ ಪಡೆಯುತ್ತಿದ್ದವರು ತಮ್ಮ ತರಬೇತಿ ಕಾಲಾವಧಿಯಲ್ಲಿ ವಿಷಯಗಳಿಗನುಗುಣವಾಗಿ ಮಾಸಿಕ ರೂ.೨೦ ರಿಂದ ರೂ.೩೦ ಸ್ಟೈಫಂಡ್ ಪಡೆಯುತ್ತಿದ್ದರು. ಪ್ರಸ್ತುತ ಕಮ್ಮಾರಿಕೆ, ಬಡಗಿ ಕೆಲಸ, ಹಿತ್ತಾಳೆ ಕೆಲಸ, ಹತ್ತಿನೇಯ್ಗೆ ಮತ್ತು ಉಣ್ಣೆನೇಯ್ಗೆಗಳಿಗೆ ಸಂಬಂಧಿಸಿದಂತೆ ತರಬೇತಿ ನೀಡಲಾಗುತ್ತಿದೆ. ಪ್ರತೀ ವಿಷಯಕ್ಕೂ ೧೫ ರಿಂದ ೨೫ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು. ತರಬೇತಿಯ ಅವಧಿ ಆರು ತಿಂಗಳಿಂದ ೧೮ ತಿಂಗಳುಗಳವರೆಗೆ ಇರುವುದು. ಹೆಚ್ಚಿನ ತರಬೇತಿ ಅಪೇಕ್ಷಿಸುವವರನ್ನು ಮೈಸೂರಿನಲ್ಲಿರುವ ಶ್ರೀ ಜಯಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗೆ ಕಳುಹಿಸಿಕೊಡಲಾಗುವುದು. ತರಬೇತಿಯ ಕಾಲಾವಧಿಯಲ್ಲಿ ಪ್ರತಿ ಅಭ್ಯರ್ಥಿಗೂ ೩೦೦ ರೂ.ಗಳ ಶಿಷ್ಯವೇತನ ನೀಡಲಾಗುತ್ತದೆ. ಇಲ್ಲಿ ತರಬೇತಿ ಪಡೆಯುವ ಅಭ್ಯರ್ಥಿಗಳು ೧೮ ವರ್ಷದಿಂದ ೩೫ ವರ್ಷದೊಳಗಿನ ವಯೋಮಿತಿಯೊಳಗಿರಬೇಕು ಮತ್ತು ಕನಿಷ್ಟ ೫ನೇ ತರಗತಿಯಲ್ಲಿ ತೇರ್ಗಡೆ ಹೊಂದಿದವರಾಗಿರಬೇಕು. ಈ ಕುಶಲಕರ್ಮಿ ತರಬೇತಿ ಸಂಸ್ಥೆಯಲ್ಲಿ ೧೯೬೦ ರಿಂದ ೨೦೦೦ದವರೆಗೆ ಸುಮಾರು ೨೦೦೦ ಅಭ್ಯರ್ಥಿಗಳು ತರಬೇತಿ ಪಡೆದಿದ್ದು, ಅವರಲ್ಲಿ ಪ್ರತಿಶತ ೫೦ ರಷ್ಟು ಸ್ವಯಂ ಉದ್ಯೋಗಿಗಳಾಗಿಯೂ, ಉಳಿದು ೫೦ ರಷ್ಟು ಅಭ್ಯರ್ಥಿಗಳು ಸರ್ಕಾರದ ವಿವಿಧ ಇಲಾಖೆಗಳಲ್ಲಿಯೂ ಕಾರ್ಯನಿರ್ವಹಿಸುತ್ತಿರುವರು. ಈ ಸಂಸ್ಥೆಯಲ್ಲಿ ೧೯೯೫-೯೬ರಿಂದ ೧೯೯೯-೨೦೦೦ನೇ ಸಾಲಿನವರೆಗೆ ೪೩ ಪುರುಷರೂ ಮತ್ತು ೮೬ ಸ್ತ್ರೀಯರೂ ಸೇರಿ ಒಟ್ಟಿಗೆ ೧೨೯ ಅಭ್ಯರ್ಥಿಗಳು ತರಬೇತಿ ಪಡೆದಿರುವರು. ಇದೇ ಕಾಲಾವಧಿಯಲ್ಲಿ ಈ ಸಂಸ್ಥೆಯು ೫೮,೭೫೪ ರೂ.ಗಳ ಕಚ್ಚಾವಸ್ತುಗಳನ್ನು ಕೊಂಡು

ಸಿದ್ಧವಸ್ತುಗಳನ್ನು ೬೨,೭೧೯ ರೂ.ಗಳಿಗೆ ಮಾರಾಟ ಮಾಡಿದೆ. ಈ ಸಂಸ್ಥೆಯು ೧೯೬೦ರಿಂದ ೧೯೮೬ರವರೆಗೆ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಅಧೀನದಲ್ಲೂ ಮತ್ತು ೧೯೮೭ರಿಂದ ಮಂಡ್ಯ ಜಿಲ್ಲಾ ಪಂಚಾಯತ್ ಅಧೀನದಲ್ಲೂ ಕಾರ್ಯನಿರ್ವಹಿಸುತ್ತಾ ಬಂದಿದೆ.

## ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ

ಆಧುನಿಕ ಉಪಕರಣಗಳನ್ನು ಹಾಗೂ ರಾಸಾಯನಿಕಗಳನ್ನು ಬಳಕೆ ಮಾಡಿ ಚರ್ಮ ಹದ ಮಾಡುವುದರ ಬಗ್ಗೆ ತರಬೇತಿಯನ್ನು ನೀಡುವುದಕ್ಕಾಗಿ ಚರ್ಮ ಉದ್ದಿಮೆದಾರರ ತರಬೇತಿ ಕೇಂದ್ರವನ್ನು ೧೯೮೩–೮೪ರಲ್ಲಿ ಮಳವಳ್ಳಿಯಲ್ಲಿ ಸ್ಥಾಪಿಸಲಾಗಿದೆ. ಇಲ್ಲಿ ಚರ್ಮದ ಪಾದರಕ್ಷೆ ಹಾಗೂ ಚರ್ಮದ ಸಿದ್ಧವಸ್ತುಗಳನ್ನು ತಯಾರು ಮಾಡುವ ವೃತ್ತಿಯಲ್ಲಿ ತರಬೇತಿ ನೀಡಲಾಗುವುದು. ತರಬೇತಿದಾರರು ಹಿಂದುಳಿದ ವರ್ಗ ಇಲ್ಲವೇ ಪರಿಶಿಷ್ಟ ವರ್ಗದವರಾಗಿದ್ದು, ೧೮ ರಿಂದ ೪೦ ವರ್ಷದವರೆಗಿನ ವಯೋಮಿತಿ ಹೊಂದಿದವರಾಗಿರಬೇಕು. ತರಬೇತಿಯ ಅವಧಿ ವಿಷಯಕ್ಕನುಗುಣವಾಗಿ ಮೂರರಿಂದ ಆರು ತಿಂಗಳವರೆಗೆ ಇರುತ್ತದೆ. ಈ ಕೇಂದ್ರದಲ್ಲಿ ಪ್ರತೀವರ್ಷ ೩೦ ರಿಂದ ೬೦ ಜನರಿಗೆ ತರಬೇತಿ ನೀಡಲಾಗುವುದು.

## ವಿನ್ಯಾಸ ತರಬೇತಿ ಕೇಂದ್ರ

ಕೈಮಗ್ಗದ ಬಟ್ಟೆಗಳಿಗೋಸ್ಕರ ವಿನ್ಯಾಸ ತರಬೇತಿಯನ್ನೊದಗಿಸುವ ಸಲುವಾಗಿ ಕೈಮಗ್ಗ ಅಭಿವೃದ್ಧಿ ಆಯುಕ್ತರಿಂದ ಒಂದು ಕೈಮಗ್ಗ ಬಟ್ಟೆಗಳ ವಿನ್ಯಾಸ ತರಬೇತಿ ಕೇಂದ್ರವನ್ನು ತಲಗವಾಡಿಯಲ್ಲಿ ಸ್ಥಾಪಿಸಲಾಗಿದೆ. ಇಲ್ಲಿ ಕಟ್ಟಿಗೆಯಿಂದ ತಯಾರಿಸಿದ ವಿನ್ಯಾಸದಿಂದ ಕೈಮಗ್ಗದ ಬಟ್ಟೆಗಳಿಗೆ ಅಚ್ಚೊತ್ತುವ ತರಬೇತಿಯನ್ನು ನೀಡಲಾಗುತ್ತಿದೆ. ತರಬೇತಿಯ ಅವಧಿ ಆರು ತಿಂಗಳಾಗಿದ್ದು, ಪ್ರತೀ ತಂಡಕ್ಕೆ ೩೦ ಅಭ್ಯರ್ಥಿಗಳಿಗೆ ಪ್ರವೇಶಾವಕಾಶ ನೀಡಲಾಗುತ್ತದೆ.

ಜಿಲ್ಲೆಯಲ್ಲಿ ೨೦೦೦ದ ಮಾರ್ಚ್ ಅಂತ್ಯದಲ್ಲಿದ್ದಂತೆ, ಒಟ್ಟು ೧೪ ಕೈಗಾರಿಕಾ ತರಬೇತಿ ಸಂಸ್ಥೆಗಳಿದ್ದವು. ಇವುಗಳ ಪೈಕಿ ಐದು ಸರ್ಕಾರಿ ಕ್ಷೇತ್ರಕ್ಕೂ, ಉಳಿದ ಒಂಬತ್ತು ಖಾಸಗಿ ಕ್ಷೇತ್ರಕ್ಕೂ ಒಳಪಟ್ಟಿದ್ದವು. ಫಿಟ್ಟರ್, ಎಲೆಕ್ಟ್ರಿಷಿಯನ್, ಮೆಕಾನಿಕಲ್, ಡ್ರಾಫ್ಟ್‌ಮನ್ ಮುಂತಾದ ವಿಷಯಗಳಲ್ಲಿ ಇಲ್ಲಿ ತರಬೇತಿ ನೀಡಲಾಗುತ್ತದೆ. ಈ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ಕನಿಷ್ಠ ಎಸ್.ಎಸ್.ಎಲ್.ಸಿಯಲ್ಲಿ ತೇರ್ಗಡೆ ಹೊಂದಿದವರಾಗಿರ ಬೇಕಾಗುವುದು. ತರಬೇತಿಯ ಅವಧಿ ಎರಡು ವರ್ಷಗಳಾಗಿದ್ದು. ಸಾಮಾನ್ಯ ಅಭ್ಯರ್ಥಿಗಳಿಗೆ ಮಾಸಿಕ ೫೦ ರೂ. ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ೧೫೦ ರೂ.ಗಳ ಶಿಷ್ಯವೇತನವನ್ನು ನೀಡಲಾಗುವುದು.

ಜಿಲ್ಲೆಯ ಕೆಲವು ಕಸಬುದಾರರಿಗೆ ವಿವಿಧ ಯೋಜನೆಗಳಡಿ ತರಬೇತಿಯನ್ನು ನೀಡಲಾಗುತ್ತದೆ. ಇನ್ನು ಮುಂದೆ ಜಿಲ್ಲೆಯಲ್ಲಿ ಪ್ರಾರಂಭಗೊಳ್ಳುವ ಕೈಗಾರಿಕೆಗಳು ಇವರ ಸೇವೆಯನ್ನು ಪಡೆದುಕೊಳ್ಳಬಹುದಾಗಿದೆ. ಸ್ಪೆಷಲ್ ಕಾಂಪೋನೆಂಟ್ ಯೋಜನೆಯಡಿ ಹತ್ತಿಬಟ್ಟೆ ನೇಯ್ಗೆ, ಬುಟ್ಟಿ ತಯಾರಿಕೆ, ರೆಕ್ಸಿನ್ ಸರಕುಗಳ ತಯಾರಿಕೆ, ಸಿದ್ಧ ಉಡುಪುಗಳ ತಯಾರಿಕೆ, ಮರಗೆಲಸ, ನಾರಿನ ಉತ್ಪನ್ನಗಳು, ಚಾಪೆ ಹೆಣಿಕೆ, ಮೋಟಾರ್ ಮೆಕಾನಿಕಲ್ ಮತ್ತು ಆಟೋರಿಕ್ಷಾ ರಿಪೇರಿ ಮೊದಲಾದವುಗಳ ಬಗ್ಗೆ ತರಬೇತಿ ನೀಡಲಾಗುವುದು. ಗ್ರಾಮಾಂತರ ಕುಶಲಕರ್ಮಿಗಳ ಯೋಜನೆಯಡಿ ಸಿದ್ಧ ಉಡುಪುಗಳ ತಯಾರಿಕೆ, ರೇಡಿಯೋ ರಿಪೇರಿ, ಗಡಿಯಾರ ರಿಪೇರಿ, ಲೋಹದ ತಗಡಿನ ಕೆಲಸ, ಕಸೂತಿ, ಮುದ್ರಣ, ಕುಲುಮೆ ಕೆಲಸ, ಉಣ್ಣೆ ನೇಯ್ಗೆ ಮೊದಲಾದವುಗಳ ಬಗ್ಗೆ ತರಬೇತಿ ನೀಡಲಾಗುತ್ತದೆ.

ಟ್ರೈಸಂ ಹೊಲಿಗೆ, ಟೈಪಿಂಗ್, ಚರ್ಮೋದ್ಯಮ, ರೇಷ್ಮೆ ನೂಲು ತಯಾರಿಕೆ, ರೇಡಿಯೋ ರಿಪೇರಿ, ಬುಟ್ಟಿ ತಯಾರಿಕೆ, ಕೋಳಿ ಸಾಕಣೆ, ಮರಗೆಲಸ, ಕುರಿಸಾಕಣೆ, ಚಾಪೆ ಹೆಣೆಯುವುದು, ಕುಂಬಾರಿಕೆ, ಬೋರ್ವೆಲ್ ರಿಪೇರಿ, ಕುಲುಮೆ, ಮುದ್ರಣ, ಕಂಬಳಿ ತಯಾರಿಕೆ, ಬೆಸುಗೆ ಹಾಕುವುದು, ಸೈಕಲ್ ರಿಪೇರಿ, ಬೊಂಬೆ ತಯಾರಿಕೆ ಮೊದಲಾದವುಗಳಿಗೆ ಸಂಬಂಧಿಸಿದಂತೆ ತರಬೇತಿ ನೀಡಲಾಗುವುದು. ಕೈಮಗ್ಗ ಅಭಿವೃದ್ಧಿ ಯೋಜನೆಯಲ್ಲಿ ಕೈಮಗ್ಗಗಳಲ್ಲಿ ನೇಯ್ಗೆಗೆ ಸಂಬಂಧಿಸಿದ ತರಬೇತಿ ನೀಡಲಾಗುವುದು. ಜಿಲ್ಲೆಯಲ್ಲಿ ಜೇನು ಸಾಕಣೆಗೆ ಸಂಬಂಧಿಸಿದ ತರಬೇತಿಯನ್ನು ಸಹ ನೀಡಲಾಗುವುದು. ಈ ಯೋಜನೆಗಳಲ್ಲಿ ತರಬೇತಿ ಪಡೆದಿರುವ ಫಲಾನುಭವಿಗಳು ಸ್ವಂತ ಉದ್ಯೋಗವನ್ನು ಮಾಡಬಹುದು ಅಥವಾ ಉದ್ದಿಮೆದಾರರಿಗೆ ನೆರವನ್ನೊದಗಿಸಬಹುದಾಗಿದೆ.

ಜಿಲ್ಲೆಯಲ್ಲಿ ೨೦೦೦ದ ಮಾರ್ಚ್ ಅಂತ್ಯದಲ್ಲಿದ್ದಂತೆ ಕಾರ್ಯನಿರ್ವಹಿಸುತ್ತಿದ್ದ ಕೈಗಾರಿಕಾ ತರಬೇತಿ ಸಂಸ್ಥೆಗಳ ಪಟ್ಟಿಯನ್ನು ಈ ಮುಂದೆ ನೀಡಲಾಗಿದೆ: ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಸಕ್ಕರೆ ನಗರ, ಮಂಡ್ಯ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಮಳವಳ್ಳಿ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಪಾಂಡವಪುರ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಕೆ.ಎಂ.ದೊಡ್ಡಿ (ಭಾರತೀ ನಗರ) ಮದ್ದೂರು ತಾಲೂಕು, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಲೀಲಾವತಿ ಬಡಾವಣೆ, ಮದ್ದೂರು, ಶ್ರೀ ಆದಿಚುಂಚನಗಿರಿ ಕೈಗಾರಿಕಾ ಕೇಂದ್ರ, ಮೇಲುಕೋಟೆ, ಪಾಂಡವಪುರ ತಾಲೂಕು, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ಕೈಗಾರಿಕಾ ತರಬೇತಿ ಕೇಂದ್ರ, ಮೈಶುಗರ್ ಹೈಸ್ಕೂಲ್ ಸಮೀಪ, ಮಂಡ್ಯ, ಶ್ರೀರಂಗನಾಥ ಕೈಗಾರಿಕಾ ತರಬೇತಿ ಕೇಂದ್ರ, ಬಾಬುರಾಯನ ಕೊಪ್ಪಲು, ಶ್ರೀರಂಗಪಟ್ಟಣ, ತಾವರೆಗೆರೆ ಕೈಗಾರಿಕಾ ತರಬೇತಿ ಕೇಂದ್ರ, ಸರ್ಕಾರಿ ಪ್ರೌಢಶಾಲೆ ಸಮೀಪ, ತಾವರೆಗೆರೆ, ಮಂಡ್ಯ, ಜೆ.ಪಿ.ಎಂ.ಕೈಗಾರಿಕಾ ತರಬೇತಿ ಕೇಂದ್ರ, ಹಲಗೂರು, ಮಳವಳ್ಳಿ ತಾಲೂಕು, ರಚನಾ ಕೈಗಾರಿಕಾ ತರಬೇತಿ ಕೇಂದ್ರ, ಕೃಷ್ಣರಾಜಪೇಟೆ, ಬಿ.ಎಲ್.ಎಸ್.ಕೈಗಾರಿಕಾ ತರಬೇತಿ ಕೇಂದ್ರ ಎಂ.ಸಿ.ರಸ್ತೆ, ಕಲ್ಲಹಳ್ಳಿ ಬಡಾವಣೆ, ಮಂಡ್ಯ-೧, ಜ್ಞಾನೇಶ ಕೈಗಾರಿಕಾ ತರಬೇತಿ ಕೇಂದ್ರ, ಕನಕಪುರ ರಸ್ತೆ, ಮಳವಳ್ಳಿ ಹಾಗೂ ಜ್ಞಾನಗಂಗಾ ಕೈಗಾರಿಕಾ ತರಬೇತಿ ಕೇಂದ್ರ , ರೈಲ್ವೆಸ್ಟೇಷನ್ ಸಮೀಪ, ಶಿವಪುರ, ಮದ್ದೂರು,

## ಹೋಟೆಲು ಉದ್ಯಮ

ಜಿಲ್ಲೆಯಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳೂ, ಪುಣ್ಯಕ್ಷೇತ್ರಗಳೂ, ಹದಿನೈದು ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳೂ, ಇಂಜನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳೂ ಇರುವುದರಿಂದ ಹೊರಗಿನಿಂದ ಪ್ರವಾಸಿಗರು, ಭಕ್ತಾದಿಗಳು, ಉದ್ಯೋಗಾಕಾಂಕ್ಷಿಗಳು ವಿದ್ಯಾರ್ಥಿಗಳು ಬರುತ್ತಿರುತ್ತಾರೆ. ಇವರಿಗೆ ಉಪಹಾರ, ಊಟ, ವಸತಿ ಸೌಲಭ್ಯಗಳನ್ನು ಹೋಟೆಲ್ ಉದ್ಯಮ ಒದಗಿಸುತ್ತಿದೆ. ಮಂಡ್ಯ ಜಿಲ್ಲೆಯಲ್ಲಿ ಯಾವ ಸ್ಟಾರ್ ಹೋಟೆಲುಗಳೂ ಇರುವುದಿಲ್ಲ. ಬೃಂದಾವನವನದಲ್ಲಿರುವ ಹೋಟೇಲು, ಪಾಶ್ಚಿಮಾತ್ಯ ಹೋಟೇಲುಗಳ ಮಾದರಿಯಾಗಿದ್ದು, ಎಲ್ಲಾ ವಿಧದ ಸೌಲಭ್ಯವನ್ನೊದಗಿಸುತ್ತಿದೆ.

ಜಿಲ್ಲೆಯ ಕಾರ್ಮಿಕ ಕಾಯ್ದೆಗೊಳಪಟ್ಟಂತೆ ೨೦೦೨ರ ಮಾರ್ಚ್ ಅಂತ್ಯದಲ್ಲಿದ್ದಂತೆ ಹೋಟೇಲುಗಳು ಮತ್ತು ಅವುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರ ಸಂಖ್ಯೆಯ ತಾಲೂಕುವಾರು ವಿವರಗಳನ್ನು ಕೋಷ್ಟಕ ೫.೨೬ರಲ್ಲಿ ನೀಡಿದೆ.

**ಕೋಷ್ಟಕ ೫.೨೬**

| ಕ್ರ. ಸಂ. | ತಾಲೂಕು | ಹೋಟೆಲುಗಳ ಸಂಖ್ಯೆ | | ಕಾರ್ಮಿಕರ ಸಂಖ್ಯೆ | |
|---|---|---|---|---|---|
| | | ೧೯೯೯–೨೦೦೦ | ೨೦೦೧–೨೦೦೨ | ೧೯೯೯–೨೦೦೦ | ೨೦೦೧–೨೦೦೨ |
| ೧. | ಮಂಡ್ಯ | ೧೩೪ | ೧೪೧ | ೫೩೬ | ೪೫೭ |
| ೨. | ಮದ್ದೂರು | ೪೩ | ೪೮ | ೧೪೬ | ೧೦೪ |
| ೩. | ಮಳವಳ್ಳಿ | ೬೦ | ೫೧ | ೧೮೦ | ೨೦೫ |
| ೪. | ಶ್ರೀರಂಗಪಟ್ಟಣ | ೨೩ | ೪೨ | ೯೬ | ೯೮ |
| ೫. | ಪಾಂಡವಪುರ | ೧೫ | ೩೧ | ೩೩ | ೪೩ |
| ೬. | ನಾಗಮಂಗಲ | ೪೫ | ೪೫ | ೧೭೫ | ೧೭೫ |
| ೭. | ಕೃಷ್ಣರಾಜಪೇಟೆ | ೨೫ | ೨೫ | ೧೨೫ | ೧೨೫ |
| | ಒಟ್ಟು | ೩೪೫ | ೩೮೩ | ೧೨೯೧ | ೧೨೦೭ |

## ಜೈವಾನಿಲ ಮತ್ತು ವೈರಾಡ ಅಸ್ತ್ರ ಒಲೆಗಳು

ಜೈವಾನಿಲವನ್ನು ಜಾನುವಾರುಗಳ ಗೊಬ್ಬರದಿಂದ ಉತ್ಪಾದಿಸಲಾಗುವುದು. ೧೯೯೭ರ ಜಾನುವಾರು ಗಣತಿಯ ಪ್ರಕಾರ ಜಿಲ್ಲೆಯಲ್ಲಿ ೩.೪೦ ಲಕ್ಷ ದನಕರುಗಳು ಮತ್ತು ೨.೧೩ ಲಕ್ಷ ಎಮ್ಮೆಗಳು ಇದ್ದವು. ಇವುಗಳ ಗೊಬ್ಬರವನ್ನು ಉಪಯೋಗಿಸಿ ಜೈವಾನಿಲವನ್ನು ತಯಾರಿಸಿದ ನಂತರ ಉಳಿಯುವ ಬಗ್ಗಡವನ್ನು ವ್ಯವಸಾಯಕ್ಕೆ ಉತ್ಕೃಷ್ಟ ಗೊಬ್ಬರವಾಗುವುದೆಂಬುದು ಸಂಶೋಧನೆಯಿಂದ ಧೃಡಪಟ್ಟಿದೆ. ಇದಕ್ಕಾಗಿ ಜಿಲ್ಲಾ ಪಂಚಾಯತ್ ತಾಂತ್ರಿಕ ನೆರವನ್ನೊದಗಿಸುತ್ತದೆ. ಜೈವಾನಿಲ ಸೌಲಭ್ಯವನ್ನು ಗ್ರಾಮಾಂತರ ಜನರಿಗೆ ದೊರಕಿಸಿಕೊಡುವ ಉದ್ದೇಶದಿಂದ ಪ್ರತೀಘಟಕದ ಅಂದಾಜು ವೆಚ್ಚಕ್ಕೆ ಸರ್ಕಾರವು ಸಹಾಯ ಧನವನ್ನು ನೀಡುವುದರ ಜೊತೆಗೆ, ಬ್ಯಾಂಕುಗಳಿಂದ ಸಾಲಸೌಲಭ್ಯ ಪಡೆದುಕೊಳ್ಳಲೂ ಅನುಕೂಲ ಕಲ್ಪಿಸಿದೆ.

## ಇತರ ಕಸುಬುಗಳು

೧೯೯೧ರ ಜನಗಣತಿಯಂತೆ ಜಿಲ್ಲೆಯ ೧೬.೪೪ ಲಕ್ಷ ಮಂದಿಯ ಪೈಕಿ ೭.೩೨ ಲಕ್ಷ ಮಂದಿ ಉತ್ಪಾದನಾಕಾರರಾಗಿರುವರು. ಇವರಲ್ಲಿ ೬.೩೬ ಲಕ್ಷ ಮಂದಿ ಮುಖ್ಯ ಉತ್ಪಾದನಾಕಾರರಾಗಿದ್ದರೆ, ಉಳಿದ ೦.೯೬ ಲಕ್ಷ ಮಂದಿ ಸೀಮಾಂತ ಕೆಲಸಗಾರರಾಗಿರುವರು. ಜಿಲ್ಲೆಯ ಒಟ್ಟು ಜನಸಂಖ್ಯೆ ಪೈಕಿ ಸ್ವಲ್ಪ ಭಾಗ ಜನರು ವಿವಿಧ ಉದ್ಯಮಗಳಲ್ಲಿ ತೊಡಗಿದ್ದು, ಜಿಲ್ಲೆಯ ಆರ್ಥಿಕ ಪ್ರಗತಿಗೆ ಪೂರಕವಾಗಿದ್ದರೂ, ಸರಿಯಾಗಿ ಪರಿಗಣಿಸದೆ ಹೊರಗುಳಿಯಲ್ಪಟ್ಟಿರುವವರನ್ನು ಇತರ ಕಸುಬುಗಳ ವ್ಯಾಪ್ತಿಗೊಳಪಡಿಸಲಾಗಿದೆ. ಇವರ ಸಂಖ್ಯೆ ಕಡಿಮೆ ಇದ್ದರೂ, ಜಿಲ್ಲೆಯ ಆರ್ಥಿಕ ಪ್ರಗತಿಗೆ ಇವರ ಕೊಡುಗೆ ಅಪಾರವಾಗಿದೆ. ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಇವರಿಗೆ ಹೊಂದಿಕೆಯಾಗುವ ಉದ್ಯೋಗ ಸರಿಯಾಗಿ ದೊರಕದೇ ಇರುವುದರಿಂದ, ಬಹಳಷ್ಟು ಮಂದಿ ಪಟ್ಟಣಪ್ರದೇಶಗಳಲ್ಲಿ ವಾಸಿಸುತ್ತಿರುವರು. ಇವರು ಹೊಂದಿರುವ ಉದ್ಯೋಗಗಳೆಂದರೆ ಸಾರ್ವಜನಿಕ ಆಡಳಿತ ಸೇವೆ, ಸ್ವಯಂ ಉದ್ಯೋಗ ವ್ಯಾಪ್ತಿಗೊಳಪಡುವ ವರ್ಗಗಳ ಪೈಕಿ ವಕೀಲರು, ವೈದ್ಯರು, ಹೋಟೇಲು ಉದ್ಯಮಿಗಳು, ಸಾರಿಗೆ ಉದ್ಯಮಿಗಳು, ಯಂತ್ರೋಪಕರಣ ತಯಾರಕರು ಹಾಗೂ ಸೇವಾನಿರತರು ಸೇರ್ಪಡೆಯಾದರೆ, ವೈಯಕ್ತಿಕ ಸೇವಾ ನಿರತರಾದ

ವರ್ಗಗಳ ಪೈಕಿ ದೋಬಿ, ಕ್ಷೌರಿಕ, ದರ್ಜಿ ಮೊದಲಾದವರ ಜೊತೆಗೆ ಸಾಂಪ್ರದಾಯಿಕ ಕಸುಬುಗಳಾದ ಕುಲುಮೆಕೆಲಸ, ಬಡಗಿಕೆಲಸ, ಕುಂಬಾರಿಕೆ, ಚಮ್ಮಾರಿಕೆ, ಚಿನ್ನ ಬೆಳ್ಳಿ ಕೆಲಸ, ಗೃಹನಿರ್ಮಾಣ, ತೋಟಗಾರಿಕೆ, ಬುಟ್ಟಿಹೆಣೆಯುವುದು, ಚಾಪೆ ಹೆಣೆಯುವುದು ಮೊದಲಾದವುಗಳೂ ಸೇರುತ್ತವೆ. ಇವು ಜೀವನಾಧಾರವಾಗಿರುವುದರ ಜೊತೆಗೆ ಜನಸಮುದಾಯಕ್ಕೆ ಅವಶ್ಯಕವಾದ ಸೇವೆ ಮತ್ತು ಸರಕನ್ನೂ ಒದಗಿಸುವುದರ ಮೂಲಕ ಜಿಲ್ಲೆಯ ಆರ್ಥಿಕ ಪ್ರಗತಿಗೆ ಸಹಾಯಕವಾಗಿವೆ. ಜಿಲ್ಲೆಯ ಕೆಲವು ಕಸುಬುದಾರರು ವಂಶಪಾರಂಪರ್ಯ ಕಸುಬನ್ನು ಮುಂದುವರಿಸಿಕೊಂಡು ಹೋಗುತ್ತಿರುವುದರ ಜೊತೆಗೆ ಅವುಗಳಲ್ಲಿ ಪರಿಣತಿಯನ್ನೂ ಹೊಂದಿದ್ದಾರೆ.

## ಕೈಗಾರಿಕಾ ಬೆಳವಣಿಗೆಯ ಅವಕಾಶಗಳು

ಮಂಡ್ಯ ಜಿಲ್ಲೆಯಲ್ಲಿ ಕೈಗಾರಿಕಾ ಬೆಳವಣಿಗೆಗೆ ಇರುವ ಅವಕಾಶಗಳನ್ನು ಸಂಪನ್ಮೂಲ ಆಧಾರಿತ ಮತ್ತು ಬೇಡಿಕೆ ಆಧಾರಿತ ಎಂದು ಪ್ರಧಾನವಾಗಿ ಎರಡು ಗುಂಪುಗಳಾಗಿ ವಿಂಗಡಿಸಬಹುದು. ಜಿಲ್ಲೆಯಲ್ಲಿ ನಾಲ್ಕು ಬೃಹತ್ ಹಾಗೂ ಮಧ್ಯಮ ಪ್ರಮಾಣದ ಸಕ್ಕರೆ ಕಾರ್ಖಾನೆಗಳಿರುವುದರಿಂದ ಅವು ಕಬ್ಬನ್ನು ಅರೆದು ಹೊರಹಾಕುವ ಸಿಪ್ಪೆಯನ್ನು ಉಪಯೋಗಿಸಿಕೊಂಡು ಕಾಗದವನ್ನು ತಯಾರಿಸುವ ಅವಕಾಶ ವಿಪುಲವಾಗಿವೆ. ಬೆಳಗೊಳದಲ್ಲಿ ಸ್ಥಾಪನೆಗೊಂಡಿದ್ದ ಮಂಡ್ಯ ರಾಷ್ಟ್ರೀಯ ಕಾಗದದ ಕಾರ್ಖಾನೆ, ಕಬ್ಬಿನ ಸಿಪ್ಪೆಯಿಂದ ಉತ್ತಮ ದರ್ಜೆಯ ಕಾಗದವನ್ನು ತಯಾರಿಸುತ್ತಿತ್ತು. ಕಾರಣಾಂತರದಿಂದ ಅದು ಮುಚ್ಚಿಹೋಗಿರುವುದರಿಂದ ಅದರ ಸ್ಥಾನದಲ್ಲಿ ಮತ್ತೊಂದು ಮಧ್ಯಮಪ್ರಮಾಣದ ಕಾಗದದ ಕಾರ್ಖಾನೆ ಮತ್ತು ಇನ್ನೂ ಕೆಲವು ಸಣ್ಣ ಪ್ರಮಾಣದ ಕಾಗದದ ಕಾರ್ಖಾನೆಗಳನ್ನು ಸ್ಥಾಪಿಸಬಹುದೆಂದು ಅಭಿಪ್ರಾಯಪಡಲಾಗಿದೆ. ಜಿಲ್ಲೆಯಲ್ಲಿ ಅಧಿಕ ಪ್ರಮಾಣದಲ್ಲಿ ಕಬ್ಬನ್ನು ಬೆಳೆಯುತ್ತಿರುವುದರಿಂದ ದಿನಕ್ಕೆ ೫೦ ರಿಂದ ೧೦೦ ಟನ್ ಕಬ್ಬನ್ನು ಅರೆಯುವ ಕೆಲವು ಖಂಡಸಾರಿ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಅವಕಾಶವಿದೆ. ಜಿಲ್ಲೆಯಲ್ಲಿ ದೊರಕುವ ಖನಿಜಗಳಲ್ಲಿ ಕಲ್ನಾರು ಮತ್ತು ಕೂರುಂಗದಕಲ್ಲು (ಕೋರುಂಡಂ) ಮುಖ್ಯವಾದವುಗಳು. ಇವುಗಳನ್ನು ವಾಣಿಜ್ಯೋಪಯುಕ್ತವಾಗಿ ಬಳಸಿಕೊಳ್ಳಲು ಸಾಕಷ್ಟು ಪ್ರಯತ್ನ ಮಾಡಲಾಗಿಲ್ಲವೆಂದು ಅಭಿಪ್ರಾಯಪಡಲಾಗಿದೆ. ಈ ಖನಿಜಗಳನ್ನು ಉಪಯೋಗಿಸಿಕೊಂಡು ಸಿಮೆಂಟ್ ಅಸ್ಬೆಸ್ಟಾಸ್ ಮತ್ತು ಅಲ್ಯೂಮಿನಿಯಂ ಸಲ್ಫೇಟ್ ಕ್ಯಾನ್ ತಯಾರಿಸಲು ಯೋಚಿಸಬಹುದಾಗಿದೆ. ಮಳವಳ್ಳಿ ತಾಲೂಕಿನಲ್ಲಿ ಚಮ್ಮಾರ ಜನಾಂಗ ಅಧಿಕ ಪ್ರಮಾಣದಲ್ಲಿದ್ದು, ಅವರು ತಯಾರಿಸುವ ಚಪ್ಪಲಿಗಳು ಜಿಲ್ಲೆಯಾದ್ಯಂತ ಪ್ರಸಿದ್ಧಿ ಪಡೆದಿವೆ. ಇಲ್ಲಿನ ಜನರು ಸಾಂಪ್ರದಾಯಕ ವಿಧಾನದಿಂದ ಚಪ್ಪಲಿಗಳನ್ನು ತಯಾರಿಸುತ್ತಿರುವುದರಿಂದ ಅಧಿಕ ಉತ್ಪಾದನೆ ಮತ್ತು ಆಕರ್ಷಣೀಯವಾಗಿರುವುದಿಲ್ಲ. ಇವರಿಗೆ ಆಧುನಿಕ ಉಪಕರಣಗಳನ್ನು ಉಪಯೋಗಿಸುವುದಕ್ಕೆ ತರಬೇತಿ ನೀಡಿ ಉತ್ತಮ ಗುಣಮಟ್ಟದ ಚಪ್ಪಲಿಗಳನ್ನು ತಯಾರಿಸುವಂತೆ ಮಾಡುವುದು ಅವಶ್ಯಕವಾಗಿದೆ. ಚರ್ಮ ಹದ ಮಾಡುವುದು ಮತ್ತು ಚರ್ಮದಿಂದ ಸೂಟ್‌ಕೇಸು, ಔಷಧಿ ಕಿಟ್ಟು, ಆಕರ್ಷಣೀಯ ಕೈಚೀಲ, ಹಣದಥೈಲಿ ಮೊದಲಾದವುಗಳನ್ನು ತಯಾರಿಸಲು ತರಬೇತಿ ನೀಡಿ ಪ್ರೋತ್ಸಾಹಿಸಬೇಕಾಗಿದೆ. ಹೀಗೆ ಮಾಡುವುದರಿಂದ ಚರ್ಮೋದ್ಯಮವನ್ನು ಲಾಭದಾಯಕ ಉದ್ಯಮವನ್ನಾಗಿ ಮಾಡಲು ಅವಕಾಶವಿದೆ. ಜಿಲ್ಲೆಯಲ್ಲಿ ಕಾವೇರಿ, ಹೇಮಾವತಿ, ಲೋಕಪಾವನಿ, ಶಿಂಷಾ ಮತ್ತು ವೀರವೈಷ್ಣವಿ ನದಿಗಳು ಹರಿಯುತ್ತಿವೆ. ಕೃಷ್ಣರಾಜಸಾಗರ, ಅಣೆಕಟ್ಟು ನಿರ್ಮಾಣಗೊಂಡಿದೆ. ೩೪೪ ದೊಡ್ಡ ಕೆರೆ ಮತ್ತು ೫೦೩ ಸಣ್ಣ ಕೆರೆಗಳು ಮತ್ತು ಸುಮಾರು ೪೦೦ ಕಿ.ಮೀ.ನಷ್ಟು ನಾಲಾ ಸೌಲಭ್ಯವಿದೆ. ಇವೆಲ್ಲವು ಒಟ್ಟಿಗೆ ಸೇರಿ ಜಿಲ್ಲೆಯಲ್ಲಿ ಸುಮಾರು ೨೯,೦೫೦ ಹೆಕ್ಟೇರ್‌ನಷ್ಟು ಜಲವಿಸ್ತೀರ್ಣ ಮೀನುಗಾರಿಕೆಗೆ ಲಭ್ಯವಿರುವ್ಯದರಿಂದ ಮೀನುಗಾರಿಕೆಗೆ ವಿಪುಲ ಅವಕಾಶವಿದೆ. ೧೬ ಮೀನುಗಾರರ

ಸಹಕಾರ ಸಂಘಗಳು ಇವೆ. ಮೀನುಗಾರರಿಗೆ ಮತ್ತು ದೋಣಿ ವಿಹಾರ ಕೈಗೊಳ್ಳುವವರಿಗೆ ಅವಶ್ಯಕವಾಗಿರುವ ದೋಣಿಗಳ ನಿರ್ಮಾಣ, ಮೀನು ಸಂಸ್ಕರಣಾ ಸೌಲಭ್ಯವನ್ನು ಕಲ್ಪಿಸುವ ಕೈಗಾರಿಕೆಗಳು ಮತ್ತು ಮೀನುಗೊಬ್ಬರವನ್ನು ತಯಾರಿಸುವ ಕಾರ್ಖಾನೆಗಳ ಬೆಳವಣಿಗೆಗೆ ಜಿಲ್ಲೆಯಲ್ಲಿ ವಿಪುಲ ಅವಕಾಶವಿದೆ. ಜಿಲ್ಲೆಯ ನಾಗಮಂಗಲ. ಕೃಷ್ಣರಾಜಪೇಟೆ, ಮದ್ದೂರು ಮತ್ತು ಮಂಡ್ಯ ತಾಲೂಕುಗಳಲ್ಲಿ ತೆಂಗಿನ ತೋಟಗಳು ಹೆಚ್ಚಾಗಿರುವುದರಿಂದ ಕೊಬ್ಬರಿ ಪೌಡರ್ ಮತ್ತು ಸಂಸ್ಕರಣಾ ಕಾರ್ಖಾನೆ, ನಾರಿನ ಕಾರ್ಖಾನೆ ಮತ್ತು ನಾರಿನಿಂದ ವಸ್ತುಗಳನ್ನು ತಯಾರಿಸುವ ಉದ್ಯಮಗಳನ್ನು ಪ್ರಾರಂಭಿಸಲು ವಿಪುಲ ಅವಕಾಶವಿದೆ.

ವ್ಯವಸಾಯ ಉಪಕರಣ, ಕಾಮಗಾರಿ ಉಪಕರಣ, ಸಮ್ಮಿಶ್ರ ರಸಗೊಬ್ಬರ, ಇಟ್ಟಿಗೆ ತಯಾರಿಕೆ, ಅಕ್ಕಿಗಿರಣಿ, ಮತ್ತು ಸಕ್ಕರೆ ಕಾರ್ಖಾನೆಗಳಿಗೆ ಬೇಕಾಗುವ ಬಿಡಿಭಾಗಗಳನ್ನು ಬೇಡಿಕೆ ಆಧಾರಿತ ಸರಕುಗಳಾಗಿ ತಯಾರಿಸಲು ಜಿಲ್ಲೆಯಲ್ಲಿ ಹೆಚ್ಚಿನ ಅವಕಾಶವಿದೆ. ಜಿಲ್ಲೆಯ ಗೃಹ ಕೈಗಾರಿಕಾ ಘಟಕಗಳು ಸಾಂಪ್ರದಾಯಿಕ ರೀತಿಯಲ್ಲಿ ವ್ಯವಸಾಯೋಪಕರಣಗಳನ್ನು ಮತ್ತು ಕಾಮಗಾರಿ ಉಪಕರಣಗಳನ್ನು ತಯಾರಿಸುತ್ತಿವೆ. ಇವುಗಳ ಜೊತೆಗೆ ಆಧುನಿಕ ಘಟಕಗಳನ್ನು ಸ್ಥಾಪಿಸಿ ಸುಧಾರಿಸಿದ ಉಪಕರಣಗಳಾದ ನೇಗಿಲು, ಕಳೆತೆಗೆಯುವ ಯಂತ್ರ, ಭತ್ತವನ್ನು ಬಡಿದು ವಿಂಗಡಿಸುವ ಯಂತ್ರ ಮೊದಲಾದವುಗಳನ್ನು ತಯಾರಿಸುವುದರಿಂದ, ಉತ್ತಮ ಬೇಡಿಕೆಯುಂಟಾಗುತ್ತದೆ. ಜಿಲ್ಲೆಯ ಗೊಬ್ಬರದ ಬೇಡಿಕೆಯನ್ನು ಜಿಲ್ಲೆಯಲ್ಲಿರುವ ಒಂದೇ ಗೊಬ್ಬರದ ಕಾರ್ಖಾನೆ ಪೂರೈಸಲು ಅಸಮರ್ಥವಾಗಿರುವುದರಿಂದ, ಈ ದಿಸೆಯಲ್ಲಿ ಒಂದೆರಡು ಸಣ್ಣ ಪ್ರಮಾಣದ ಕಾರ್ಖಾನೆಗಳನ್ನು ಸ್ಥಾಪಿಸಲೂ ಪ್ರಯತ್ನಿಸಬಹುದಾಗಿದೆ. ಮಂಡ್ಯ ನಗರ ಮತ್ತು ಇತರ ತಾಲೂಕುಕೇಂದ್ರ ಸ್ಥಳಗಳು ತ್ವರಿತಗತಿಯಲ್ಲಿ ಪ್ರಗತಿಗೊಳ್ಳುತ್ತಿರುವುದರಿಂದ ಕಟ್ಟಡ ಕಾಮಗಾರಿ, ಉಪಕರಣಗಳ ತಯಾರಿಕೆ ಮತ್ತು ಇಟ್ಟಿಗೆ ತಯಾರಿಕೆಗೆ ಹೆಚ್ಚಿನ ಬೇಡಿಕೆ ಉಂಟಾಗಿದ್ದು ಲಾಭದಾಯಕ ಉದ್ಯಮವು ಆಗಿದೆ. ಜಿಲ್ಲೆಯಲ್ಲಿ ಅಕ್ಕಿಗಿರಣಿ ಮತ್ತು ಸಕ್ಕರೆ ಕಾರ್ಖಾನೆಗಳ ಬಿಡಿಭಾಗಗಳಿಗೆ ಅಧಿಕ ಬೇಡಿಕೆ ಇರುವುದರಿಂದ ಇವುಗಳಿಗೆ ಬೇಕಾಗುವ ಬಿಡಿಭಾಗಗಳನ್ನು ತಯಾರಿಸಿ ಪೂರೈಸುವ ಸಣ್ಣ ಪ್ರಮಾಣದ ಕೈಗಾರಿಕೆಗಳ ಬೆಳವಣಿಗೆಗೆ ಹೆಚ್ಚಿನ ಅವಕಾಶವಿದೆ. ಬೇಡಿಕೆ ಆಧಾರಿತ ಉದ್ದಿಮೆಗಳಾದ ಅಗರಬತ್ತಿ ತಯಾರಿಕೆ, ಸಿದ್ಧ ಉಡುಪುಗಳ ತಯಾರಿಕೆ, ರೇಷ್ಮೆ ಹುಳುಗಳ ಸಾಕಾಣಿಕೆ, ವಾಹನಗಳ ರಿಪೇರಿ, ಮೊದಲಾದ ಉದ್ದಿಮೆಗಳನ್ನು ಪ್ರಾರಂಭಿಸಲೂ ಜಿಲ್ಲೆಯಲ್ಲಿ ವಿಪುಲ ಅವಕಾಶವಿದೆ.

ನಯಗೊಳಿಸಿದ ಗ್ರಾನೈಟ್ ಟೈಲ್ಸ್, ಹಣ್ಣುಗಳ ಶೈತಲೀಕರಣ, ಟೊಮೊಟೋ ಸಾಸ್ ಮತ್ತು ಬಾಳೆಹಣ್ಣಿನ ಚಿಪ್ಸ್, ಹೊಟ್ಟಿನಿಂದ ಎಣ್ಣೆ ತಯಾರಿಕೆ, ಹಣ್ಣಿನರಸದ ಪೌಡರ್ ತಯಾರಿಕೆ, ಮೊದಲಾದವುಗಳಿಗೆ ಸಂಬಂಧಿಸಿದಂತೆ ಮಧ್ಯಮ ಪ್ರಮಾಣದ ಕೈಗಾರಿಕೆಗಳನ್ನು ಜಿಲ್ಲೆಯಲ್ಲಿ ಆರಂಭಿಸಬಹುದಾಗಿದೆ. ಇವುಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯ ಸೌಲಭ್ಯವಿದೆ. ಸಣ್ಣ ಪ್ರಮಾಣದಲ್ಲಿ ಹಿಟ್ಟಿನ ಗಿರಣಿ, ಪಶು ಮತ್ತು ಕೋಳಿ ಆಹಾರ ತಯಾರಿಕಾ ಘಟಕಗಳು, ಐಸ್‌ಕ್ರೀಮ್ ತಯಾರಿಕೆ, ಬತ್ತದ ಹೊಟ್ಟಿನಿಂದ ಹಲ್ಲುಪುಡಿ ತಯಾರಿಕೆ, ರಾಗಿ ಹುಲ್ಲಿನಿಂದ ಕಾಗದ ತಯಾರಿಕೆ, ಆಧುನಿಕ ಬೇಳೆಗಿರಣಿಗಳ ಸ್ಥಾಪನೆ, ರೇಷ್ಮೆಗೂಡಿನಿಂದ ರೇಷ್ಮೆ ತೆಗೆಯುವ ಮತ್ತು ರೇಷ್ಮೆ ನೂಲು ತಯಾರಿಕಾ ಘಟಕಗಳ ಸ್ಥಾಪನೆಗೆ ಹೆಚ್ಚಿನ ಅವಕಾಶವಿದೆ. ರಾಗಿ ಮಾಲ್ಟ್, ಕೊಬ್ಬರಿ ಪೌಡರ್, ಸ್ಟ್ರಾಬೋರ್ಡ್, ಹ್ಯಾಂಡ್ ಮೇಡ್ ಪೇಪರ್, ಎ.ಸಿ.ಪೈಪ್ಸ್, ಬಾಳೆಹಣ್ಣಿನ ಚಿಪ್ಸ್, ಸಣ್ಣ ಪ್ರಮಾಣದಲ್ಲಿ ಚರ್ಮ ಹದಗೊಳಿಸುವುದು, ಮೂಳೆಗೊಬ್ಬರ, ಮೊದಲಾದವುಗಳ ತಯಾರಿಕೆಗೆ ಸಂಬಂಧಿಸಿದ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನೂ ಜಿಲ್ಲೆಯಲ್ಲಿ ಸ್ಥಾಪಿಸಬಹುದಾಗಿದೆ.

# ನೂತನ ಕೈಗಾರಿಕಾ ನೀತಿ–೨೦೦೧

**ಮಹತ್ವಾಕಾಂಕ್ಷೆ**

ರಾಜ್ಯದಲ್ಲಿ ಮುಂದಿನ ದಶಕದಲ್ಲಿ ಮಾರುಕಟ್ಟೆ ಆಧಾರಿತ, ಜ್ಞಾನಾಧಾರಿತ ಸಮರ್ಥ ಹಾಗೂ ಸ್ಪರ್ಧಾತ್ಮಕ ಕೈಗಾರಿಕಾ ಕ್ಷೇತ್ರದ ಕ್ಷಿಪ್ರ ಬೆಳವಣಿಗೆಯನ್ನು ಪ್ರವರ್ತಿಸುವ ಮೂಲಕ ಶೇ.೮ರಿಂದ ೯ರ ದರದಲ್ಲಿ ಆರ್ಥಿಕ ಬೆಳವಣಿಗೆಯನ್ನು ಸಾಧಿಸುವುದು ಕರ್ನಾಟಕದ ಧ್ಯೇಯವಾಗಿದೆ. ಈ ಧ್ಯೇಯವನ್ನು ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ತಂತ್ರಜ್ಞಾನದ ಉನ್ನತೀಕರಣಕ್ಕೆ ಸಾಂಸ್ಥಿಕ ಬೆಂಬಲವನ್ನು ನೀಡುವುದು, ಉದ್ಯಮಗಳು ಅನುಸರಿಸಬೇಕಾದ ನೀತಿ–ನಿಯಾಮಾವಳಿಗಳನ್ನು ಸರಳಗೊಳಿಸುವುದು ಮತ್ತು ನಮ್ಮ ಮಾನವ ಸಂಪನ್ಮೂಲದ ಕ್ರಿಯಾಶೀಲ ಸಾಮರ್ಥ್ಯವನ್ನು ಹಾಗೂ ಉದ್ಯಮಶೀಲತೆಯನ್ನು ಅಧಿಕಗೊಳಿಸುವುದರ ಮೂಲಕ ಸಾಧಿಸಲಾಗುವುದು.

ಆದುದರಿಂದ ಪ್ರಸ್ತಾಪಿತ ಕೈಗಾರಿಕಾ ನೀತಿಯು ವಾರ್ಷಿಕ ಶೇ.೧೦ ರಿಂದ ೧೨ರ ದರದಲ್ಲಿ ಕೈಗಾರಿಕಾ ಬೆಳವಣಿಗೆಯನ್ನು ಸಾಧಿಸುವುದು ಮತ್ತು ವರ್ಷಕ್ಕೆ ಕನಿಷ್ಟ ೨೦,೦೦೦ ಕೋಟಿ ರೂ.ಗಳ ಬಂಡವಾಳವನ್ನು ಆಕರ್ಷಿಸುವುದು ಹಾಗೂ ವಾರ್ಷಿಕವಾಗಿ ಸರಾಸರಿ ಕನಿಷ್ಟ ೧.೫೦ ಲಕ್ಷ ಜನರಿಗೆ ಉದ್ಯೋಗಾವಕಾಶ ಸೃಷ್ಟಿಸುವ ಗುರಿಯನ್ನು ಹೊಂದಿರುತ್ತದೆ.

**ಉದ್ದೇಶಗಳು**

ಮೇಲಿನ ಮಹತ್ವಾಕಾಂಕ್ಷೆಯನ್ನು ಸಾಧಿಸಲು ಈ ಕೆಳಗಿನ ಉದ್ದೇಶಗಳಿಗೆ ಗಮನವನ್ನು ನೀಡಲಾಗುವುದು.

(ಎ) ಕರ್ನಾಟಕದಲ್ಲಿ ವಿಶೇಷ ಅನುಕೂಲತೆ ಇರುವ ಕ್ಷೇತ್ರಗಳ ಮತ್ತು ಮಾರುಕಟ್ಟೆಗಳ ಕ್ಷಿಪ್ರ ಬೆಳವಣಿಗೆಗೆ ಪ್ರೋತ್ಸಾಹ.

(ಬಿ) ಕ್ಷಿಪ್ರವಾದ ತಂತ್ರಜ್ಞಾನ ಉನ್ನತೀಕರಣದ ಮೂಲಕ ಉತ್ಪನ್ನಗಳ ಮತ್ತು ಸಂಸ್ಕರಣೆಗಳ ಮೌಲ್ಯವರ್ಧನೆಯನ್ನು ಅಧಿಕಗೊಳಿಸುವುದು

(ಸಿ) ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಖನಿಜ ಮತ್ತು ಮಾನವ ಸಂಪನ್ಮೂಲ ಈ ವಿವಿಧ ಕ್ಷೇತ್ರಗಳ ಸಾಮರ್ಥ್ಯ ಮತ್ತು ಸಂಪನ್ಮೂಲಗಳ ಗರಿಷ್ಠ ಬಳಕೆಯನ್ನು ಸಾಧ್ಯವಾಗಿಸುವುದು.

(ಡಿ) ಜಾಗತಿಕ ಮಟ್ಟದ ಗುಣಮಟ್ಟ ಮತ್ತು ಸ್ಪರ್ಧೆ ಹೊಸ ಉತ್ಪನ್ನಗಳ ಮೂಲಕ ದೇಶೀಯವಾಗಿ ಮತ್ತು ರಫ್ತುವಲಯದಲ್ಲಿ ಹೊಸ ಮಾರುಕಟ್ಟೆಯನ್ನು ತಲುಪಲು ಕೈಗಾರಿಕೆಗಳಿಗೆ ನೆರವು.

(ಇ) ಸೇವಾಕ್ಷೇತ್ರದಲ್ಲಿ ಜ್ಞಾನಾಧಾರಿತ ಕೈಗಾರಿಕೆಗಳಿಗೆ ಒತ್ತಾಸೆ.

(ಎಫ್) ಬೆಳವಣಿಗೆಗೆ ಮೂಲ ಇಂಜಿನ್ ಆಗಿರುವ ಖಾಸಗಿ ಕ್ಷೇತ್ರದ ಸಹಯೋಗದೊಡನೆ ಮಾರುಕಟ್ಟೆ ಆಧಾರಿತ ಪರಿಸರದ ಸೃಷ್ಟಿ.

(ಜಿ) ಕೈಗಾರಿಕೆಗಳಿಗೆ ಉನ್ನತ ಗುಣಮಟ್ಟದ ಮೂಲಭೂತ ಸೌಕರ್ಯಗಳನ್ನು ನೀಡುವುದು.

(ಹೆಚ್) ಸಣ್ಣ ಕೈಗಾರಿಕಾ ಕ್ಷೇತ್ರದ ಸಾಮರ್ಥ್ಯದ ಬಳಕೆ ಹಾಗೂ ಉದ್ಯೋಗ ಸೃಷ್ಟಿ ಮತ್ತು ಸ್ಥಳೀಯ ಸಂಪನ್ಮೂಲ ಬಳಕೆಯ ಉಭಯ ಸಾಧನೆಗಾಗಿ ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಹೊಸ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಉತ್ತೇಜನ.

ಇದಕ್ಕಾಗಿ ಸರ್ಕಾರವು, ರಾಜ್ಯದ ಸಣ್ಣ ಕೈಗಾರಿಕಾ ಕ್ಷೇತ್ರದ ಪ್ರಸಕ್ತ ಪರಿಸ್ಥಿತಿ, ಸಮಸ್ಯೆಗಳು ಮತ್ತು ಅವಕಾಶಗಳು ವಿಚಾರದಲ್ಲಿ ನಿರ್ದಿಷ್ಟ ಮಾಹಿತಿ ಪಡೆಯಲು ಸಣ್ಣ ಕೈಗಾರಿಕಾ ಕ್ಷೇತ್ರ ಬಗ್ಗೆ ವಿವರವಾದ ಅಧ್ಯಯನವೊಂದನ್ನು ಪರಿಣತರ ತಂಡದ ಮೂಲಕ ನಡೆಸಲಿದೆ. ಕೈಗಾರಿಕಾ ಕ್ಷೇತ್ರದಲ್ಲಿ ಉದ್ಯೋಗಾವಕಾಶ ಸೃಷ್ಟಿಗಾಗಿ ಪ್ರತ್ಯೇಕವಾದ ನೀತಿಯೊಂದನ್ನು ಹೊರತರಲಿದ್ದು, ಈ ನೀತಿ ಸಹಾ ಇತರ ವಿಚಾರಗಳೊಡನೆ, ಉದ್ಯೋಗಾವಕಾಶ ಸೃಷ್ಠಿಗೆ ಹೊಂದಿಕೊಂಡಂತೆ ಸೂಕ್ತ ಉತ್ತೇಜನ ಯೋಜನೆಗಳನ್ನು ಒಳಗೊಂಡಿದೆ.

**ಕಾರ್ಯ ತಂತ್ರ**

ಈ ಉದ್ದೇಶಗಳನ್ನು ಸಾಧಿಸಲು ಈ ಕೆಳಗಿನ ಕಾರ್ಯ ತಂತ್ರಗಳನ್ನು ಅನುಸರಿಸಲಾಗುವುದು

(ಎ) ಹೆಚ್ಚುತ್ತಿರುವ ಮಾರುಕಟ್ಟೆ ಆಧಾರಿತ ನಿರ್ಧಾರ ಕ್ರಮಗಳನ್ನು ಸಾಧ್ಯವಾಗಿಸಲು ಕೈಗಾರಿಕಾ ನೀತಿಯ ಎಲ್ಲಾ ವಿಚಾರಗಳ ಮತ್ತು ಅದರ ಅನುಷ್ಠಾನದಲ್ಲಿ ಖಾಸಗಿ ಕ್ಷೇತ್ರದೊಡನೆ ಸದೃಢವಾದ ಪಾಲುದಾರಿಕೆಯನ್ನು ಸಾಧಿಸುವುದು.

(ಬಿ) ಕೈಗಾರಿಕೆಗಳಲ್ಲಿ ಸ್ಪರ್ಧಾತ್ಮಕ ಶಕ್ತಿಯನ್ನು ಹೆಚ್ಚಿಸಲು ಮತ್ತು ವ್ಯವಹಾರವನ್ನು ಸುಲಲಿತವಾಗಿ ಮಾಡಲು ಅನುಕೂಲವಾಗುವ ನೀತಿ ಚೌಕಟ್ಟನ್ನು ಸೃಷ್ಟಿಸುವುದು.

(ಸಿ) ಸಮರ್ಥವಾದ ಮತ್ತು ಸ್ಪರ್ಧಾತ್ಮಕವಾದ ಕೈಗಾರಿಕಾ ಮೂಲಭೂತ ಸೌಕರ್ಯ ನಿರ್ಮಾಣಕ್ಕಾಗಿ ಸಾರ್ವಜನಿಕ ಮತ್ತು ಖಾಸಗಿ ಹಣ ಹೂಡಿಕೆಯನ್ನು ಅಧಿಕಗೊಳಿಸುವುದು.

(ಡಿ) ಸರಕಾರಿ, ಶೈಕ್ಷಣಿಕ, ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು ಮತ್ತು ಕೈಗಾರಿಕೆಗಳ ನಡುವಣ ಪರಸ್ಪರ ಅನುಕೂಲಕರ ಸಾಂಸ್ಥಿಕ ವ್ಯವಸ್ಥೆಯ ಮೂಲಕ ತಂತ್ರಜ್ಞಾನ ಉನ್ನತೀಕರಣಕ್ಕೆ ಒತ್ತಾಸೆ ನೀಡುವುದು.

(ಇ) ಮಾಹಿತಿ ತಂತ್ರಜ್ಞಾನ, ಬಯೋಟೆಕ್ನಾಲಜಿ, ಆಹಾರ ಸಂಸ್ಕರಣೆ, ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್, ಗಾರ್ಮೆಂಟ್ಸ್, ಮೆಷಿನ್‌ಟೂಲ್ಸ್ ಮತ್ತು ಪ್ರಿಸಿಷನ್ ಇಂಜಿನಿಯರಿಂಗ್ ಗೂಡ್ಸ್ ಕ್ಷೇತ್ರದಲ್ಲಿ ರಫ್ತನ್ನು ಅಧಿಕಗೊಳಿಸುವುದರ ಮೂಲಕ ಕರ್ನಾಟಕವು ಜಾಗತಿಕ ಮಾರುಕಟ್ಟೆಯಲ್ಲಿ ಹೊಂದಿರುವ ಅವಕಾಶದ ಹೆಚ್ಚಳಕ್ಕೆ ಗಮನ ನೀಡುವುದು.

(ಎಫ್) ಹೆಚ್ಚುತ್ತಿರುವ ಸ್ಪರ್ಧೆಯನ್ನು ಎದುರಿಸಲು ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ವಲಯದ ಕೈಗಾರಿಕೆಗಳಿಗೆ ತಂತ್ರಜ್ಞಾನ ಮತ್ತು ಉತ್ಪಾದನಾ ವಿಧಾನದ ಉನ್ನತೀಕರಣಕ್ಕೆ ನೆರವು.

(ಜಿ) ರಾಜ್ಯ ಸಾರ್ವಜನಿಕ ಕೈಗಾರಿಕೆಗಳು, ಸರಕಾರೀ ಮೂಲಭೂತ ಸೌಕರ್ಯ ನಿರ್ಮಾಣ ಸಂಸ್ಥೆಗಳು ಮಾತ್ರವಲ್ಲ ಹಣಕಾಸು ಸಂಸ್ಥೆಗಳನ್ನು ಖಾಸಗಿ ಕ್ಷೇತ್ರದ ಪಾಲುದಾರಿಕೆಯ ಮೂಲಕ ಆಮೂಲಾಗ್ರವಾಗಿ ಪುನರ್ರಚಿಸುವುದು.